ಸಂಪುಟ: 04 ಸಂಚಿಕೆ: 262 ಪುಟಗಳು: 08 ಗುರುವಾರ 05 ಡಿಸೆಂಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಶಕ್ತಿಯಲ್ಲ ನಿಮ್ಮೊಳಗೇ ಇದೆ, ನೀವು ಏನು ಬೇಕಾದರೂ ಮಾಡಬಲ್ಲಿರಿ ಎಲ್ಲಾವನ್ನೂ ಮಾಡಬಲ್ಲಿರಿ.

## ವಿಜಯೇಂದ್ರ ಕೆಳಗಿಳಿಸಲು ಆಗಲ್ಲ ಯತ್ನಾಳ್‌ಗೆ ರಾಮುಲು ಟಾಂಗ್

• ಉದಯವಾಹಿನಿ, ಬೀದರ್

ಯಾರೇ ಹೇಳಿದರೂ ವಿಜಯೇಂದ್ರರನ್ನು ಕೆಳಗಿಳಿಸಲು ಆಗಲ್ಲ, ಒಂದು ಸಾರಿ ಅಧ್ಯಕ್ಷರಾದರೆ ಎಲ್ಲಾರೂ ಒಪ್ಪಿಕೊಳ್ಳಲೇಬೇಕು ಎಂದು ಮಾಜಿ ಸಚಿವ ಶ್ರೀರಾಮುಲು ಬಿವೈ ವಿಜಯೇಂದ್ರ ಪರ ಬ್ಯಾಟಿಂಗ್ ಮಾಡಿದ್ದಾರೆ. ಜಿಲ್ಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯಲ್ಲಿ ಈಗ ಎರಡು ಬಣಗಳು ಇರಬಹುದು. ಆದರೆ ಎಲ್ಲಾ ಭಿನ್ನಮತವನ್ನು ಹೈಕಮಾಂಡ್ ಸರಿಪಡಿಸುತ್ತದೆ. ಯತ್ನಾಳ್ ಮೇಲೆ ಯಾವುದೇ ಶಿಸ್ತು ಕ್ರಮವಾಗಲ್ಲ. ಯಾಕೆಂದರೆ ಅವರು ವೈಯಕ್ತಿಕ ಹೋರಾಟ ಮಾಡುತ್ತಿಲ್ಲ. ಹೀಗಾಗಿ ಯತ್ನಾಳ್ ಉಚ್ಚಾಟನೆ ಪ್ರಶ್ನೆ ಇಲ್ಲ ಎಂದು ತೇಪೆ ಹಾಕಿದರು. ದೆಹಲಿಗೆ ತೆರಳಿದ ಆರ್.ಅಶೋಕ್ ವಿಚಾರವಾಗಿ ಮಾತನಾಡಿ, ಅಶೋಕ್ ಸೇರಿದಂತೆ ಎಲ್ಲಾರನ್ನು ಕರೆದು ಭಿನ್ನಮತದ ಬಗ್ಗೆ ಹೈಕಮಾಂಡ್ ಮಾಹಿತಿ ಪಡೆಯುತ್ತಿದೆ. ಎರಡು ಬಣಗಳಾಗಿದ್ದರೂ ನಮ್ಮ ಹೋರಾಟ ಒಂದಾಗಿದೆ. ಶಿಸ್ತು ಸಮಿತಿ ಮುಂದೆ ಯತ್ನಾಳ್ ಎಲ್ಲಾ ಸ್ಪಷ್ಟನೆ ನೀಡುತ್ತಾರೆ. ಮುಂದೆ ಎಲ್ಲಾ ಬಣಗಳು ಒಂದಾಗುತ್ತವೆ ಎಂದರು.

## ಪಕ್ಷದ ಆಂತರಿಕ ವಿಚಾರದಲ್ಲಿ ಗಮನ ಕೊಡಬೇಡಿ ಎಂದಿದ್ದಾರೆ

• ಉದಯವಾಹಿನಿ, ನವದೆಹಲಿ

ರಾಜ್ಯ ಬಿಜೆಪಿಯಲ್ಲಿ ಬಣ ಬಡಿದಾಟ ವಿಚಾರವಾಗಿ ಶಾಸಕ ಯತ್ನಾಳ ಬಿಜೆಪಿಯ ಕೇಂದ್ರ ಶಿಸ್ತು ಸಮಿತಿ ನೋಟಿಸ್ ನೀಡಿತ್ತು. ನವದೆಹಲಿಯಲ್ಲಿ ಕೇಂದ್ರ ಶಿಸ್ತು ಸಮಿತಿಯ ಅಧ್ಯಕ್ಷ ಓಂ ಪಾಟಕ್ ಅವರನ್ನು ಭೇಟಿಯಾದ ಯತ್ನಾಳ್ ಅವರು ಸುಮಾರು 6 ಪುಟಗಳಷ್ಟು ಉತ್ತರವನ್ನು ನೀಡಿದ್ದಾರೆ.ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ ಪಕ್ಷದ ಆಂತರಿಕ ವಿಚಾರದಲ್ಲಿ ಗಮನ ಕೊಡಬೇಡಿ ಅಂತ ಹೇಳಿದ್ದಾರೆ. ಎಂದು ತಿಳಿಸಿದರು. ಆಂತರಿಕ ವಿಚಾರ ಹೊರಗೆ ಮಾತನಾಡಬೇಡಿ ಎಂದಿದ್ದಾರೆ. ದೆಹಲಿಯಲ್ಲಿ ನಾನು ಅಧ್ಯಕ್ಷರನ್ನ ಭೇಟಿ ಮಾಡಿದ್ದ ಅಧ್ಯಕ್ಷರಿಗೆ ಒಂದು ಗಂಟೆ ಕಾಲ ವಿವರಣೆ ಕೊಟ್ಟಿದ್ದೇನೆ. ಪಕ್ಷದ ಆಂತರಿಕ ವಿಚಾರದಲ್ಲಿ ಗಮನ ಕೊಡಬೇಡಿ. ಕಾಂಗ್ರೆಸ್ ವಿರುದ್ಧದ ಹೋರಾಟಕ್ಕೆ ಗಮನ ಕೊಡಿ. ವರಿಷ್ಠರು ಹೀಗೆ ಅಂತ ನಮಗೆ ಹೇಳಿದ್ದಾರೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು. 1 ಗಂಟೆ 15 ನಿಮಿಷ ಕಾಲ ಎಲ್ಲಾ ಸವಿಸ್ತಾರವಾಗಿ ಹೇಳಿದ್ದೇನೆ ನಾನು ಹೇಳಿರುವ ಎಲ್ಲಾವನ್ನು ಸ್ವೀಕರಿಸಿದ್ದಾರೆ. ಪಕ್ಷದ ಹಿತದ ದೃಷ್ಟಿಯಿಂದ ಎಲ್ಲಾ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ ವಕ್ಫ್ ವಿರುದ್ಧದ ಹೋರಾಟಕ್ಕೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

## 'ಇಡಿ' ಅನ್ನೋ 'ಸೀಳು ನಾಯಿ'ಯನ್ನ ನಮ್ಮ ಮೇಲೆ ಬಿಟ್ಟಿದ್ದಾರೆ

• ಉದಯವಾಹಿನಿ, ಗದಗ

ಮುಡಾ ಹಗರಣಕ್ಕೆ ಸಂಬಂಧ ಪಟ್ಟಂತೆ ಇಡಿ ಅಧಿಕಾರಿಗಳು ಲೋಕಾಯುಕ್ತಕ್ಕೆ ಪತ್ರ ಬರೆದಿರುವ ವಿಚಾರವಾಗಿ ಇದೀಗ ಕಾಂಗ್ರೆಸ್ ನಾಯಕರು, ಆಕ್ರೋಶ ಹೊರ ಹಾಕಿದ್ದು ಸಚಿವ ಕೃಷ್ಣ ಬೈರೇಗೌಡ ಅವರು ಇಡಿ ಎನ್ನುವ ಸೀಳು ನಾಯಿಯನ್ನು ನಮ್ಮ ಮೇಲೆ ಬಿಟ್ಟಿದ್ದಾರೆ ಎಂದು ಕಿಡಿಕಾರಿದ್ದಾರೆ. ಗದಗದಲ್ಲಿ ಮಾತನಾಡಿದ ಅವರು ರಾಜಕೀಯ ವಿರೋಧಿಗಳಿಗೆ ಹಿಟ್ ಅಂಡ್ ರನ್ ಮಾಡುವುದು ಅಷ್ಟೆ ಗೊತ್ತಿದೆ. ಕರ್ನಾಟಕದ ಉಪಚುನಾವಣೆಯಲ್ಲಿ 3 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದ ಮೇಲೆ ಇವತ್ತು ಬಿಜೆಪಿಯವರಿಗೆ ಸಹಿಸೋಕೆ ಆಗುತ್ತಿಲ್ಲ. ಚುನಾವಣೆಯಲ್ಲಿ ನಮ್ಮನ್ನು ಸೋಲಿಸೋಕೆ ಆಗಲಿಲ್ಲ. ಅದು ಅಸೆಂಬ್ಲಿ ಎಲೆಕ್ಷನ್ ಆಗ್ಲಿಲ್ಲ, ಬೈ ಎಲೆಕ್ಷನಲ್ಲೂ ಆಗಲಿಲ್ಲ ಅದಕ್ಕೆ ಇಡಿ ಎನ್ನುವ ಸೀಳು ನಾಯಿಯನ್ನು ನಮ್ಮ ಮೇಲೆ ಬಿಟ್ಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

## ಕುಟುಂಬ ರಾಜಕಾರಣ ಸಹಿಸಲ್ಲ:ಯತ್ನಾಳ್ ಗುಡುಗು

• ಉದಯವಾಹಿನಿ, ನವದೆಹಲಿ


ರಾಜ್ಯ ಬಿಜೆಪಿಯಲ್ಲಿ ನಡೆದಿರುವ ಬಣಕಿತ್ತಾಟ ಹೈಕಮಾಂಡ್ ಅಂಗಳ ತಲುಪಿರುವ ಬೆನ್ನಲ್ಲೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ವಿರುದ್ಧ ಮತ್ತೆ ಗುಡುಗಿದ್ದಾರೆ. ಕುಟುಂಬ ರಾಜಕಾರಣದ ವಿರುದ್ಧ ಹೋರಾಟ ನಿಲ್ಲುವುದಿಲ್ಲ ಎಂದು ಅವರು ಘೋಷಿಸಿದ್ದಾರೆ. ಪಕ್ಷದ ನಾಯಕತ್ವದ ವಿರುದ್ಧ ಸಮರ ಸಾರಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಪಕ್ಷದ ಶಿಸ್ತು ಸಮಿತಿ ವಿವರಣೆ ಕೇಳಿ ಶೋಕಾಸ್ ನೀಡಿತ್ತು. ಈ ನೋಟಿಸ್‌ಗೆ 10 ದಿನಗಳ ಒಳಗಾಗಿ ಉತ್ತರ ನೀಡುವಂತೆಯೂ ಗಡುವು ನೀಡಲಾಗಿತ್ತು. ಆದರೆ,ದೆಹಲಿಯಲ್ಲಿ ಬೀಡು ಬಿಟ್ಟಿರುವ ಯತ್ನಾಳ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ ಪಕ್ಷದಲ್ಲಿ ನಡೆಯುತ್ತಿರುವ ಕುಟುಂಬ ರಾಜಕಾರಣ, ಹಿರಿಯ ನಾಯಕರ ಕಡೆಗಣನೆ ಸೇರಿದಂತೆ ಇನ್ನಿತರ ಆಂತರಿಕ ವಿಚಾರಗಳ ಬಗ್ಗೆ ವರಿಷ್ಠರಿಗೆ ಪತ್ರದ ಮೂಲಕ ಬರೆದು ನೋಟಿಸ್‌ಗೆ ಉತ್ತರ ನೀಡಿದ್ದೇನೆ ಎಂದರು. ಪಕ್ಷದ ಹಿತದೃಷ್ಟಿಯಿಂದ ಎಲ್ಲಾ ಸಂಸದರು ಹೇಳಿಕೆ ನೀಡಿದ್ದಾರೆ.

ಆದರೆ, ಹೊಂದಾಣಿಕೆಯ ರಾಜಕೀಯದ ಮೂಲಕ ಕೆಲವರನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಈ ಬಗ್ಗೆ ಹೋರಾಟ ಮುಂದುವರೆಯಲಿದೆಎಂದು ಅವರು ಹೇಳಿದರು.

# ಸಿಎಂ ಸಿದ್ದರಾಮಯ್ಯ ಭವಿಷ್ಯ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣಕ್ಕೆ ಸಂಬಂಧಪಟ್ಟಂತೆ ರಾಜ್ಯಪಾಲರ ಅನುಮತಿ ಪ್ರಶ್ನಿಸಿ ಸಿಎಂ ಸಿದ್ದರಾಮಯ್ಯ ಅವರು ಮೇಲ್ಮನವಿ ಸಲ್ಲಿಸಿದ್ದರು. ಹೀಗಾಗಿ ನಾಳೆ ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ಸಿಎಂ ಸಿದ್ದರಾಮಯ್ಯ ಸಲ್ಲಿಸಿದ ಮೇಲ್ಮನವಿ ವಿಚಾರಣೆ ನಡೆಯಲಿದೆ. ಸಿಎಂ ಸಿದ್ದರಾಮಯ್ಯ ಅವರಿಗೆ ನಾಳೆ ಮಹತ್ವದ ದಿನವಾಗಿದೆ. ಈ ಮಧ್ಯೆ ಇಡಿಯಿಂದ ಲೋಕಾಯುಕ್ತ ಪೊಲೀಸ್ ಎಡಿಜಿಪಿಗೆ ಪತ್ರ ಬರೆದಿದ್ದು ಪಿಎಂಎಲ್ಐ ಕಾಯ್ದೆಯ ಸೆಕ್ಷನ್ 66 (2) ಅಡಿ ಮಾಹಿತಿ ಹಂಚಿಕೆಯಾಗಿದೆ. ಇಡಿಗೆ ಮಾಹಿತಿ ಹಂಚಿಕೊಳ್ಳುವ ಕಾನೂನಾತ್ಮಕ



ಅಧಿಕಾರವಿದೆ. ತನಿಖೆಯ ವೇಳೆ ಇತರ ಕಾಯ್ದೆಗಳ ಉಲ್ಲಂಘನೆಯಾಗಿದ್ದರೆ ಮಾಹಿತಿ ಹಂಚಿಕೊಳ್ಳುವ ಅಧಿಕಾರವಿದೆ. ಸಂಬಂಧಪಟ್ಟಂತಹ ತನಿಖಾ ಸಂಸ್ಥೆಗಳೊಂದಿಗೆ ಇಡಿ ಮಾಹಿತಿ ಹಂಚಿಕೊಳ್ಳಬಹುದು. ಸದ್ಯ ಲೋಕಾಯುಕ್ತ ಪೊಲೀಸರು ಮುಡಾ ಹಗರಣದ ತನಿಖೆ ನಡೆಸುತ್ತಿದ್ದಾರೆ. ಭ್ರಷ್ಟಾಚಾರ ತಡೆ ಕಾಯ್ದೆಯ ಅಡಿ ತನಿಖೆ ನಡೆಸುತ್ತಿದ್ದಾರೆ. ಹೀಗಾಗಿ ಮುಡಾ ಪ್ರಕರಣದ ಮಾಹಿತಿ ಇಡಿ ಹಂಚಿಕೊಂಡಿದೆ. ನಾಳೆ ಹೈ ಕೋರ್ಟ್ ವಿಭಾಗೀಯ ಪೀಠದಲ್ಲಿ ಇಡಿಗೆ ಸಂಬಂಧಿಸಿದ

**ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ಮೆಲ್ಮನವಿ ಅರ್ಜಿ ವಿಚಾರಣೆ**

ವಿಚಾರಣೆ ಇಲ್ಲ. ಆದರೆ ಇಡಿಯ ಪತ್ರವನ್ನು ಸಿಎಂ ಪರ ವಕೀಲರು ಪ್ರಸ್ತಾಪಿಸಬಹುದು. ಇಡಿ ನಡೆ ರಾಜಕೀಯ ಪ್ರೇರಿತವೆಂದು ಹೈಕೋರ್ಟ್‌ನಲ್ಲಿ ಪ್ರಸ್ತಾಪಿಸಬಹುದು. ಹಿಂದಿನ ಭೂಮಾಲಿಕ ದೇವರಾಜು ಕೂಡ ಮೇಲ್ಮನವಿ ಸಲ್ಲಿಸಿದ್ದಾರೆ.ದೇವರಾಜು ಪರ ವಕೀಲರು ಇಡಿ ಬರೆದಿರುವ ಪತ್ರವನ್ನು ಪ್ರಸ್ತಾಪಿಸಬಹುದು. ಆದರೆ ಇಂದು ವಿಚಾರಣೆ ಮುಖ್ಯವಾಗಿ ಗವರ್ನರ್ ಕ್ರಮವನ್ನೇ ಆಧರಿಸಿರುತ್ತದೆ. ಗವರ್ನರ್ ಅನುಮತಿ ನೀಡಿದ್ದು ಸೂಕ್ತವೇ ಅಥವಾ ಅಲ್ಲವೇ ಎಂಬ ಬಗ್ಗೆ, ವಾದ ಮಂಡನೆ ಆಗಲಿದೆ. ತನಿಖೆಗೆ ರಾಜ್ಯಪಾಲರ ಅನುಮತಿಯನ್ನು ಏಕ ಸದಸ್ಯ ಪೀಠ ಎತ್ತಿ ಹಿಡಿದಿದೆ. ಹೈಕೋರ್ಟ್ ಏಕ ಸದಸ್ಯ ಪೀಠದ ಆದೇಶವನ್ನು ಕೂಡ ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿ ಮೇಲ್ಮನೆ ಸಲ್ಲಿಸಿದ್ದಾರೆ. ಹೀಗಾಗಿ ನಾಳಿನ ವಿಚಾರಣೆಯ ಮೇಲೆ ಅಷ್ಟೇನೂ ಪರಿಣಾಮ ಬೀರುವುದಿಲ್ಲ. ಸಿಬಿಐ ತನಿಖೆ ಕೋರಿ ಸ್ನೇಹಮಯಿ ಕೃಷ್ಣ ಅರ್ಜಿ ಸಲ್ಲಿಸಿದ್ದಾರೆ. ಆ ಕೇಸಿನ ವಿಚಾರಣೆಯ ವೇಳೆ ಲೋಕಾಯುಕ್ತ ತನಿಖೆಯ ವರದಿಯನ್ನು ಸಲ್ಲಿಸಬೇಕು. ಆಗ ಇಡಿ ಬರೆದಿರುವ ಪತ್ರ ಮಹತ್ವ ಪಡೆಯುವ ಸಾಧ್ಯತೆ ಇದೆ. ಸಿಬಿಐ ತನಿಖೆಗೆ ವಹಿಸಬೇಕೆಂಬ ಪ್ರಶ್ನೆಗೆ ಇಡಿ ಬರೆದಿರುವ ಪತ್ರ ಉತ್ತರವಾಗಬಹುದು.

ಹಾಗಾಗಿ ಇಡಿ ಬರೆದಿರುವಂತಹ ಪತ್ರದಿಂದ ಸಿಎಂ ಸಿದ್ದರಾಮಯ್ಯ ಅವರಿಗೆ ಮತ್ತಷ್ಟು ಸಂಕಷ್ಟ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

# ಕೈ ಸಮಾವೇಶ ರೇವಣ್ಣಗೆ ಆವೇಶ




- ಜೆಡಿಎಸ್ ಪಕ್ಷವನ್ನೂ ಯಾರೇನೂ ಮಾಡಕ್ಕಾಗಲ್ಲ
- ಜನಕಲ್ಯಾಣದಂಥ ಹಲವಾರು ಸಮಾವೇಶ ನೋಡಿದ್ದೇನೆ: ಹೆಚ್ ಡಿ ರೇವಣ್ಣ
- ಏನೂ ಬೇಕಾದ್ರೂ ಮಾಡ್ಕೊಳಿ, ನಾನು ತಲೆಕೆಡಿಸಿಕೊಳ್ಳಲ್ಲ "
- ಕಾಂಗ್ರೆಸ್ ಸಮಾವೇಶಕ್ಕೆ ರೇವಣ್ಣ ತಿರುಗೇಟು

• ಉದಯವಾಹಿನಿ, ಬೆಂಗಳೂರು

ಹಾಸನದಲ್ಲಿ ಕಾಂಗ್ರೆಸ್ ನಡೆಸಲಿರುವ ಸಮಾವೇಶದ ಬಗ್ಗೆ ನಾವು ತಲೆ ಕೆಡಿಸಿಕೊಂಡಿಲ್ಲ. ಜೆಡಿಎಸ್ ಗುರಿಯಾಗಿಸಿಕೊಂಡು ಸಮಾವೇಶ ಮಾಡುವುದಾದರೆ ಮಾಡಲಿ ಎಂದು ಮಾಜಿ ಸಚಿವ ಹಾಗೂ ಶಾಸಕ ಹೆಚ್.ಡಿ.ರೇವಣ್ಣ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಜೆಡಿಎಸ್ ಗುರಿಯಾಗಿಟ್ಟುಕೊಂಡು ಏನೇನು ಮಾಡುತ್ತಾರೋ ಮಾಡಲಿ. ನಾವು ಕೂಡ ಇದಕ್ಕೆಲ್ಲ ತಯಾರಿದ್ದೇವೆ. 2028ರ ವಿಧಾನಸಭೆ ಚುನಾವಣೆಯಲ್ಲಿ ತಕ್ಕ ಉತ್ತರ ಕೊಡುತ್ತೇವೆ ಎಂದರು.

ಜೆಡಿಎಸ್ ಗುರಿ ಮಾಡಲು ಹೋಗಿ 2018ರ ವಿಧಾನಸಭೆ ಚುನಾವಣೆಯಲ್ಲಿ ಏನಾಯಿತು ಎಂಬುದು ಗೊತ್ತಿದೆ.ಆಗ ಕಾಂಗ್ರೆಸ್ನವರೇ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮತ್ತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಬಳಿ ಬರಬೇಕಾಯಿತು ಅಲ್ಲವೇ..? ಎಂದು ಅವರು ಪ್ರಶ್ನಿಸಿದರು.



**ಜನಕಲ್ಯಾಣ ಸಮಾವೇಶ ನಡೆಯಲಿ**

**ಹಾಸನದಲ್ಲಿ ಕಾಂಗ್ರೆಸ್ ಪಕ್ಷದ ಅದ್ದೂರಿ ಜನಕಲ್ಯಾಣ ಸಮಾವೇಶ ನಡೆಯಲಿದೆ. ದೆಹಲಿ ಪ್ರವಾಸದಲ್ಲಿರುವ ಹೊಳೆನರಸೀಪುರ ಶಾಸಕ ಹೆಚ್ ಡಿ ರೇವಣ್ಣ ಅವರನ್ನು ಈ ಬಗ್ಗೆ ಕೇಳಿದಾಗ; ಮಾಡಿಕೊಳ್ಳಲಿ, ಕಳೆದ 50 ವರ್ಷಗಳಲ್ಲಿ ಕಾಂಗ್ರೆಸ್ ಹಾಸನ ಜಿಲ್ಲೆಯನ್ನಂತೂ ಉದ್ಧಾರ ಮಾಡಲಿಲ್ಲ, ಇನ್ನಾದರೂ ಮಾಡಲಿ, ಹೆಚ್ ಡಿ ದೇವೇಗೌಡರ ಕುಟುಂಬವನ್ನು ಮುಗಿಸುವುದು ಸಾಧ್ಯವಿಲ್ಲ, ಲೋಕಸಭಾ ಚುನಾವಣೆಯಲ್ಲಿ ಏನು ನಡೆಯಿತು ಅಂತ ಎಲ್ಲಾರಿಗೂ ಗೊತ್ತಿದೆ, 6 ಬಾರಿ ಶಾಸಕನಾಗಿ ಆಯ್ಕೆಯಾಗಿರುವ ತಾನು ಇಂಥ ಹಲವಾರು ಸಮಾವೇಶಗಳನ್ನು ನೋಡಿದ್ದಾಗಿ ಹೇಳಿದರು.**



ದೇವೇಗೌಡರು,ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ,ನಾನು 2028ಕ್ಕೆ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ. ಕಾಂಗ್ರೆಸ್ನವರು ಸಮಾವೇಶ ಮಾಡಲಿ, ಜೊತೆಗೆ ಹಾಸನ ಜಿಲ್ಲೆಯನ್ನು ಇನ್ನಷ್ಟು ಅಭಿವೃದ್ಧಿ ಮಾಡಲಿ ತಕರಾರು ಏನೂ ಇಲ್ಲ. ಆದರೆ, ಕಳೆದ 50 ವರ್ಷದಲ್ಲಿ ಹಾಸನಕ್ಕೆ ಕಾಂಗ್ರೆಸ್ ಏನೂ ಮಾಡಿಲ್ಲ ಎಂದರು.

ಈಗಾಗಲೇ ನಾವು ಸೋಲು-ಗೆಲುವನ್ನು ಹಲವು ಬಾರಿ ನೋಡಿದ್ದೇವೆ. ಸಮಾವೇಶ ನಡೆಸುವುದಕ್ಕೆಲ್ಲಾ ನಾವು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಹಾಸನ ಹೊರ ವರ್ತುಲ ರಸ್ತೆ, ರೈಲ್ವೆ ಸೇತುವೆಗಳು ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರ ಸಚಿವರನ್ನು ಭೇಟಿ ಮಾಡಿ ನೆರವು ಕೋರಿರುವುದಾಗಿ ಅವರು ಹೇಳಿದರು. ನಮನ್ನು ಮುಗಿಸೋದು ದೇವರು ಮತ್ತು ಜನರು. ವಿಧಾನಸಭಾ ಚುನಾವಣೆ ನಡೆದ ಒಂದೇ ವರ್ಷಕ್ಕೆ ನಡೆದ ಲೋಕಸಭಾ ಚುನಾವಣೆಯಲ್ಲಿ ಏನಾಯಿತು ಎಂಬುದು ಎಲ್ಲಾರಿಗೂ ಗೊತ್ತಿದೆ ಎಂದು ಅವರು ತಿಳಿಸಿದರು.

**ಜೆಡಿಎಸ್ ಭದ್ರಕೋಟೆ ಛಿದ್ರ:** ಹಾಸನ ಜಿಲ್ಲೆಯ ಜೆಡಿಎಸ್ ಭದ್ರಕೋಟೆ. ಆದರೆ 2024ರ ಲೋಕಸಭೆ ಚುನಾವಣೆಯಲ್ಲಿ ಹಾಸನದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಸೋಲು ಕಂಡಿದ್ದಾರೆ. ಈ ಮೂಲಕ ಕ್ಷೇತ್ರವನ್ನು ಕಾಂಗ್ರೆಸ್ ತನ್ನ ವಶಕ್ಕೆ ಪಡೆದುಕೊಂಡಿದೆ. ಚುನಾವಣೆಯಲ್ಲಿ ಬಿಜೆಪಿ 19, ಕಾಂಗ್ರೆಸ್ 9 ಮತ್ತು ಜೆಡಿಎಸ್ 2 ಕ್ಷೇತ್ರಗಳಲ್ಲಿ ಜಯಗಳಿಸಿದೆ.

ರಾಜ್ಯದಲ್ಲಿ ಅಧಿಕಾರದಲ್ಲಿರುವ ಪಕ್ಷವಾದ ಕಾಂಗ್ರೆಸ್ ಎರಡಂಕಿ ಸ್ಥಾನ ಗೆಲ್ಲಲು ವಿಫಲವಾಗಿದೆ. ಆದರೆ ಹಾಸನದಲ್ಲಿ ಗೆಲುವು ಸಾಧಿಸುವ ಮೂಲಕ ಜೆಡಿಎಸ್‌ಗೆ ಬಿಸಿ ಮುಟ್ಟಿಸಿದೆ. ಹಾಸನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಎಂ. ಪಟೇಲ್ 6,72,988 ಮತಗಳನ್ನು ಪಡೆದು 42,649 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಎದುರಾಳಿಯಾಗಿದ್ದ ಬಿಜೆಪಿ-ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ 6,30,339 ಮತಗಳನ್ನು ಪಡೆದು ಸೋಲು ಕಂಡರು. ಈ ಮೂಲಕ 2019ರ ಚುನಾವಣೆಯಲ್ಲಿ ಗೆದ್ದಿದ್ದ ಕ್ಷೇತ್ರವನ್ನು 2024ರಲ್ಲಿ ಕಾಂಗ್ರೆಸ್‌ಗೆ ಜೆಡಿಎಸ್ ಬಿಟ್ಟುಕೊಟ್ಟಿದೆ.

### ಹೆಚ್ ಡಿ ಕುಮಾರಸ್ವಾಮಿ ತರಾಟೆ

**ಹೆಚ್ ಡಿ ಕುಮಾರಸ್ವಾಮಿ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಾ ತಮ್ಮ ಸಹೋದರ ಹೆಚ್ ಡಿ. ರೇವಣ್ಣರ ಪಕ್ಷ ವಹಿಸಿಕೊಂಡರು. ರೇವಣ್ಣರನ್ನು ಸುಳ್ಳು ಕೇಸಲ್ಲಿ ಫಿಕ್ಸ್ ಪ್ರಯತ್ನವನ್ನು ಮಾಡಿದರು, ಅವರು ಯಾವ ತಪ್ಪು ಮಾಡಿದ್ದರು..? ಒಬ್ಬ ಮಾಜಿ ಪ್ರಧಾನಿಯ ಮನೆಗೂ ಪೊಲೀಸರನ್ನು ನುಗ್ಗಿಸುವ ಹೀನ ಕೆಲಸವನ್ನು ಈ ಸರ್ಕಾರ ಮಾಡಿತ್ತು, ಲೋಕಸಭಾ ಚುನಾವಣೆ ಸಮಯದಲ್ಲಿ ಸಿಡಿ ಬಿಡುಗಡೆ ಮಾಡಿಸಿದ್ದರಲ್ಲ..? ತನಿಖೆ ನಡೆಸುತ್ತಿರುವ ಎಸ್‌ಐಟಿ ಏನು ಮಾಡುತ್ತಿದೆ..? ದೇವರಾಜೇಗೌಡನ ಜೊತೆ ಡಿಕೆ ಶಿವಕುಮಾರ್ ಮಾತಾಡಿದ್ದ ಆಡಿಯೋ ಟೇಪ್ ಎಲ್ಹೋಯ್ತು...? ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.**

**1** ರಾಜ್ಯದಲ್ಲಿ ಅಧಿಕಾರದಲ್ಲಿರುವ ಪಕ್ಷವಾದ ಕಾಂಗ್ರೆಸ್ ಎರಡಂಕಿ ಸ್ಥಾನ ಗೆಲ್ಲಲು ವಿಫಲ

**2** ಸಮಾವೇಶ ನಡೆಸುವುದಕ್ಕೆಲ್ಲಾ ನಾವು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ

**3** ಜೆಡಿಎಸ್ ಗುರಿಯಾಗಿಟ್ಟುಕೊಂಡು ಏನೇನು ಮಾಡುತ್ತಾರೋ ಮಾಡಲಿ.

### ಸಿದ್ದರಾಮಯ್ಯ ಪಾರಾಗಲು ಸಾಧ್ಯವೇ ಇಲ್ಲ

**ಮುಡಾ ಕೇಸಿನಲ್ಲಿ ಸಿದ್ದರಾಮಯ್ಯ ಅವರು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಅಲ್ಲಿ ಏನೆಲ್ಲಾ ನಡೆದಿದೆ ಎಂಬುದು ಹಾದಿ ಬೀದಿಯಲ್ಲಿ ಚರ್ಚೆ ನಡೆಯುತ್ತಿದೆ. ಈ ಸರಕಾರ ಮತ್ತು ಸಚಿವರು ಅಲಿಬಾಬಾ 40 ಕಳ್ಳರ ರೀತಿ ಇದ್ದಾರೆ. ಮುಡಾ ಅಕ್ರಮದ ಬಗ್ಗೆ ಜಾರಿ ನಿರ್ದೇಶನಾಲಯ ಲೋಕಾಯುಕ್ತಗೆ ಪತ್ರ ಬರೆದಿದೆ. ಇಡಿ ಪತ್ರಕ್ಕೂ ಕೇಂದ್ರ ಸರಕಾರಕ್ಕೂ ಏನ್ ಸಂಬಂಧ? ಮುಡಾ ಹಗರಣದ ಬಗ್ಗೆ ಹೈಕೋರ್ಟ್ ನಲ್ಲಿ ತನಿಖೆಗೆ ಆದೇಶ ಆಗಿದೆ. ಅದರ ಮೇಲೆ ತನಿಖೆ ನಡೆಯಿತ್ತಿದೆ. ಇಡಿಯವರಿಗೆ ಕೇಂದ್ರ ಸೂಚನೆ ಕೊಟ್ಟಿಲ್ಲ ಎಂದು ಅವರು ಸ್ಪಷ್ಟ ಮಾತುಗಳಲ್ಲಿ ಹೇಳಿದರು. ಮುಡಾ ಕೇಸಿನಲ್ಲಿ ರಾಜ್ಯಪಾಲರಿಗೆ ದೂರು ನೀಡಿದವರೇ ಇಡಿಗೂ ದೂರು ಕೊಟ್ಟಿದ್ದಾರೆ. ಮುಡಾದಲ್ಲಿ ಹಣಕಾಸು ವ್ಯವಹಾರ ನಡೆದಿರುವ ಹಿನ್ನಲೆಯಲ್ಲಿ ದೂರು ನೀಡಿದ್ದಾರೆ.**

## ಮುಡಾದಲ್ಲಿ 700 ಕೋಟಿ ಅವ್ಯವಹಾರ: ಬಡವರ ಸೈಟು ಶ್ರೀಮಂತರ ಪಾಲು

• ಉದಯವಾಹಿನಿ, ಕಲಬುರಗಿ

ಬಡವರ ಸೈಟ್‌ಗಳು ಶ್ರೀಮಂತರ ಪಾಲಾಗಿವೆ. ಬ್ರೋಕರ್‌ಗಳ ಮೂಲಕ ರಿಯಲ್ ಎಸ್ಟೇಟ್‌ಗಳ ಪಾಲಾಗಿವೆ ಎಂದು ಮುಡಾ ಹಗರಣ ಬಗ್ಗೆ ಸಿಎಂ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಾಗ್ದಾಳಿ ನಡೆಸಿದರು. ಮುಡಾದಲ್ಲಿ 700 ಕೋಟಿ ಅವ್ಯವಹಾರದ ಬಗ್ಗೆ ಇಡಿ ವರದಿ ಕೇಸ್ ಕುರಿತು ಕಲಬುರಗಿಯಲ್ಲಿ ಮಾತನಾಡಿದ ಅವರು, ಇ.ಡಿ ರಾಜಕೀಯ ಪ್ರೇರಿತವಾಗಿ ಕಾಂಗ್ರೆಸ್ ಅವರನ್ನ ಟಾರ್ಗೆಟ್ ಮಾಡ್ತಿದೆ ಅಂತಾ ಇವತ್ತೋ ನಾಳೆಯೋ ಮುಖ್ಯಮಂತ್ರಿ ಹೇಳಿಕೆ ಕೊಡಬಹುದು. ಮುಡದಲ್ಲಿ ಹಗರಣ ಆಗಿಲ್ಲ ಅಂತಾ ಸಿಎಂ ಹೇಳಿದ್ರು. ನಾವು ಕೂಡ ಹೋರಾಟ ಮಾಡಿದ್ದೇವೆ. ಬ್ರೋಕರ್‌ಗಳ ಮೂಲಕ ರಿಯಲ್ ಎಸ್ಟೇಟ್‌ಗಳ ಪಾಲಾಗಿವೆ. ಬಡವರ ಸೈಟ್‌ಗಳು ಶ್ರೀಮಂತರ ಪಾಲಾಗಿವೆ. ಮೊದಲ ಹಂತದಲ್ಲಿ





ಇ.ಡಿ 700 ಕೋಟಿಯಲ್ಲಿ ಅವ್ಯವಹಾರ ಆಗಿದೆ ಅಂತ ಹೇಳಿದೆ. ಕಾನೂನು ಬಾಹಿರವಾಗಿ ಸೈಟ್‌ಗಳನ್ನ ಹಂಚಿಕೆ ಮಾಡಲಾಗಿದೆ ಅನ್ನೋದು ಇ.ಡಿ ವರದಿ ನೀಡಿದೆ ಎಂದು ತಿಳಿಸಿದರು. ವಕ್ಫ್ ವಿವಾದ ಕುರಿತು ಮಾತನಾಡಿ, ರಾಜ್ಯದಲ್ಲಿ ಕೆಲವು ತಿಂಗಳಿನಿಂದ ರೈತರ ಜಮೀನು, ಮಠ-ಮಂದಿರಗಳ ಜಾಗವನ್ನು ವಕ್ಫ್ ಕಬಳಿಸುವ ಹುನ್ನಾರ ನಡೆದಿದೆ. ಹೀಗಾಗಿ, ವಕ್ಫ್ ವಿರುದ್ಧ ಹೋರಾಟ ಇಟ್ಟುಕೊಂಡಿದ್ದೇವೆ ಎಂದು ಸ್ಪಷ್ಟಪಡಿಸಿದರು.ಆರ್. ಅಶೋಕ್ ದೆಹಲಿ ಪ್ರವಾಸ ಕುರಿತು ಮಾತನಾಡಿ, ಆರ್. ಅಶೋಕ್ ಅವರು ವಿಪಕ್ಷ ನಾಯಕರಿದ್ದಾರೆ. ವರಿಷ್ಠರ ಭೇಟಿಗೆ ದೆಹಲಿಗೆ ಹೋಗಿರಬಹುದು. ಅದರ ಬಗ್ಗೆ ನಂಗೆ ಮಾಹಿತಿ ಇಲ್ಲ ಎಂದರು.ಬಣ ಫೈಟ್ ಬಗ್ಗೆ ಮಾತನಾಡಿ, ಡಿ.7 ರಂದು ಕೋರ್ ಕಮೀಟಿ ಸಭೆ ಇದೆ. ಅವತ್ತು ಎಲ್ಲಾವೂ ಸರಿ ಹೋಗುತ್ತೆ. ಯತ್ನಾಳ್, ಸೋಮಶೇಖರ್ ಬಗ್ಗೆ ದಿನ ಬೆಳಗಾದ್ರೆ ಮಾತನಾಡೋಕೆ ಹೋಗಲ್ಲ ಎಂದು ಗರಂ ಆದರು. ಯಡಿಯೂರಪ್ಪ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ವಿಚಾರವಾಗಿ ಪ್ರತಿಕ್ರಿಯಿಸಿ, ಯಡಿಯೂರಪ್ಪ ಕಂಡ್ರೆ ಇನ್ನೂ ಸಿಎಂಗೆ ಭಯ. ಯಡಿಯೂರಪ್ಪ ಒಬ್ಬ ಹೋರಾಟಗಾರ. ಹಾಗಾಗಿ ಸಿಎಂ ಮತ್ತು ಸರ್ಕಾರಕ್ಕೆ ಭಯ. ಈ ನಿಟ್ಟನಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿದ್ದಾರೆ. ನಾವು ಯಾವುದಕ್ಕೂ ಹೆದುರುವ ಬಗ್ಗುವ ಮಾತೆ ಇಲ್ಲ ಎಂದು ತಿಳಿಸಿದರು.

## ನಿವೇಶನ ಲಪಟಾಯಿಸಿ ಸಮಾವೇಶ ನಡೆಸಿದರೆ ಪಾಪ ಕಳೆಯುತ್ತದೆಯೇ :ಅಶೋಕ್ ವ್ಯಂಗ್ಯ

• ಉದಯವಾಹಿನಿ, ಬೆಂಗಳೂರು

ಹಾಸನದಲ್ಲಿ ಸ್ವಾಭಿಮಾನಿ ಸಮಾವೇಶ ನಡೆಸಿದರೆ ಪಾಪ ಕಳೆದು ಹೋಗುತ್ತದೆಯೇ? ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ವ್ಯಂಗ್ಯವಾಡಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಸಿದ್ದರಾಮಯ್ಯರವರ ಪತ್ನಿಗೆ 14 ನಿವೇಶನ ಹಂಚಿಕೆ ಮಾಡುವಲ್ಲಿ ಹಲವು ಅಕ್ರಮಗಳು ನಡೆದಿರುವುದು ಇಡಿ ವರದಿಯಲ್ಲಿ ಬಹಿರಂಗವಾಗಿದೆ. ಮುಡಾ ಹಗರಣದಲ್ಲಿ ತಮ್ಮ ಪಾತ್ರವೇ ಇಲ್ಲ ಎಂದು ಹೇಳುತ್ತಿದ್ದ ಮುಖ್ಯಮಂತ್ರಿಗಳು, ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗಿದೆ ಎಂದು ಒತ್ತಾಯಿಸಿದರು. ನಮ್ಮ ದೇಶದಲ್ಲಿ ಇನ್ನೂ ಕಾನೂನು ಗಟ್ಟಿಯಾಗಿದೆ. ತರಾತುರಿಯಲ್ಲಿ ಲೋಕಾಯುಕ್ತ ತನಿಖೆ ಮುಗಿಸಿ ಕ್ಲೀನ್ ಚಿಟ್ ಪಡೆದುಕೊಂಡು ಜನರ ಕಣ್ಣಿಗೆ ಮಣ್ಣೆರೆಚುವ ನಿಮ್ಮ ತಂತ್ರ ಫಲಿಸುವುದಿಲ್ಲ. ಉಪ್ಪು ತಿಂದವರು ನೀರು ಕುಡಿಯಲೇ ಬೇಕು. ಸತ್ಯಮೇವ ಜಯತೇ ಎಂದು ಅವರು ಬರೆದುಕೊಂಡಿದ್ದಾರೆ.




# ಯಡಿಯೂರಪ್ಪ ಕಂಡರೆ ಸಿದ್ದರಾಮಯ್ಯ, ಕಾಂಗ್ರೆಸ್ ಸರ್ಕಾರಕ್ಕೆ ಭಯ

■ ಮಾಜಿ ಮುಖ್ಯಮಂತ್ರಿ, ಆದರೂ ಜನರ ಮನಸ್ಸಿನಲ್ಲಿದ್ದಾರೆ ■ ಅವರೊಬ್ಬ ರೈತ ನಾಯಕ, ಹೋರಾಟಗಾರ ■ ಅದಕ್ಕಾಗಿಯೇ ರಾಜಕೀಯ ಪ್ರೇರಿತ ಎಫ್‌ಐಆರ್ ಹಾಕುತ್ತಿದ್ದಾರೆ

• ಉದಯವಾಹಿನಿ, ಬೆಂಗಳೂರು

ಯಡಿಯೂರಪ್ಪ ಅವರನ್ನು ಕಂಡರೆ ಮುಖ್ಯಮಂತ್ರಿಗಳು, ಕಾಂಗ್ರೆಸ್ ಸರಕಾರಕ್ಕೆ ಭಯ ಇದೆ. ಅವರು ಮಾಜಿ ಮುಖ್ಯಮಂತ್ರಿ ಆದರೂ ಜನರ ಮನಸ್ಸಿನಲ್ಲಿದ್ದಾರೆ. ಅವರೊಬ್ಬ ರೈತ ನಾಯಕ, ಹೋರಾಟಗಾರ. ಅದಕ್ಕಾಗಿಯೇ ರಾಜಕೀಯಪ್ರೇರಿತ ಎಫ್‌ಐಆರ್ ಹಾಕುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ ವೈ ವಿಜಯೇಂದ್ರ ಅವರು ಹೇಳಿದರು. ಈ ಕುರಿತು ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಯಡಿಯೂರಪ್ಪ ಅವರು ಆವತ್ತೂ ಹೆದರಿಲ್ಲ, ಈಗಲೂ ಹೆದರಿ ಓಡಿ ಹೋಗುವುದಿಲ್ಲ. ಎಲ್ಲಾವನ್ನೂ ದಿಟ್ಟವಾಗಿ ಎದುರಿಸುತ್ತಾರೆ. ನಮ್ಮನ್ನು ಕಟ್ಟಿ ಹಾಕುವ ಪ್ರಯತ್ನದಲ್ಲಿ ಕಾಂಗ್ರೆಸ್ಸಿಗೆ ಯಶಸ್ಸು ಸಿಗುವುದಿಲ್ಲ ಎಂದರು. ಇದೇ 7ರಂದು ರಾಜ್ಯ ಕೋರ್ ಕಮಿಟಿ ಸಭೆ ನಡೆಯಲಿದೆ. ಎಸ್.ಟಿ.ಸೋಮಶೇಖರ್ ವಿಚಾರವೂ ಸೇರಿ ಎಲ್ಲಾ ವಿಚಾರಗಳನ್ನು ಚರ್ಚಿಸಿ ನಿರ್ಧರಿಸುತ್ತೇವೆ. ಪಕ್ಷದಲ್ಲಿ ಯಾರೆಷ್ಟೇ ದೊಡ್ಡ ಮುಖಂಡರಿದರೂ ಪಕ್ಷವಿರೋಧಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂಬ ಅಪೇಕ್ಷೆ ಹಿರಿಯರದು. 7ರಂದು ಚರ್ಚಿಸಿ ದೆಹಲಿಗೆ ವರದಿ ನೀಡುತ್ತೇವೆ ಎಂದು ಸ್ಪಷ್ಟಪಡಿಸಿದರು.



ಇನ್ನೂ ಯತ್ನಾಳ್ ಅವರ ಕುರಿತ ಹೈಕಮಾಂಡ್ ಗಮನಕ್ಕೆ ಎಲ್ಲಾವೂ ಬಂದಿದೆ. ನೋಟಿಸನ್ನು ಕೂಡ ಕೊಟ್ಟಿದ್ದಾರೆ. ಕೇಂದ್ರದ ವರಿಷ್ಠರ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಿರಬೇಕಾಗುತ್ತದೆ ಎಂದು ತಿಳಿಸಿದರು.ಇಡಿಯವರು ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯನ್ನು ಟಾರ್ಗೆಟ್ ಮಾಡುತ್ತಿದ್ದಾರೆ ಎಂಬ ಹೇಳಿಕೆಯನ್ನು ಇವತ್ತು ಅಥವಾ ನಾಳೆ ಮುಖ್ಯಮಂತ್ರಿಗಳಿಂದ ಅಥವಾ ಡಿಕೆ.ಶಿವಕುಮಾರರಿಂದ ನೀವು ನಿರೀಕ್ಷಿಸಬಹುದು ಎಂದು ಅವರು ಮುಡಾ ಅಕ್ರಮ, ಇಡಿ ವರದಿ ಕುರಿತು ಕೇಳಿದ ಪ್ರಶ್ನೆಗೆ ಉತ್ತರ ನೀಡಿದರು. ಮುಡಾ ಹಗರಣ ಕುರಿತು ಬಿಜೆಪಿ ಸದನದಲ್ಲಿ ಚರ್ಚಿಸಲು ಮುಂದಾಗಿತ್ತು. ದೇಸಾಯಿ ಕಮಿಟಿ ರಚಿಸಿದ್ದು, ಚರ್ಚೆಗೆ ಅವಕಾಶ ಕೊಡುವುದಿಲ್ಲ ಎಂದು ಕಾನೂನು ಸಚಿವ ಎಚ್‌ಕೆ ಪಾಟೀಲರು ಸದನದಲ್ಲಿ ಹೇಳಿ, ಚರ್ಚೆಗೆ ಅವಕಾಶ ಕೊಡಲಿಲ್ಲ ಎಂದು ಹೇಳಿದರು.

**ಸತ್ಯ ಇನ್ನಷ್ಟು ಹೊರಕ್ಕೆ**

**ಪ್ರಧಾನಮಂತ್ರಿ ನರೇಂದ್ರ ಮೋದಿಜೀ ಅವರು ವಕ್ಫ್ ವಿಷಯದಲ್ಲಿ ದೇಶದ ಯಾವುದೇ ರೈತರಿಗೆ ಅನ್ಯಾಯ ಆಗಬಾರದು, ವಕ್ಫ್ ಕಾಯಿದೆಗೆ ಸಮಗ್ರ ತಿದ್ದುಪಡಿ ಆಗಬೇಕೆಂಬ ಉದ್ದೇಶ ಹೊಂದಿದ್ದಾರೆ. ಅವರ ಆದೇಶದಂತೆ ಸಂಸತ್ತಿನ ಸಮಿತಿ ರಚಿಸಲಾಗಿದೆ. ಯತ್ನಾಳ್ ಸೇರಿ ಯಾರು ಬೇಕಾದರೂ ವಕ್ಫ್ ವಿಚಾರದಲ್ಲಿ ತೆರಳಿ ಅಹವಾಲು ಸಲ್ಲಿಸಬಹುದು**

**-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

### ರೈತರನ್ನು ಮರೆತ ಕೈ ಸರ್ಕಾರ

**ರಾಜ್ಯ ಸರಕಾರವು ಗ್ಯಾರಂಟಿಯಿಂದ ಜನರು ಸಂತೋಷವಾಗಿದ್ದಾರೆಂದು ರೈತರನ್ನು ಮರೆತಿದೆ ಎಂದು ಟೀಕಿಸಿದರು. ಕೃಷಿ ಸಚಿವರಿಗೆ ಸಮಯ ಸಿಕ್ಕಿದರೆ ಈ ಭಾಗಕ್ಕೆ ಬಂದು ರೈತರ ಸಮಸ್ಯೆ ಅರ್ಥ ಮಾಡಿಕೊಳ್ಳಲಿ ಎಕರೆಗೆ 25 ಸಾವಿರದಿಂದ 30 ಸಾವಿರ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಮುಖ್ಯಮಂತ್ರಿಗಳು- ಕೃಷಿ ಸಚಿವರು ಈ ಕಡೆ ಗಮನಿಸಬೇಕಿದೆ ಎಂದು ಆಗ್ರಹಿಸಿದರು.**

ಮೈಸೂರು ಮುಡಾ ಹಗರಣವು ಕೇವಲ ಮುಖ್ಯಮಂತ್ರಿಗಳ ಕುಟುಂಬಕ್ಕೆ 14 ನಿವೇಶನ ನೀಡಿಕೆಗಷ್ಟೇ ಸೀಮಿತವಾಗಿಲ್ಲ ಎಂದು ಬಿಜೆಪಿ ಆರಂಭದಲ್ಲೇ ತಿಳಿಸಿದೆ. 14 ನಿವೇಶನ ವಾಪಸಾತಿಗೆ 62 ಕೋಟಿ ಪರಿಹಾರ ಕೊಡಬೇಕೆಂದೂ ಮುಖ್ಯಮಂತ್ರಿಯವರು ಹೇಳಿದ್ದರು. ಬಡವರಿಗೆ ಕೊಡಬೇಕಿದ್ದ ಸಾವಿರಾರು ಕೋಟಿ ಮೊತ್ತದ ನಿವೇಶನಗಳು ಬ್ರೋಕರಳ, ರಿಯಲ್ ಎಸ್ಟೇಟ್‌ನವರ ಪಾಲಾಗಿದೆ ಎಂದು ನಾನು ಹೇಳಿದ್ದ ಎಂದು ತಿಳಿಸಿದರು. ಮುಡಾದಲ್ಲಿ ಹಗರಣವೇ ಆಗಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದ್ದರು. ಬಿಜೆಪಿ- ಜೆಡಿಎಸ್ ಪಾದಯಾತ್ರೆಯ ಬಳಿಕ ಸಿಎಂ ಪತ್ನಿಗೆ ಅಚಾನಕ್ಕಾಗಿ ಜ್ಞಾನೋದಯವಾಗಿ ನಿವೇಶನ ವಾಪಸ್ ಕುರಿತ ಅರ್ಜಿ ಸಲ್ಲಿಕೆ ಮಾಡಿದ್ದರು. ಇ.ಡಿ. ನಿಷ್ಪಕ್ಷಪಾತ ತನಿಖೆ ಮಾಡಿದೆ. 700 ಕೋಟಿಗೂ ಹೆಚ್ಚು ಮೌಲ್ಯದ ನಿವೇಶನಗಳು ಇದರಡಿ ಇವೆ ಎಂದು ಮೊದಲ ಹಂತದಲ್ಲಿ ಇ.ಡಿ. ತಿಳಿಸಿದೆ. 14 ನಿವೇಶನ ನೀಡಿಕೆ ವಿಚಾರದಲ್ಲಿ ಅಕ್ರಮಗಳು, ಫೋರ್ಜರಿ ಆಗಿದೆ. ವೈಟ್ನರ್ ಹಚ್ಚಿ ಅರ್ಜಿ ತಿದ್ದಿದ ಕುರಿತು ತಿಳಿಸಿದ್ದಾರೆ. ಕದ್ದ ಮಾಲನ್ನು ವಾಪಸ್ ಕೊಟ್ಟರೂ ಆರೋಪ ಮುಕ್ತರಾಗಲು ಸಾಧ್ಯವಿಲ್ಲ. ಇ.ಡಿ ತನಿಖೆ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಸತ್ಯ ಇನ್ನಷ್ಟು ಹೊರಕ್ಕೆ ಬರಲಿದೆ ಎಂದು ವಿಜಯೇಂದ್ರ ಹೇಳಿದರು. ವಕ್ಫ್ ವಿಷಯ ಮುಂದಿಟ್ಟು ರೈತರನ್ನು ಬೀದಿಗೆ ತರಲು ರಾಜ್ಯ ಸರಕಾರ ಕುಮ್ಮಕ್ಕು ಕೊಡುತ್ತಿದೆ. ವಕ್ಫ್ ಮೂಲಕ ರೈತರ ಮಠ, ಮಂದಿರಗಳ ಜಾಗ ಒತ್ತುವರಿಯ ವಿರುದ್ಧ ಬಿಜೆಪಿ ನಿರಂತರ ಹೋರಾಟ ಮಾಡಿದೆ.

**ಈ ದಿನದ ದರ** ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,778/Gram24ct ₹7,130/Gram22ct | ಬೆಳ್ಳಿ: ₹91.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

### ವಿವಾದಿತ ಮಂದಿರ ಮಸೀದಿಗಳು

ಎರಡನೆಯದಾಗಿ ಕಾಶಿಯ ಅಲಂಗೀರ್ ಮಸೀದಿ. ಮೊದಲು ಇಲ್ಲಿ ಪ್ರಾಚೀನವಾದ ಹಿಂದುಗಳ ಬಿಂದುಮಾಧವ ದೇವಾಲಯ ಇತ್ತು. 1682ರಲ್ಲಿ ಔರಂಗಜೇಬ್ ಇದನ್ನು ಕೆಡವಿ ಮಸೀದಿ ನಿರ್ಮಿಸಿದನೆಂದು ಹೇಳಲಾಗುತ್ತಿದೆ. ಮೂರನೆಯದಾಗಿ ಮಥುರಾದ ಶಾಹಿ ಈದ್ಗಾ ಮಸೀದಿ. ಹಿಂದುಗಳ ಆರಾಧ್ಯ ದೈವ ಕೃಷ್ಣಪರಮಾತ್ಮ ಹುಟ್ಟಿದ ಪವಿತ್ರ ಸ್ಥಳ ಮಥುರಾ. 5000 ವರ್ಷಗಳ ಹಿಂದೆ ಯಾದವರಿಂದ ನಿರ್ಮಾಣಗೊಂಡ ಇಲ್ಲಿನ ಕೃಷ್ಣ ದೇವಾಲಯವು ಎರಡನೆಯ ಚಂದ್ರಗುಪ್ತನ ಆಳ್ವಿಕೆಯಲ್ಲಿ ನವೀಕರಣಗೊಂಡು 1017 ರಲ್ಲಿ ಬೀರ್ ಸಿಂಗ್ ಬುಂದೇಲಾನಿಂದ ಕೆಡವಲ್ಪಟ್ಟು ಪುನರ್ನಿರ್ಮಾಣಗೊಂಡಿತ್ತು. ಮೊಘಲ್ ದೊರೆ ಔರಂಗಜೇಬ್ ಇದನ್ನು ನಾಶಪಡಿಸಿ ಇದರ ಮೇಲೆ ಈ ಶಾಹಿ ಈದ್ಗಾ ಮಸೀದಿಯನ್ನು ನಿರ್ಮಿಸಿದನೆಂದು ಹೇಳಲಾಗುತ್ತಿದೆ. ಮಸೀದಿಯ ಒಳಗೆ ಹಿಂದು ದೇವಾಲಯದ ಅವಶೇಷಗಳಿದ್ದು ಮುರಿದ ವಿರೂಪಗೊಂಡ ಶಿಲ್ಪಗಳು ದೊರೆತಿರುವುದಾಗಿ ತಿಳಿದುಬಂದಿದ್ದು ವಿವಾದ ಈಗ ನ್ಯಾಯಾಲಯದಲ್ಲಿದೆ. ಈ ಮಸೀದಿಯ ಮುಂಭಾಗದ ಈಗಿನ ಕೃಷ್ಣ ದೇವಾಲಯವನ್ನು 1965 ರಲ್ಲಿ ಹೊಸದಾಗಿ ನಿರ್ಮಿಸಲಾಗಿದೆ.

## ಬೆಂಗಳೂರಿನಲ್ಲಿ ಕಳ್ಳನ ಮೇಲೆ ಸೆಕ್ಯೂರಿಟಿ ಗಾರ್ಡ್ ನಿಂದ ಫೈರಿಂಗ್

• **ಉದಯವಾಹಿನಿ ಬೆಂಗಳೂರು**

ಬೆಂಗಳೂರಿನಲ್ಲಿ ಕಾರ್ಖಾನೆಯಲ್ಲಿ ಕಳ್ಳತನಕ್ಕೆ ಬಂದಿದ್ದ ಕಳ್ಳನ ಮೇಲೆ ಸೆಕ್ಯೂರಿಟಿ ಗಾರ್ಡ್ ಫೈರಿಂಗ್ ಮಾಡಿರುವ ಘಟನೆ ನಡೆದಿದೆ. ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಜಿಗಣಿಯ ಸದರನ್ ಕಾರ್ಖಾನೆಯಲ್ಲಿ ಕಳ್ಳತನಕ್ಕೆ ಬಂದಿದ್ದ ಕಳ್ಳನ ಮೇಲೆ ಸೆಕ್ಯೂರಿಟಿ ಗಾರ್ಡ್ ಆಗಿದ್ದ ಸುರೇಶ್ ಅವರು ಫೈರಿಂಗ್ ಮಾಡಿದ್ದಾರೆ. ತಡರಾತ್ರಿ 2.30 ರ ಸುಮಾರಿಗೆ ಕಾರ್ಖಾನೆಗೆ ನುಗ್ಗಿ ತಾಮ್ರ, ಬ್ಯಾಟರಿ ಕದಿಯಲು ಕಳ್ಳ ಯತ್ನಿಸಿದ್ದಾನೆ. ಈ ವೇಳೆ ಸೆಕ್ಯೂರಿಟಿ ಗಾರ್ಡ್ ಎಚ್ಚರಿಕೆ ನೀಡಿದ್ದಾರೆ. ಆದರೆ ಕಳ್ಳ ಕದ್ದ ಮಾಲ್ ಜೊತೆಗೆ ಎಸ್ಕೇಪ್ ಆಗುವಾಗ ಸುರೇಶ್ ಕಳ್ಳನ ಕಾಲಿಗೆ ಗುಂಡು ಹಾರಿಸಿದ್ದಾರೆ. ಜಿಗಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹೊಸ ಕೈಗಾರಿಕೆ ನೀತಿ ಜಾರಿ : 7.5 ಲಕ್ಷ ಕೋಟಿ ರೂ. ಹೂಡಿಕೆ, 20 ಲಕ್ಷ ಉದ್ಯೋಗ ಸೃಷ್ಟಿ

• **ಉದಯವಾಹಿನಿ ಬೆಂಗಳೂರು**

ರಾಜ್ಯದಲ್ಲಿ ನೂತನ ಕೈಗಾರಿಕೆ ನೀತಿ 2025 ರ ಜನವರಿಯಲ್ಲಿ ಜಾರಿಗೆ ಬರಲಿದ್ದು, ರಾಜ್ಯದೆಲ್ಲೆಡೆ ಉದ್ಯಮ ಸ್ಥಾಪಿಸಿ, ಉದ್ಯೋಗ ಸೃಷ್ಟಿಸಲಾಗುವುದು ಎಂದು ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಸಚಿವರು, ರಾಜ್ಯದೆಲ್ಲೆಡೆ ಉದ್ಯಮ ಸ್ಥಾಪನೆ-ಉದ್ಯೋಗ ಸೃಷ್ಟಿ ಮಾಡಲಾಗುವುದು. ಮುಂದಿನ 5 ವರ್ಷಗಳ ಅವಧಿಯಲ್ಲಿ ರೂ.7.5 ಲಕ್ಷ ಕೋಟಿ ಹೂಡಿಕೆ, 20ಲಕ್ಷ ನೂತನ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೇಳಿದ್ದಾರೆ. ಬೆಳವಣಿಗೆ ಗುರಿ ಹೊಂದಲಾಗಿದೆ. 5 ವರ್ಷದಲ್ಲಿ 7.5 ಲಕ್ಷ ಕೋಟಿ ರೂ. ಬಂಡವಾಳದ ನಿರೀಕ್ಷೆ ಮಾಡಲಾಗುತ್ತಿದೆ. ಇದರಿಂದ 20 ಲಕ್ಷ ಉದ್ಯೋಗ ಸೃಷ್ಟಿಯಾಗಬಹುದೆಂದು ಅಂದಾಜು ಮಾಡಲಾಗಿದೆ. ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮತೋಲನ ಕಡೆಗಾಣಿಸುವ ಮಹತ್ವಕಾಂಕ್ಷೆ ಇದೆ. ಏಕಗವಾಕ್ಷಿ ಪದ್ಧತಿಯಲ್ಲಿ ಡಿಜಿಟಲೀಕರಣ ಉದ್ದೇಶವನ್ನು ಹೊಸ ನೀತಿ ಒಳಗೊಂಡಿದೆ.

## ಜೆಸಿಐ ಅಧ್ಯಕ್ಷ ಅಧಿಕಾರ ಸ್ವೀಕಾರ ಸಮಾರಂಭ

• **ಉದಯವಾಹಿನಿ ದೇವನಹಳ್ಳಿ**

ಪಟ್ಟಣದ ಯಲುವಹಳ್ಳಿ ರಸ್ತೆಯಲ್ಲಿ ಪುರಸಭೆ ಸದಸ್ಯ ಬೈರೇಗೌಡ ಅವರ ಮನೆ ಆವರಣದಲ್ಲಿ ಡಿ.4ರಂದು ಸಂಜೆ 5ಕ್ಕೆ ಜೇಸಿಐ ವಿಜಯಪುರ ವಲಯ-14, 40ನೇ ವರ್ಷದ ನೂತನ ಪದಾಧಿಕಾರಿಗಳ ಪದವಿ ಸ್ವೀಕಾರ ಸಮಾರಂಭ ಆಯೋಜಿಸಲಾಗಿದೆ. ಪುರಸಭೆ ಮುಖ್ಯಾಧಿಕಾರಿ ಜಿ.ಆರ್.ಸಂತೋಷ್ ಸಮಾರಂಭ ಉದ್ಘಾಟಿಸಲಿದ್ದಾರೆ. ಜೇಸಿ ಜೆ.ಎಫ್ಎಂ ವಿಜಯಕುಮಾರ್ ನೂತನ ಅಧ್ಯಕ್ಷೆ ಶೀಲಾಬೈರೇಗೌಡ ಅವರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ ಎಂದು ಜೇಸಿಐ ಅಧ್ಯಕ್ಷ ಬೈರೇಗೌಡ ತಿಳಿಸಿದರು.

## ಮಾರನಗೆರೆಯಲ್ಲಿ ವೀರಗಲ್ಲು ಪತ್ತೆ

• **ಉದಯವಾಹಿನಿ ಹೊಸಕೋಟೆ**

ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿ ಗಣಗಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿ ಮಾರನಗೆರೆಯಲ್ಲಿ ಹೊಯ್ಸಳರ ಕಾಲಕ್ಕೆ ಸೇರಿದೆ ಎನ್ನಲಾದ ವೀರಗಲ್ಲೊಂದು ಈಚೆಗೆ ಪತ್ತೆಯಾಗಿದೆ. ಅರ್ಧ ಚಂದ್ರಾಕೃತಿ ಆಯುಧ ಜತೆಗೆ ಭರ್ಜಿ ಹಿಡಿದು ನಿಂತಿರುವ ಭಂಗಿಯಲ್ಲಿ ವೀರನೊಬ್ಬ ನಿಂತಿರುವ ಚಿತ್ರ ಈ ವೀರಗಲ್ಲಿನಲ್ಲಿ ಕಾಣಬಹುದಾಗಿದೆ.



ಪುಷ್ಪ ಎರಚಿ ಸನ್ಮಾನಿಸುತ್ತಿರುವ ಅಥವಾ ಯುದ್ಧ ಪೂಜೆ ಮಾಡುತ್ತಿರುವ ಸ್ತ್ರೀ ಶಿಲ್ಪಗಳನ್ನು ಕೆಳಭಾಗದಲ್ಲಿ ಚಿತ್ರಿಸಲಾಗಿದೆ. ಮೇಲ್ಭಾಗದಲ್ಲಿ ಒಂದು ಕಡೆ ದೇವಿ ಶಿಲ್ಪ ಮತ್ತೊಂದು ಕಡೆ ಗೋಪಾಲ ಕೃಷ್ಣನ ಶಿಲ್ಪ ಬಿಡಿಸಲಾಗಿದೆ. ಗೋಪಿಕೃಷ್ಣನ ಕೆಳಭಾಗದಲ್ಲಿ ಹಸು ಬಿಡಿಸಲಾಗಿದೆ. ನಾಲ್ಕು ಅಡಿ ಉದ್ದ, ಮೂರು ಅಡಿ ಅಗಲ, ಸುಮಾರು ಅರ್ಧ ಅಡಿ ದಪ್ಪ ಕಲ್ಲಿನಲ್ಲಿ ಉಬ್ಬು ಶಿಲ್ಪ ಮಾದರಿಯಲ್ಲಿ ವೀರನನ್ನು ಚಿತ್ರಿಸಲಾಗಿದೆ. ಇದನ್ನು ಮತ್ತಷ್ಟು ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ ಎನ್ನುತ್ತಾರೆ ಸಂಶೋಧಕ ವಿಜಯಶಂಕರ.

## ಹಿಟ್ & ರನ್ ಪ್ರಕರಣ : ತಾಯಿ ಸಾವು, ಮಗುವಿನ ಸ್ಥಿತಿ ಗಂಭೀರ

• **ಉದಯವಾಹಿನಿ ಬೆಂಗಳೂರು**

ಬೆಂಗಳೂರಿನಲ್ಲಿ ಎಷ್ಟೇ ಕಠಿಣವಾದ ಅಂತಹ ಸಂಚಾರ ನಿಯಮಗಳನ್ನು ತಂದರು ಕೂಡ ಆಗಾಗ ಅಪಘಾತಗಳು ಸಂಭವಿಸುತ್ತವೆ. ಇದೀಗ ಬೆಂಗಳೂರಿನಲ್ಲಿ ಮತ್ತೊಂದು ಹಿಟ್ ಅಂಡ್ ರನ್ ಪ್ರಕರಣ ನಡೆದಿದ್ದು, ಅಪಘಾತದಲ್ಲಿ ತಾಯಿ ಸಾವನ್ನಪ್ಪಿದ್ದು ಮಗುವಿನ ಸ್ಥಿತಿ ಗಂಭೀರವಾಗಿದೆ. ಘಟನೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ ಹೊರವಲಯದ ನಂದಿಮೋರಿ ಬಳಿ ನಡೆದಿದ್ದು, ನಗರದ ಪಾಲನಜೋಗಹಳ್ಳಿ ನಿವಾಸಿ ಭಾನುಪ್ರಿಯ (25) ಮೃತ ದುರ್ದೈವಿ. ಮನೋಜ್ (4) ಗಂಭೀರವಾಗಿ ಗಾಯಗೊಂಡ ಮಗು ಎಂದು ತಿಳಿದುಬಂದಿದೆ. ಶಾಲೆಯಿಂದ ಮಗುವನ್ನು ಕರೆದುಕೊಂಡು ಬರುವಾಗ ಈ ಒಂದು ಅಪಘಾತ ಸಂಭವಿಸಿದೆ ಎನ್ನಲಾಗಿದೆ. ತಾಯಿ ಭಾನುಪ್ರಿಯ ತಲೆಗೆ ತೀವ್ರ ಪೆಟ್ಟಾಗಿ ರಕ್ತ ಸಾವದಿಂದಾಗಿ ಸಾವನ್ನಪ್ಪಿದ್ದಾರೆ. ಮಗುವಿನ ತಲೆಗೆ ಗಂಭೀರ ಗಾಯವಾಗಿದ್ದು, ಬೆಂಗಳೂರಿನ ಆಸ್ಪತ್ರೆಗೆ ಚಿಕಿತ್ಸೆಗೆ ರವಾನಿಸಲಾಗಿದೆ. ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಮೃತ ದೇಹ ರವಾನಿಸಲಾಗಿದೆ. ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಘಟನೆ ಕುರಿತಂತೆ ಪ್ರಕರಣ ದಾಖಲಾಗಿದೆ. ಘಟನೆಯ ಬಳಿಕ ಚಾಲಕ ಪರಾರಿಯಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಅಧಿಕಾರ ಹಂಚಿಕೆ ಸೂತ್ರ ನಿಜ ಎಂದ ಡಿಕೆಶಿ: ಸಿಎಂ ಕೆಳಗಿಳಿಯುವುದು ಫಿಕ್ಸ್?

### ಎರಡೂವರೆ ವರ್ಷದ ಬಳಿಕ ಸಿದ್ದರಾಮಯ್ಯ ಸಿಎಂ ಸ್ಥಾನದಿಂದ ಕೆಳಗಿಯುತ್ತಾರಾ ಎನ್ನುವ ಅನುಮಾನ ಶುರು

• **ಉದಯವಾಹಿನಿ ಬೆಂಗಳೂರು**

ರಾಜ್ಯದಲ್ಲಿ ಮತ್ತೆ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಮುನ್ನಲೆಗೆ ಬಂದಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಬಹುಮತ ಪಡೆದು ಸರ್ಕಾರ ರಚನೆಯ ಸಂದರ್ಭದಲ್ಲಿ ಅಧಿಕಾರ ಹಂಚಿಕೆ ಸೂತ್ರದ ಲೆಕ್ಕಾಚಾರವಾಗಿತ್ತು ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹೇಳಿದ್ದು, ಎರಡುವರೆ ವರ್ಷದ ಬಳಿಕ ಸಿದ್ದರಾಮಯ್ಯ ಸಿಎಂ ಸ್ಥಾನದಿಂದ ಕೆಳಗಿಯುತ್ತಾರಾ ಎನ್ನುವ ಅನುಮಾನ ಶುರುವಾಗಿದೆ.

ಖಾಸಗಿ ವಾಹಿನಿಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಉಪಮುಖ್ಯಮಂತ್ರಿ, ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ ಕೆ ಶಿವಕುಮಾರ್ ಅವರು ಮಾತನಾಡಿ, ರಾಜ್ಯದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿ ಕುರ್ಚಿ ಖಾಲಿಯಿಲ್ಲ. ಆದರೆ, ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿ ನಮ್ಮ ನಡುವೆ ಒಪ್ಪಂದವಾಗಿದೆ.

ಅದನ್ನು ಈಗ ಬಹಿರಂಗಪಡಿಸಲಾಗದು ಎಂದು ಹೇಳುವ ಮೂಲಕ ಅಧಿಕಾರ ಹಸ್ತಾಂತರ ಕುರಿತು ವದಂತಿಗಳಿಗೆ ಮತ್ತೆ ಇಂಬು ನೀಡಿದ್ದಾರೆ. ಅದರಂತೆ ಕೆಲಸ ಮಾಡುತ್ತೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೂ ನನಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಉತ್ತಮ ಸಂಬಂಧವಿದ್ದು, ಆಡಳಿತಾತ್ಮಕವಾಗಿ ನನ್ನ ಸಲಹೆಗಳನ್ನು ಕೇಳಿ, ಚರ್ಚಿಸುತ್ತಾರೆ. ನಾನೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಲಹೆಯನ್ನು ಕೇಳಿ ಕೆಲಸ ಮಾಡುತ್ತಿದ್ದೇನೆ. ಸಿದ್ದರಾಮಯ್ಯ ಅವರಿಗೆ ಹೃದಯಪೂರ್ವಕವಾಗಿ ಬೆಂಬಲ ನೀಡುತ್ತಿದ್ದೇನೆ. ನಮ್ಮ ರಾಜಕೀಯ ಸ್ಥಾನಮಾನಗಳ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ. ನನಗೆ ಯಾವುದೇ ಜವಾಬ್ದಾರಿ ನೀಡಿದರೂ ಅದನ್ನು ನಿಭಾಯಿಸುತ್ತೇನೆ. ನಾನು ಯಾವತ್ತೂ ನಮ್ಮ ನಾಯಕರನ್ನು ಬೆದರಿಸುವ ಕೆಲಸಕ್ಕೆ ಹೋಗುವುದಿಲ್ಲ. ನಾನು ಕುಟುಂಬದವರನ್ನು ಅತಿಯಾಗಿ ಪ್ರೀತಿಸುತ್ತೇನೆ ಎಂದು ಹೇಳಿದರು. ಗಾಂಧಿ ಕುಟುಂಬಕ್ಕೆ ನನ್ನ ತಲೆಬಾಗುತ್ತದೆ. ನನ್ನ ನಿಷ್ಠೆಗೆ ಮುಂದೆ ಬಹುಮಾನ ಸಿಗುತ್ತದೆ ಎಂಬ ನಂಬಿಕೆಯಿದೆ.

ರಾಹುಲ್ ಗಾಂಧಿ ಅವರು ನಡೆಸಿದ ಭಾರತ್ ಜೋಡೋ ಯಾತ್ರೆಯಿಂದ ಬೆಲೆ ಏರಿಕೆ ಸೇರಿಜನರ ಸಮಸ್ಯೆ ಅರಿವಿಗೆ ಬಂತು. ಅಲ್ಲಿಂದಲೇ ಗ್ಯಾರಂಟಿ ಯೋಜನೆಗಳ ಪರಿಕಲ್ಪನೆ ಹುಟ್ಟಿಕೊಂಡಿತು. ಜನರ ಅಭಿವೃದ್ಧಿಗೆ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿವೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಮುಖ್ಯಮಂತ್ರಿ ಹುದ್ದೆ ಕುರಿತು ಸಚಿವ ಸಂಪುಟದ ಸಚಿವರ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ನನ್ನ ಸಂಪುಟ ಸಹದ್ಯೋಗಿಗಳಿಗೆ ಅಧಿಕಾರದ ಬಗ್ಗೆ ಬಹಿರಂಗ ಹೇಳಿಕೆ ನೀಡದಂತೆ ತಿಳಿಸಿದ್ದೇನೆ.

ಆದರೂ ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿಗಳಿಗೆ ಒಳ್ಳೆಯದಾಗಲಿ ಎಂದಷ್ಟೇ ಬಯಸುತ್ತೇನೆ. ಅಲ್ಲದೆ ಎಲ್ಲಾ ಹೇಳಿಕೆ ಸೇರಿ ಇನ್ನಿತರ ವಿಚಾರಗಳನ್ನು ಪಕ್ಷ ನಿಭಾಯಿಸುತ್ತದೆ ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹೇಳಿದರು.



> **ನಾನು ಮುಖ್ಯಮಂತ್ರಿ ಹುದ್ದೆ ಕುರಿತು ಸದ್ಯಕ್ಕೆ ಚರ್ಚೆ ಮಾಡುವುದಿಲ್ಲ. ನಾನೀಗ ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇನೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯ ವಿಲ್ಲ. ಆದರೆ ಅಧಿಕಾರಕ್ಕೆ ಸಂಬಂಧಿಸಿ ಒಪ್ಪಂದವಾಗಿದ್ದು ಅದನ್ನು ಬಹಿರಂಗವಾಗಿ ಚರ್ಚೆ ಮಾಡುವುದಿಲ್ಲ, ಆ ಕುರಿತು ಸಮಯ ಬಂದಾಗ ಹೇಳುತ್ತೇನೆ ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹೇಳಿದ್ದಾರೆ.**

> **ನನ್ನ ಸಂಪುಟ ಸಹದ್ಯೋಗಿಗಳಿಗೆ ಅಧಿಕಾರದ ಬಗ್ಗೆ ಬಹಿರಂಗ ಹೇಳಿಕೆ ನೀಡದಂತೆ ತಿಳಿಸಿದ್ದೇನೆ. ಆದರೂ ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿಗಳಿಗೆ ಒಳ್ಳೆಯದಾಗಲಿ ಎಂದಷ್ಟೇ ಬಯಸುತ್ತೇನೆ. ಅಲ್ಲದೆ ಎಲ್ಲಾ ಹೇಳಿಕೆ ಸೇರಿ ಇನ್ನಿತರ ವಿಚಾರಗಳನ್ನು ಪಕ್ಷ ನಿಭಾಯಿಸುತ್ತದೆ ಎಂದು ಹೇಳಿದರು. ನನಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಉತ್ತಮ ಸಂಬಂಧ ಇದೆ. ನಾನು ಅಧಿಕಾರಕ್ಕಾಗಿ ಯಾವತ್ತೂ ಪಕ್ಷದ ಅಥವಾ ನಮ್ಮ ನಾಯಕರ ವಿರುದ್ಧ ಮಾತನಾಡಿದವನಲ್ಲ. ರಾಜ್ಯ ಮತ್ತು ಪಕ್ಷ ಏನು ಬಯಸುತ್ತದೆ ಎಂಬುದು ನನಗೆ ತಿಳಿದಿದೆ.**

## ಸದ್ಯಕ್ಕೆ ನಂದಿನಿ ಹಾಲಿನ ದರ ಏರಿಕೆ ಇಲ್ಲ!

• **ಉದಯವಾಹಿನಿ ಬೆಂಗಳೂರು**



ಉದಯವಾಹಿನಿ ಚಿತ್ರ

**ರಾಜ್ಯದ ಜನತೆಗೆ ನೆಮ್ಮದಿಯ ಸುದ್ದಿ**

ಅಡುಗೆ ಎಣ್ಣೆ, ಇಂಧನ, ಗ್ಯಾಸ್ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಹೊತ್ತಲ್ಲೆ, ನಂದಿನಿ ಹಾಲಿನ ದರ ಕೂಡ ಶೀಘ್ರವೇ ಏರಿಕೆಯಾಗಲಿದೆ ಎಂದು ಹೇಳಲಾಗಿತ್ತು. ಆದರೆ ಇದೀಗ ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ ಅವರು ಸದ್ಯಕ್ಕೆ ನಂದಿನಿ ಹಾಲಿನ ದರದಲ್ಲಿ ಯಾವುದೇ ಏರಿಕೆ ಮಾಡಲ್ಲ ಎಂದು ಸ್ಪಷ್ಟಪಡಿಸಿದರು.

ಬೆಂಗಳೂರಿನ ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೆಲ ದಿನಗಳ ಹಿಂದೆ ರಾಮನಗರದಲ್ಲಿ ವೇದಿಕೆ ಮೇಲೆ ಸಿಎಂ ಸಿದ್ದರಾಮಯ್ಯ ಹೇಳಿದ್ದರು. ಎಲ್ಲಾ ಅಧಿಕಾರಿಗಳ ಜೊತೆಗೆ ಚರ್ಚಿಸಿ ತೀರ್ಮಾನಿಸುತ್ತೇವೆ ಅಂತ ಹೇಳಿದ್ದಾರೆ. ಸದ್ಯಕ್ಕೆ ಹಾಲಿನ ದರ ಏರಿಕೆ ಬಗ್ಗೆ ಮಾಹಿತಿ ಇಲ್ಲ. ಆದರೆ ನಂದಿನಿ ಹಾಲಿನ ದರ ಏರಿಕೆಗೆ ರಾಜ್ಯದ ರೈತರ ಬೇಡಿಕೆ ಇದೆ ಕೆಎಂಎಫ್ ಎಂಡಿ ವರ್ಗಾವಣೆ ಆಡಳಿತಾತ್ಮಕ ತೀರ್ಮಾನ ಅಷ್ಟೇ ಎಂದು ವಿಧಾನಸೌಧದಲ್ಲಿ ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ ತಿಳಿಸಿದರು. ಸದ್ಯಕ್ಕೆ ನಂದಿನಿ ಹಾಲಿನ ದರ ಏರಿಕೆ ಇಲ್ಲ. ಹಾಲಿನ ದರ ಏರಿಕೆಗೆ ಯಾವುದೇ ಪ್ರಸ್ತಾವನೆ ಬಂದಿಲ್ಲ. ಈ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ ಎಂದರು. ಕೆಎಂಎಫ್ ಎಂಡಿ ವರ್ಗಾವಣೆಯಾಗಿದೆ, ಅದು ಆಡಳಿತಾತ್ಮಕ ನಿರ್ಧಾರವಾಗಿದೆ ಎಂದರು.

## ಇಡಿ ಎದುರು ವಿಚಾರಣೆಗೆ ಹಾಜರಾದ ಮುಡಾ ಭೂ ಅಧಿಕಾರಿ ಮಂಜುನಾಥ್

• **ಉದಯವಾಹಿನಿ ಬೆಂಗಳೂರು**



ಉದಯವಾಹಿನಿ ಚಿತ್ರ

ಮೈಸೂರು ನಗರಾಭಿವೃದ್ಧಿ ಪ್ರಾಧಿ ಕಾರದ (ಮುಡಾ) ನಿವೇಶನ ಹಂಚಿಕೆ ಸಂಬಂಧ ವಿಶೇಷ ಭೂ ಅಧಿಕಾರಿ ಎಸ್ಎಲ್ಓ ಮಂಜುನಾಥ್ ಅವರು, ಜಾರಿ ನಿರ್ದೇಶನಾಲಯ(ಇ.ಡಿ.)ದ ಅಧಿಕಾರಿಗಳ ಮುಂದೆ ವಿಚಾರಣೆ ಎದುರಿಸಿದರು.

ಬೆಂಗಳೂರಿನ ಶಾಂತಿ ನಗರದಲ್ಲಿರುವ ಇ.ಡಿ.ಕಚೇರಿಗೆ ಒಂದು ಬ್ಯಾಗನಲ್ಲಿ ದಾಖಲೆಗಳನ್ನು ಇಟ್ಟುಕೊಂಡು ಬೆಳಿಗ್ಗೆ 11ಗಂಟೆಗೆ ವಿಚಾರಣೆಗೆ ಹಾಜರಾದ ಮಂಜುನಾಥ್ ಅವರನ್ನು ಇ.ಡಿ.ಅಧಿಕಾರಿಗಳು ಸುಮಾರು ಮೂರು ಗಂಟೆಗೂ ಹೆಚ್ಚು ಕಾಲ ವಿಚಾರಣೆ ನಡೆಸಿ ಪ್ರಕರಣ ಸಂಬಂಧ ಮಾಹಿತಿ ಪಡೆದುಕೊಂಡರು. ಮುಡಾದಲ್ಲಿ ವಿಶೇಷ ಭೂ ಅಧಿಕಾರಿಯಾಗಿದ್ದ ಮಂಜುನಾಥ್ ಅವರು, ಕಾನೂನು ಉಲ್ಲಂಘಿಸಿ ಬೇಕಾಬಿಟ್ಟಿ ನಿವೇಶನಗಳನ್ನು ಹಂಚಿ ನೂರಾರು ಕೋಟಿ ರೂ. ನಷ್ಟ ಉಂಟು ಮಾಡಿದ್ದಾರೆ ಎಂಬ ಆರೋಪವಿದೆ. ನಿಯಮಗಳನ್ನು ಉಲ್ಲಂಘನೆ ಮಾಡಿ ತಮಗೆ ಬೇಕಾದವರಿಗೆ ನಗರದ ಪ್ರಮುಖ ಬಡಾವಣೆಗಳಲ್ಲಿ ನಿವೇಶನ ಹಂಚಿಕೆ ಮಾಡುವಲ್ಲಿ ಇವರ ಪ್ರಮುಖ ಪಾತ್ರವಿತ್ತು ಎಂಬ ಆರೋಪವಿದೆ. ಮೊದಲೇ ಇ.ಡಿ.ಅಧಿಕಾರಿಗಳು ಕೆಲವು ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡಿದ್ದರು.

ಇಂತಹ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ನಿಮ ಮೇಲೆ ಯಾರಾದರೂ ಪ್ರಭಾವ ಬೀರಿದ್ದರೆ, ಇಲ್ಲವೇ ಸ್ವಯಂ ಪ್ರೇರಿತವಾಗಿ ನೀವೇ ನಿವೇಶನ ಹಂಚಿಕೆ ಮಾಡಿದ್ದೀರ ಎಂದು ಪ್ರಶ್ನಿಸಿರುವುದಾಗಿ ತಿಳಿದುಬಂದಿದೆ.

## ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ಸಿ ಗ್ರೂಪ್ ಹುದ್ದೆಗಳ ಭರ್ತಿ

• **ಉದಯವಾಹಿನಿ ಬೆಂಗಳೂರು**

ಉದ್ಯೋಗಾಂಕ್ಷಿಗಳಿಗೆ ಸಿಎಂ ಸಿದ್ದರಾಮಯ್ಯ ಗುಡ್ ನ್ಯೂಸ್ ನೀಡಿದ್ದು, ಶೀಘ್ರವೇ ಅಬಕಾರಿ ಇಲಾಖೆಯಲ್ಲಿಖಾಲಿ ಇರುವ 'ಸಿ ಗ್ರೂಪ್' ಹುದ್ದೆಗಳ ಭರ್ತಿ ಮಾಡಲಾಗುವುದು ಸಿಎಂ ಘೋಷಣೆ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆ ನಡೆಸಲಾಗಿದ್ದು,

ಈ ವೇಳೆ ಘೋಷಣೆ ಮಾಡಿದ್ದಾರೆ. ಅಬಕಾರಿ ಇಲಾಖೆಯಲ್ಲಿ ರಾಜಸ್ವ ಸಂಗ್ರಹ ಹೆಚ್ಚಿಸಲು ಜಾಗೃತ ದಳ ಇನ್ನಷ್ಟು ಚುರುಕಾಗಿ ಕಾರ್ಯನಿರ್ವಹಿಸಲು ಸಿಎಂ ಸೂಚನೆ ನೀಡಿದ್ದಾರೆ. ಅಬಕಾರಿ ಇಲಾಖೆಯಲ್ಲಿ ಖಾಲಿಯಿರುವ ಗ್ರೂಪ್ ಸಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಮುಖ್ಯಾಂಶಗಳು

- **ರಾಜಸ್ವ ಸಂಗ್ರಹ ಹೆಚ್ಚಿಸಲು ಜಾಗೃತ ದಳ ಇನ್ನಷ್ಟು ಚುರುಕಾಗಿ ಕಾರ್ಯನಿರ್ವಹಿಸಲು ಸೂಚಿಸಲಾಯಿತು.**
- **ಅಬಕಾರಿ ಇಲಾಖೆಯಲ್ಲಿ ಖಾಲಿಯಿರುವ ಗ್ರೂಪ್ ಸಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಯಿತು. ನೋಂದಣಿ ಮತ್ತು ಮುದ್ರಾಂಕ ಇಲಾಖೆ**
- **ರಾಜಸ್ವ ಸೋರಿಕೆಯನ್ನು ತಡೆಗಟ್ಟಿ, ರಾಜಸ್ವ ಸಂಗ್ರಹವನ್ನು ಹೆಚ್ಚಿಸಲು ಸೂಚಿಸಲಾಯಿತು. ಕಾನೂನು ಬಾಹಿರ ನೋಂದಣಿಗಳಿಗೆ ಕಡಿವಾಣ ಹಾಕಿ, ರಾಜಸ್ಥ ಸಂಗ್ರಹವನ್ನು ವ್ಯವಸ್ಥಿತ ಗೊಳಿಸಬೇಕು.**
- **ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲಾ ಆಸ್ತಿಗಳನ್ನು ಗುರುತಿಸಿ ತೆರಿಗೆ ವ್ಯಾಪ್ತಿಗೆ ತರಲು ಕ್ರಮ ಕೈಗೊಳ್ಳಬೇಕು.**
- **ಇ-ಖಾತಾ ನೀಡುವ ಪ್ರಕ್ರಿಯೆಯಲ್ಲಿನ ತೊಡಕುಗಳನ್ನು ನಿವಾರಿಸಲು ಕ್ರಮ ಕೈ ಗೊಳ್ಳುವಂತೆ ಸೂಚಿಸಲಾಯಿತು.**

## ಬೆಂಗಳೂರಿಗೆ ಹೊಸ ಸೇತುವೆ- 2 ಲಕ್ಷ ವಾಹನಗಳಿಗೆ ಟ್ರಾಫಿಕ್ ಜಾಮ್‌ನಿಂದ ಮುಕ್ತಿ

• **ಉದಯವಾಹಿನಿ ಬೆಂಗಳೂರು**


ಉದಯವಾಹಿನಿ ಚಿತ್ರ

ಬೆಂಗಳೂರಿನಲ್ಲಿ ಟ್ರಾಫಿಕ್ ಸಮಸ್ಯೆ ನಿನ್ನೆ ಮೊನ್ನೆಯದಲ್ಲ. ಮಳೆ ಹಾಗೂ ರಸ್ತೆ ಕಾಮಗಾರಿಯಿಂದ ಮಾತ್ರವಲ್ಲದೆ ನಗರದ ಕೆಲ ರಸ್ತೆಗಳಲ್ಲಿ ಪ್ರತಿ ದಿನವೂ ಟ್ರಾಫಿಕ್ ಜಾಮ್ ಉಂಟಾಗಿರುತ್ತದೆ. ವಿಶೇಷವಾಗಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ಮಾರ್ಗದಲ್ಲಿ ವಾಹನ ಸವಾರರ ಪರದಾಟ ನಿತ್ಯ ಕಂಡು ಬರುತ್ತದೆ.

ಈ ಸಮಸ್ಯೆಗೆ ಪರಿಹಾರವಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್ಎಚ್ಎಐ) ಸಾದಹಳ್ಳಿ ಜಂಕ್ಷನ್ ಬಳಿ ಹೊಸ ಮೇಲೇತುವೆಯನ್ನು ನಿರ್ಮಿಸಲು ಯೋಜನೆ ರೂಪಿಸುತ್ತಿದೆ. ಹೌದು... ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್‌ಗಳನ್ನು ಕಡಿಮೆ ಮಾಡಲು ಹಾಗೂ ಹೆಬ್ಬಾಳ ಮಾರ್ಗವಾಗಿ ವಿಮಾನ ನಿಲ್ದಾಣಕ್ಕೆ ತೆರಳುವ ವಾಹನಗಳಿಗೆ ತೊಂದರೆಯಾಗದಂತೆ ಈ ಜನನಿಬಿಡ ಜಂಕ್ಷನ್ನಲ್ಲಿ ಹೊಸ ಮೇಲೇತುವೆಯನ್ನು ನಿರ್ಮಿಸಲಾಗುತ್ತಿದೆ. ಇದರಿಂದಾಗಿ 1 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರಿಗೆ ಪ್ರಯೋಜನವಾಗಲಿದೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಪ್ರತಿದಿನ ಸರಿಸುಮಾರು 750 ವಿಮಾನಗಳು ಕಾರ್ಯನಿರ್ವಹಿಸುತ್ತವೆ. 1 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರು ಈ ಸೌಲಭ್ಯವನ್ನು ಬಳಸಿಕೊಳ್ಳುತ್ತಾರೆ. ಇವರಲ್ಲಿ ಸುಮಾರು 80% ಪ್ರಯಾಣಿಕರು ಹೆಬ್ಬಾಳದ ಮೂಲಕ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುತ್ತಾರೆ. ಇದು ಮಾರ್ಗದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಹೀಗಾಗಿ ಈ ಮಾರ್ಗದಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿ ಕಂಡು ಬರುವುದರಿಂದ ಇಲ್ಲಿ ಮೇತುವೆ ನಿರ್ಮಾಣ ಮಾಡಲು ಎನ್ಎಚ್ಎಐ ನಿರ್ಧರಿಸಿದೆ. ಇದು ಈ ಪ್ರಮುಖ ಮಾರ್ಗವನ್ನು ಬಳಸುವ ಎಲ್ಲಾ ಪ್ರಯಾಣಿಕರಿಗೂ ಅನುಕೂಲ ಮಾಡಿಕೊಡಲಿದೆ. ಈ ಹೊಸ ಯೋಜನೆಯ ಟೆಂಡರ್ ಪ್ರಕ್ರಿಯೆ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಈಗಾಗಲೇ 13-ಕಿಮೀ ಉದ್ದದ ಫ್ಲೈಓವರ್ ಈಗಾಗಲೇ ಹೆಬ್ಬಾಳದ ಎಸ್ಟೀಮ್ ಮಾಲ್‌ನಿಂದ ಯಲಹಂಕ ಏರ್ ಬೇಸ್‌ವರೆಗೆ 13-ಕಿಮೀ ಉದ್ದದ ಮೇಲೇತುವೆಯನ್ನು ನಿರ್ಮಿಸಲಾಗಿದೆ. ಇದು ವಿಮಾನ ನಿಲ್ದಾಣಕ್ಕೆ ಹೋಗುವ ವಾಹನಗಳಿಗೆ ಸಿಗ್ನಲ್ ಮುಕ್ತ ಪ್ರಯಾಣವನ್ನು ಒದಗಿಸುತ್ತದೆ. ಆದರೆ ಟೋಲ್ ಪ್ಲಾಜಾ ಬಳಿಯ ಸಾದಹಳ್ಳಿ ಜಂಕ್ಷನ್‌ನಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿರುತ್ತದೆ. ಇದೀಗ ಕೊಡಿಗೇಹಳ್ಳಿ, ಬ್ಯಾಟರಾಯನಪುರ, ಜಕ್ಕೂರುದಂತಹ ಪ್ರಮುಖ ಸ್ಥಳಗಳಲ್ಲಿನ ಟ್ರಾಫಿಕ್ ಸಿಗ್ನಲ್‌ಗಳು ಹೆಬ್ಬಾಳ ಮೇಲೇತುವೆಯನ್ನು ಬಳಸದ ವಾಹನಗಳಿಗೆ ವಿಳಂಬವನ್ನು ಸೃಷ್ಟಿಸುತ್ತವೆ. ಇದಲ್ಲದೆ ಹೆಬ್ಬಾಳ ಮೇತುವೆಯ ಕೆಳಗೆ ಸಂಚರಿಸುವ ವಾಹನಗಳ ಸಂಚಾರವನ್ನು ಸುಗಮಗೊಳಿಸಲು ಈ ಸಿಗ್ನಲ್‌ಗಳಲ್ಲಿ ಮೇಲೇತುವೆಗಳ ನಿರ್ಮಾಣವನ್ನು ಯೋಜಿಸುತ್ತಿದೆ. ಇದು ಹೆಬ್ಬಾಳದಿಂದ ವಿಮಾನ ನಿಲ್ದಾಣಕ್ಕೆ ಸಂಪೂರ್ಣ ಸಿಗ್ನಲ್ ಮುಕ್ತ ಪ್ರಯಾಣವನ್ನು ಒದಗಿಸುತ್ತದೆ.

> **ಟ್ರಾಫಿಕ್ ಸಿಗ್ನಲ್ ಮತ್ತು ಟೋಲ್ ಪ್ಲಾಜಾದಲ್ಲಿ ವಾಹನಗಳು ನಿಧಾನ ಗತಿಯಲ್ಲಿ ಸಾಗುತ್ತವೆ. ಈ ಮಾರ್ಗದಲ್ಲಿ ಹೆಚ್ಚೆಚ್ಚು ವಾಹನಗಳು ಸಾಲುಗಟ್ಟಿ ನಿಲ್ಲುವುದರಿಂದ ಸವಾರರು ತುಂಬಾ ಕಿರಿಕಿರಿಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಎನ್ಎಚ್ಎಐ ಸಾದಹಳ್ಳಿ ಜಂಕ್ಷನ್‌ನಲ್ಲಿ ಮೇತುವೆ ನಿರ್ಮಿಸಲು ನಿರ್ಧರಿಸಿದೆ. ಈ ಯೋಜನೆಯ ಟೆಂಡರ್ ಪ್ರಕ್ರಿಯೆಯು ಶೀಘ್ರದಲ್ಲೇ ಪ್ರಾರಂಭವಾಗುವ ನಿರೀಕ್ಷೆಯಿದೆ. ನಿತ್ಯ 2 ಲಕ್ಷಕ್ಕೂ ಅಧಿಕ ವಾಹನಗಳಿಗೆ ಬಿಗ್ ರಿಲೀಫ್ ಹೊಸ ಮೇತುವೆ ನಿರ್ಮಾಣದಿಂದ ಟ್ರಾಫಿಕ್ ವಿಳಂಬವನ್ನು ತಪ್ಪಿಸಬಹುದು. ಇದರಿಮದ ಪ್ರತಿದಿನ ಈ ಮಾರ್ಗವನ್ನು ಬಳಸುವ 2 ಲಕ್ಷಕ್ಕೂ ಹೆಚ್ಚು ವಾಹನಗಳಿಗೆ ಪರಿಹಾರ ಸಿಗಲಿದೆ. ಈ ಹೊಸ ಮೇತುವೆ ವಿಮಾನ ನಿಲ್ದಾಣಕ್ಕೆ ಹೋಗುವ ಪ್ರಯಾಣಿಕರಿಗೆ ಪ್ರಯಾಣದ ಅನುಭವವನ್ನು ಸುಧಾರಿಸುವ ನಿರೀಕ್ಷೆಯಿದೆ.**

## ರಾಜ್ಯದ ಎಲ್ಲಾ ಬಸ್‌ಗಳಲ್ಲೂ ಕ್ಯೂಆರ್ ಕೋಡ್ ಟಿಕೆಟ್ ಲಭ್ಯ

• **ಉದಯವಾಹಿನಿ ಬೆಂಗಳೂರು**


ಉದಯವಾಹಿನಿ ಚಿತ್ರ

**ಡೈನಮಿಕ್ ಕ್ಯೂ ಆರ್ ಕೋಡ್ ಮೂಲಕ ಹಣ ಪಾವತಿ**

ಇಷ್ಟು ದಿನ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ಸಿನಲ್ಲಿ ಜನರು ನಗದು ಹಣ ನೀಡಿ ಟಿಕೆಟ್ ಪಡೆಯುತ್ತಿದ್ದರು. ಈ ವೇಳೆ ಕಂಡಕ್ಟರ್ ಮತ್ತು ಪ್ರಯಾಣಿಕರ ನಡುವೆ ಚಿಲ್ಲರೆ ವಿಷಯವಾಗಿ ಗಲಾಟೆ ನಡೆಯುತ್ತಿತ್ತು. ಆದರೆ ಇದೀಗ ಪ್ರಯಾಣಿಕರ ಬೇಡಿಕೆಯಂತೆ ಕೆಎಸ್ಆರ್ಟಿಸಿಯು ಇನ್ನು ಮುಂದೆ ಬಸ್ಸಳಲ್ಲಿ ಯುಪಿಐ ಮೂಲಕ ಹಣ ಪೇ ಮಾಡಿ ಟಿಕೆಟ್ ಪಡೆದುಕೊಳ್ಳುವ ಅವಕಾಶವನ್ನು ಕಲ್ಪಿಸಿದೆ. ಹೌದು ಪ್ರಯಾಣಿಕರ ಬಹುದಿನಗಳ ಬೇಡಿಕೆಯಂತೆ ಇದೀಗ ಕೆಎಸ್ಆರ್ಟಿಸಿಯು ಸಂಸ್ಥೆಯು ಒಂದು ಹೆಜ್ಜೆ ಮುಂದೆ ಹೋಗಿ, ದುಡ್ಡು ಕೊಟ್ಟು ಚಿಲ್ಲರೆ ವಿಚಾರವಾಗಿ ಕಂಡಕ್ಟರ್ ಜೊತೆಗೆ ಸಣ್ಣಪುಟ್ಟ ಕಿರಿಕ್ ಆಗುತ್ತಿದ್ದವು. ಆದರೆ ಇದೀಗ ಆ ಚಿಂತೆ ಬಿಟ್ಟುಬಿಡಿ.

ಡೈನಮಿಕ್ ಕ್ಯೂಆರ್ ಕೋಡ್ ಮೂಲಕ ಹಣ ಪಾವತಿ ಮಾಡ ಬಹುದಾಗಿದೆ.

ರಾಜ್ಯದ 8800 ಬಸ್ಥಳಲ್ಲಿ ಯುಪಿಐ ಮೂಲಕ ಹಣ ಪಾವತಿಸಬಹುದಾಗಿದೆ ಆನ್ಲೈನ್ ಹಣ ಸಂದಾಯ ಮಾಡುವ ಆಪ್ ಗಳಾದ ಗೂಗಲ್ ಪೇ, ಫೋನ್ ಪೇ, ಪೇಟಿಎಂ ಹಾಗೂ ಭೀಮ್ ಆಪ್ ಮೂಲಕ ಹಣ ಪಾವತಿಸಬಹುದಾಗಿದೆ. ಮುಂದಿನ ದಿನಗಳಲ್ಲಿ ಎಟಿಎಂ ಡೆಬಿಟ್ ಕಾರ್ಡ್ ಕ್ರೆಡಿಟ್ ಕಾರ್ಡ್ ಗಳಲ್ಲೂ ಹಣ ಸ್ವೀಕರಿಸಲಾಗುತ್ತದೆ ಎಂದು ಕರ್ನಾಟಕ ರಸ್ತೆ ಸಾರಿಗೆ ನಿಗಮವು ಪ್ರಕಟಣೆಯಲ್ಲಿ ತಿಳಿಸಿದೆ.

# ಹೊಸ ದಾಖಲೆ ಬರೆದ ಏರ್‌ಪೋರ್ಟ್ ವಾಯು ವಜ್ರ ಬಸ್‌ಗಳು

### ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಚಾರ ನಡೆಸುವುದು

• **ಉದಯವಾಹಿನಿ ಬೆಂಗಳೂರು**



ಉದಯವಾಹಿನಿ ಚಿತ್ರ

**ಬಿಎಂಟಿಸಿ ಆದಾಯ ಹೆಚ್ಚಲು ಸಹ ಅನುಕೂಲ**

ಬೆಂಗಳೂರು ನಗರದಿಂದ ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಚಾರ ನಡೆಸುವುದು ಸವಾಲಿನ ಕೆಲಸ. ಬಸ್, ಕ್ಯಾಬ್, ಖಾಸಗಿ ವಾಹನ ಹೀಗೆ ವಿವಿಧ ಮಾದರಿ ಸಾರಿಗೆ ಮೂಲಕ ಪ್ರತಿನಿತ್ಯ ಲಕ್ಷಾಂತರ ಜನರು ಏರ್‌ಪೋರ್ಟ್‌ಗೆ ಆಗಮಿಸಿ/ ನಿರ್ಗಮಿಸುತ್ತಾರೆ. ಬೆಂಗಳೂರು ಜನರ ಜೀವನಾಡಿಯಾದ ಬಿಎಂಟಿಸಿ ಏರ್‌ಪೋರ್ಟ್‌ಗೆ ವಾಯು ವಜ್ರ ಬಸ್‌ಗಳನ್ನು ಓಡಿಸುತ್ತದೆ.

ಬಿಎಂಟಿಸಿಯ ವಾಯು ವಜ್ರ ಬಸ್‌ಗಳು ನವೆಂಬರ್ ತಿಂಗಳಿನಲ್ಲಿ ಹೊಸ ದಾಖಲೆ ಬರೆದಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಿಎಂಟಿಸಿ ಬಸ್ ಮೂಲಕ ಸಂಚಾರ ನಡೆಸುವ ಪ್ರಯಾಣಿಕರ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದ್ದು, ಬಿಎಂಟಿಸಿ ಆದಾಯ ಹೆಚ್ಚಲು ಸಹ ಅನುಕೂಲವಾಗಿದೆ.ನವೆಂಬರ್ ತಿಂಗಳಿನಲ್ಲಿ ಬಿಎಂಟಿಸಿಯ ಐಷಾರಾಮಿ ವಾಯು ವಜ್ರ ಎಸಿ ಬಸ್‌ಗಳಲ್ಲಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 4,07,531 ಪ್ರಯಾಣಿಕರು ಸಂಚಾರವನ್ನು ನಡೆಸಿದ್ದಾರೆ. ಈ ಮೂಲಕ ಮೊದಲ ಬಾರಿಗೆ ವಾಯು ವಜ್ರ ಬಸ್‌ಗಳ ಟಿಕೆಟ್‌ನಿಂದಲೇ ನವಂಬರ್ ತಿಂಗಳಿನಲ್ಲಿ ಸಂಸ್ಥೆಗೆ 11 ಕೋಟಿ ಆದಾಯ ಬಂದಿದೆ.

ಒಂದು ತಿಂಗಳಿನಲ್ಲಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿಗೆ ವಾಯು ವಜ್ರ ಬಸ್‌ಗಳಲ್ಲಿ ಸಂಚಾರ ನಡೆಸುವ ಪ್ರಯಾಣಿಕರ ಸಂಖ್ಯೆ ಏರಿಕೆಯಾಗಲು ನಿಖರವಾದ ಕಾರಣವನ್ನು ಪಟ್ಟಿ ಮಾಡಲು ಸಾಧ್ಯವಿಲ್ಲ. ಕೆಐಎಗೆ ಭೇಟಿ ನೀಡುವ ಪ್ರಯಾಣಿಕರ ಸಂಖ್ಯೆ ಏರಿಕೆಯಾಗಿದ್ದು, ಉತ್ತಮವಾದ ಸೇವೆ, ಕಡಿಮೆ ದರ ಇರುವ ಕಾರಣ ವಾಯು ವಜ್ರ ಬಸ್‌ಗಳಲ್ಲಿ ಹೆಚ್ಚಿನ ಜನರು ಸಂಚಾರ ನಡೆಸಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕ್ಯಾಬ್‌ಗಳಲ್ಲಿ ವಿಮಾನ ನಿಲ್ದಾಣಕ್ಕೆ ದುಬಾರಿ ದರವಿದೆ. ಅಲ್ಲದೇ ಕ್ಯಾಬ್ ಚಾಲಕರು ಪ್ರಯಾಣಿಕರ ಜೊತೆ ಆಗಾಗ ಕಿರಿಕ್ ಮಾಡಿಕೊಳ್ಳುತ್ತಾರೆ. ಬಿಎಂಟಿಸಿ ಹೊಸ ಮಾರ್ಗಗಳಿಂದಲೂ ಈಗ ಕೆಐಎಗೆ ಹೊಸ ಹೊಸ ಬಸ್‌ಗಳನ್ನು ಪರಿಚಯಿಸಿದೆ. ಆದ್ದರಿಂದ ಹೆಚ್ಚಿನ ಪ್ರಯಾಣಿಕರು ಸಂಚಾರ ನಡೆಸಿರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

#### ಪ್ರಯಾಣಿಕರ ಸಂಖ್ಯೆ ಹೆಚ್ಚಳ

**ಬಿಎಂಟಿಸಿ ನಗರದ 17 ಮಾರ್ಗದಿಂದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿಗೆ 144 ಬಸ್‌ಗಳ ಸಂಚಾರವನ್ನು ನಡೆಸುತ್ತವೆ. ವಾಯು ವಜ್ರ ಬಸ್‌ಗಳು ಪ್ರತಿನಿತ್ಯ 990 ಟ್ರಿಪ್ ಸಂಚಾರ ನಡೆಸುತ್ತವೆ. ಕೇವಲ ಏರ್‌ಪೋರ್ಟ್‌ನಿಂದಲೇ ಬಿಎಂಟಿಸಿ ಬಸ್‌ಗಳಲ್ಲಿ ನವೆಂಬರ್ ತಿಂಗಳಿನಲ್ಲಿ 4,07,531 ಪ್ರಯಾಣಿಕರು ಸಂಚಾರ ನಡೆಸಿದ್ದಾರೆ. ಅಂದರೆ ಪ್ರತಿದಿನ ಸುಮಾರು 13,584 ಪ್ರಯಾಣಿಕರು ಬಸ್ ಬಳಕೆ ಮಾಡಿದ್ದಾರೆ.**

**ವಾಯು ವಜ್ರ ಬಸ್‌ಗಳು ಪ್ರತಿದಿನ ಸುಮಾರು 51,863 ಕಿ.ಮೀ. ಸಂಚಾರವನ್ನು ನಡೆಸುತ್ತವೆ. ಕೆಐಎ-ಕೆಬಿಎಸ್ ನಡುವೆ ಗರಿಷ್ಠ ಎಂದರೆ 216 ಟ್ರಿಪ್ ಬಸ್‌ಗಳು ಸಂಚಾರವನ್ನು ನಡೆಸುತ್ತವೆ. ಕೆಐಎ-ಎಲೆಕ್ಟ್ರಾನಿಕ್ ಸಿಟಿ ನಡುವೆ 120 ಟ್ರಿಪ್ ಬಸ್‌ಗಳು ಸಂಚಾರವನ್ನು ನಡೆಸುತ್ತವೆ, ಈ ಮಾರ್ಗಕ್ಕೆ 23 ಬಸ್‌ಗಳನ್ನು ನಿಯೋಜನೆ ಮಾಡಲಾಗಿದೆ. ಆರಂಭಿಸಿತು. ಬಳಿಕ ಇದೇ ಮೊದಲ ಬಾರಿಗೆ ಒಂದೇ ತಿಂಗಳಿನಲ್ಲಿ 4 ಲಕ್ಷ ಪ್ರಯಾಣಿಕರು ಕೆಐಎಗೆ ಹೋಗಲು ಬಸ್ ಬಳಕೆ ಮಾಡಿದ್ದಾರೆ. ಪ್ರತಿದಿನ 2008ರಲ್ಲಿ ಬಿಎಂಟಿಸಿ ವಾಯು ವಜ್ರ ಬಸ್‌ಗಳ ಸಂಚಾರವನ್ನು ಸುಮಾರು 600ಕ್ಕೂ ಅಧಿಕ ವಿಮಾನಗಳು ಕೆಐಎನಿಂದ ಸಂಚಾರ ನಡೆಸುತ್ತಿದ್ದು, ದೇಶದ ಸಂಚಾರ ದಟ್ಟಣೆಯ ಏರ್‌ಪೋರ್ಟ್‌ನಲ್ಲಿ ಬೆಂಗಳೂರು 3ನೇ ಸ್ಥಾನದಲ್ಲಿದೆ.**

# ಪ್ರಿಯಾಂಕಾ ವಾದ್ರಾ ವಿರುದ್ಧ ಗುಡುಗಿದ ಸಂಸದ ಯದುವೀರ್ ಒಡೆಯರ್

## ಗೆಲ್ಲುತ್ತಿದ್ದಂತೆ ಅವರು ಕೇರಳಿಗರನ್ನು ಖುಷಿಪಡಿಸಲು ಮುಂದಾಗಿದ್ದು, ಇದರಿಂದ ಕನ್ನಡಿಗರಿಗೆ ಸಂಕಷ್ಟ

• ಉದಯವಾಹಿನಿ ಬಂಡೀಪುರ

ಕೇರಳ ಹಾಗೂ ಕರ್ನಾಟಕದ ನಡುವೆ ವಿವಾದಕ್ಕೆ ಕಾರಣವಾಗಿರು ಬಂಡೀಪುರ ರಾತ್ರಿ ಸಂಚಾರ ವಿಚಾರವು ಇದೀಗ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ. ಇದೀಗ ಬಂಡೀಪುರದಲ್ಲಿ ರಾತ್ರಿ ವೇಳೆ ಸಂಚಾರಕ್ಕೆ ಅವಕಾಶ ನೀಡುವ ಬಗ್ಗೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಾತನಾಡಿರುವುದಕ್ಕೆ ಸಂಸದ ಯದುವೀರ್ ಒಡೆಯರ್ ಅವರು ಗುಡುಗಿದ್ದಾರೆ.

ಪ್ರಿಯಾಂಕಾ ಗಾಂಧಿವ ವಾದ್ರಾ ಅವರು, ವಯನಾಡ್ ನೂತನ ಸಂಸದೆಯಾಗಿ ಆಯ್ಕೆಯಾಗಿದ್ದಾರೆ. ಆದರೆ ಗೆಲ್ಲುತ್ತಿದ್ದಂತೆ ಅವರು ಕೇರಳಿಗರನ್ನು ಖುಷಿಪಡಿಸಲು ಮುಂದಾಗಿದ್ದು, ಇದರಿಂದ ಕನ್ನಡಿಗರಿಗೆ ಸಂಕಷ್ಟ ಎದುರಾಗಿದೆ. ಕನ್ನಡಿಗರು ಪ್ರಿಯಾಂಕಾ ಗಾಂಧಿ ಅವರ ಭರವಸೆಗೆ ಕಿಡಿ ಕಾರಿದ್ದಾರೆ. ಇದೀಗ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಮಾತಿಗೆ ಗುಡುಗಿರುವ ಮೈಸೂರು - ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಒಡೆಯರ್ ಅವರು, ಬಂಡೀಪುರದಲ್ಲಿ ರಾತ್ರಿ ಪ್ರಯಾಣ ನಿರ್ಬಂಧ ಮಾಡುವ ವಿಚಾರವಾಗಿ ಕಾಂಗ್ರೆಸ್ ನಾಯಕರು ತೋರಿಸುತ್ತಿರುವ ಈ ದ್ವಿಮುಖ ನಿಲುವು ಪರಿಸರ ಸಂರಕ್ಷಣೆಗೆ ಅಪಾಯಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.


ಉದಯವಾಹಿನಿ ಚಿತ್ರ

**ರಾಷ್ಟ್ರೀಯ ನಾಯಕರು ಅದಕ್ಕೆ ವಿರುದ್ಧವಾಗಿ ಸೂಚನೆ**

ಮುಂದುವರಿದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಬಂಡೀಪುರದ ಮೂಲಕ ರಾತ್ರಿ ಪ್ರಯಾಣ ನಿರ್ಬಂಧವನ್ನು ನಿಷೇಧಿಸುವ ವಿಚಾರದ ಬಗ್ಗೆ ನೀಡಿರುವ ಇತ್ತೀಚಿನ ಹೇಳಿಕೆ ಕಾಂಗ್ರೆಸ್ ನಾಯಕತ್ವದಲ್ಲಿನ ಭಿನ್ನಾಭಿಪ್ರಾಯವನ್ನು ತೋರಿಸುತ್ತಿದೆ ಎಂದು ಹೇಳಿದ್ದಾರೆ. ಅಲ್ಲದೇ ಒಂದು ಕಡೆ, ಮುಖ್ಯಮಂತ್ರಿ ನಿರ್ದಿಷ್ಟವಾಗಿ ಅಂಥ ಯಾವುದೇ ಪ್ರಸ್ತಾಪವಿಲ್ಲ ಎಂದು ನಿರಾಕರಿಸುತ್ತಿದ್ದಾರೆ. ಮತ್ತೊಂದು ಕಡೆ, ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕರು ಅದಕ್ಕೆ ವಿರುದ್ಧವಾಗಿ ಸೂಚನೆ ನೀಡುತ್ತಿದ್ದಾರೆ. ಅವುಗಳನ್ನು ಮಾನವ ಚಟುವಟಿಕೆಗಳಿಂದ ರಕ್ಷಿಸಲು, ವಿಶೇಷವಾಗಿ ರಾತ್ರಿ ಸಮಯದಲ್ಲಿ, ಸೂಕ್ಷ್ಮ ಅವಧಿಯಲ್ಲಿ ಅವುಗಳಿಗೆ ರಕ್ಷಣೆ ನೀಡುವ ಅವಶ್ಯಕತೆ ಇದೆ. ರಾಜಕೀಯ ನಾಯಕರು ಈ ದೇಶದ ಪ್ರಕೃತಿ ಸಂರಕ್ಷಣೆಗೆ ಪ್ರಜ್ಞಾಪೂರ್ವಕವಾಗಿರುವುದನ್ನು ನಿರ್ಧರಿಸಬೇಕೇ ಹೊರತು ತಮ್ಮ ಪ್ರಣಾಳಿಕೆಯು ಕೆಲವೊಬ್ಬರಿಗೆ ಲಾಭವನ್ನು ತರುವಂತೆ ಮಾಡಬಾರದು. ಈ ರೀತಿ ನಿರ್ಬಂಧವನ್ನು ಹಿಂಪಡೆಯುವುದರಿಂದ ಪರಿಸರ ಹಾಗೂ ವನ್ಯಜೀವಿಗಳ ಸರ್ವನಾಶ ಮಾಡುವುದು ಸರಿಯಲ್ಲ. ಇದರಿಂದ ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ ಹಾನಿಯ ಬಗ್ಗೆಯು ಸಹ ಚಿಂತಿಸಬೇಕಾಗಿದೆ ಎಂದಿದ್ದಾರೆ.

**ವಯನಾಡ್ ನೂತನ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ವಯನಾಡ್ ಲೋಕಸಭೆ ಉಪ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ಆದರೆ, ಗೆದ್ದ ಬೆನ್ನಲ್ಲೇ ಕೇರಳಿಗರನ್ನು ಮೆಚ್ಚಿಸಲು ಅವರ ಆಡಿರುವ ಮಾತು ಇದೀಗ ಕನ್ನಡಿಗರನ್ನು ಕೆರಳಿಸಿದೆ. ಕನ್ನಡಿಗರಿಗೆ ಶಾಕ್ ಕೊಡಲು ಮುಂದಾದ ಪ್ರಿಯಾಂಕಾ ಗಾಂಧಿ ವಾದ್ರಾಗೆ ಕರ್ನಾಟಕದ ಹಾಗೂ ಬಿಜೆಪಿ ನಾಯಕರು ತಿರಗೇಟು ಕೊಡುತ್ತಿದ್ದಾರೆ.**

**ಹಿನ್ನೆಲೆ ಏನು:** ಪ್ರಿಯಾಂಕಾ ಗಾಂಧಿ ವಾದ್ರಾ ಅವರು ವಯನಾಡ್ ನೂತನ ಸಂಸದೆ. ವಯನಾಡ್‌ನಲ್ಲಿ ಮಾತನಾಡುವಾಗ ಬಂಡೀಪುರ ರಾತ್ರಿ ಸಂಚಾರಕ್ಕೆ ಅವಕಾಶ ಕಲ್ಪಿಸುವುದೇ ನನ್ನ ಪ್ರಥಮ ಆದ್ಯತೆ ಇಲ್ಲಿ ರಸ್ತೆ ಸಂಚಾರ ಇಲ್ಲದೆ ಇರುವುದರಿಂದ ಯಾವ ರೀತಿ ಸಮಸ್ಯೆ ಆಗುತ್ತಿದೆ ಎನ್ನುವುದು ನನಗೆ ಗೊತ್ತಿದೆ. ಹೀಗಾಗಿ, ಬಂಡೀಪುರದಲ್ಲಿ ರಾತ್ರಿ ಸಂಚಾರಕ್ಕೆ ಅವಕಾಶ ಮಾಡಿ ಕೊಡುವುದೇ ನನ್ನ ಪ್ರಥಮ ಗುರಿ ಎಂದಿದ್ದರು. ಪ್ರಿಯಾಂಕಾ ಅವರ ಈ ಮಾತು ಕನ್ನಡಿಗರನ್ನು ಕೆರಳಿಸಿದೆ. ಈ ಭಾಗದಲ್ಲಿ ವನ್ಯಜೀವಿಗಳ ಸಂರಕ್ಷಣೆಯ ದೃಷ್ಟಿಯಿಂದ ರಾತ್ರಿ ವೇಳೆ ಸಂಚಾರ ನಿರ್ಬಂಧ ವಿಧಿಸಲಾಗಿದೆ. ಈ ವಿಷಯ ಕರ್ನಾಟಕ ಹಾಗೂ ಕೇರಳದ ನಡುವೆ ಪದೇ ಪದೇ ಚರ್ಚೆಯಾಗುತ್ತಿದೆ. 2009ರಿಂದಲೂ ಕರ್ನಾಟಕ ಸರ್ಕಾರ ಈ ಭಾಗದಲ್ಲಿ ನಿಷೇಧ ಹೇರಿದೆ.

**ಈ ಅಸಮನ್ವಯತೆ ಅವರ ಆಡಳಿತದ ಪ್ರಾಮಾಣಿಕತೆಯ ಬಗ್ಗೆ ಸಂದೇಹಗಳನ್ನು ಹುಟ್ಟುಹಾಕುತ್ತಿದೆ. ಮೇಲಾಗಿ, ಈ ಪ್ರಸ್ತಾಪಗಳು ನಮ್ಮ ದೇಶದ ಪರಿಸರ ವ್ಯವಸ್ಥೆಗಳ ಸಂರಕ್ಷಣೆಯ ಬಗ್ಗೆ ಆತಂಕವನ್ನು ಉಂಟುಮಾಡುವಂತೆ ಇದೆ. ಬಂಡೀಪುರವು ಕೇವಲ ಒಂದು ರಸ್ತೆ ಅಲ್ಲ. ಇದು ಅನೇಕ ವನ್ಯಜೀವಿ ಪ್ರಭೇದಗಳ ವಾಸಸ್ಥಳವಾಗಿದೆ.**

# ಅಂತ್ಯಕ್ರಿಯೆ ಮುಗಿಸಿ ಬರುವಾಗ ಅಪಘಾತ

• ಉದಯವಾಹಿನಿ ಮಾಗಡಿ

ಸಂಬಂಧಿಕರೊಬ್ಬರು ಅಂತ್ಯಕ್ರಿಯೆಗೆ ಹೋಗಿ ವಾಪಸ್ಸಾಗುತ್ತಿದ್ದ ಬೆಂಗಳೂರಿನ ಕುಟುಂಬದವರಿದ್ದ ಕಾರು ಬಂಡೆಗೆ ಡಿಕ್ಕಿ ಹೊಡೆದಿದ್ದರಿಂದ ಮಹಿಳೆಯೊಬ್ಬರು ಮೃತಪಟ್ಟು, ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಬೆಂಗಳೂರು-ಮಾಗಡಿ ಮುಖ್ಯರಸ್ತೆಯ ಹೊನ್ನಾಪುರದ ಬಳಿ ನಡೆದಿದೆ.

ಬೆಂಗಳೂರಿನ ಲಗ್ಗೆರೆ ನಿವಾಸಿ ಭಾಗ್ಯಮ್ಮ (50) ಮೃತರು. ಅವರ ಕುಟುಂಬದವರಾದ ಗಿರೀಶ್, ರೇವತಿ ಹಾಗೂ ಶ್ರೀನಿವಾಸ್ ಅವರಿಗೆ ಗಂಭೀರ ಗಾಯಗಳಾಗಿದ್ದು, 2 ವರ್ಷದ ಮಗುವೊಂದು ಅಪಾಯದಿಂದ ಪಾರಾಗಿದೆ. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಕಳಿಸಿ ಕೊಡಲಾಗಿದೆ. ಕುಣಿಗಲ್ ತಾಲ್ಲೂಕಿನ ಹಾಲ್ಕೆರೆ ಗ್ರಾಮದಲ್ಲಿ ಮೃತಪಟ್ಟಿದ್ದ ಸಂಬಂಧಿಕರೊಬ್ಬರ ಅಂತ್ಯಕ್ರಿಯೆಗೆ ಭಾಗ್ಯಮ್ಮ ಸೇರಿದಂತೆ ಕುಟುಂಬದ ಐವರು ಕಾರಿನಲ್ಲಿ ಹೋಗಿದ್ದರು. ಶವಸಂಸ್ಕಾರ ಮುಗಿಸಿಕೊಂಡು ಸಂಜೆ ಬೆಂಗಳೂರಿಗೆ ವಾಪಸ್ಸಾಗುವಾಗುತ್ತಿದ್ದರು. ಸಂಜೆ 5.45ರ ಸುಮಾರಿಗೆ ಹೊನ್ನಾಪುರದ ಬಳಿ ಕಾರು ಚಾಲಕ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಯ ಬಂಡೆಗೆ ಡಿಕ್ಕಿ ಹೊಡೆದಿದ್ದಾನೆ ಎಂದು ಮಾಗಡಿ ಠಾಣೆ ಪೊಲಿಸರು ತಿಳಿಸಿದರು.


ಉದಯವಾಹಿನಿ ಚಿತ್ರ

ಡಿಕ್ಕಿಯ ತೀವ್ರತೆಗೆ ಭಾಗ್ಯಮ್ಮ ಅವರು ಸ್ಥಳದಲ್ಲೇ ಮೃತಪಟ್ಟು, ಮೂವರು ಗಾಯಗೊಂಡರು. ವಿಷಯ ತಿಳಿದು ಸ್ಥಳಕ್ಕೆ ತೆರಳಿ ಶವ, ಗಾಯಾಳುಗಳನ್ನು ಮಾಗಡಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕಳಿಸಲಾಯಿತು. ಘಟನೆ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಹೇಳಿದರು.

# ಹೇಮಾವತಿ ನೀರಿಗಾಗಿ ಮಾಗಡಿ ರೈತರ ಪ್ರತಿಭಟನೆ

• ಉದಯವಾಹಿನಿ ಮಾಗಡಿ

ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಹೇಮಾವತಿ ಯೋಜನೆ ಎಕ್ಸ್‌ಪ್ರೆಸ್ ಕೆನಾಲ್ ಕಾಮಗಾರಿಗೆ ತುಮಕೂರು ಜಿಲ್ಲೆಯಲ್ಲಿ ವಿರೋಧ ವ್ಯಕ್ತಪಡಿಸುತ್ತಿರುವುದನ್ನು ಖಂಡಿಸಿ ರಾಜ್ಯ ರೈತ ಸಂಘ ಹಸಿರು ಸೇನೆ ಪ್ರತಿಭಟನೆ ನಡೆಸಿತು.

ಪಟ್ಟಣದ ಕಲ್ಯಾಗೇಟ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಹಸಿರುಸೇನೆ ಪದಾಧಿಕಾರಿಗಳು ಮಾಜಿ ಶಾಸಕ, ಬಿಜೆಪಿ ಮುಖಂಡ ಸೊಗಡು ಶಿವಣ್ಣ ಪ್ರತಿಕೃತಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ತುಮಕೂರು ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ತವರೂರಾದ ಮಾಗಡಿ ತಾಲ್ಲೂಕಿಗೆ ಹೇಮಾವತಿ ಕುಡಿಯುವ ನೀರನ್ನು ಬಿಡುವುದಿಲ್ಲ ಎಂದು ಬಿಜೆಪಿ ಮಾಜಿ ಶಾಸಕ ಸೊಗಡು ಶಿವಣ್ಣ ಡಿ.4ರಿಂದ ಪಾದಯಾತ್ರೆ ಹಮ್ಮಿಕೊಂಡಿರುವುದು ನಾಚಿಕೆಗೇಡಿನ ಸಂಗತಿ ಎಂದು ರಾಜ್ಯ ರೈತ ಸಂಘ ಹಸಿರು ಸೇನೆ ತಾಲ್ಲೂಕು ಅಧ್ಯಕ್ಷ ಹೊಸಪಾಳ್ಯ ಲೋಕೇಶ್ ಹೇಳಿದರು.

ಎಕ್ಸ್‌ಪ್ರೆಸ್ ಕೆನಾಲ್ ಕಾಮಗಾರಿಗೆ ಅಡ್ಡಿಪಡಿಸುತ್ತಿರುವವರ ವಿರುದ್ಧ ಮಾಗಡಿ -ಕುಣಿಗಲ್ ಮುಖ್ಯರಸ್ತೆ ಅಗೆದು ಪಾಠ ಕಲಿಸಲು ರೈತ ಸಂಘ ಮುಂದಾಗಿತ್ತು. ಸಾರ್ವಜನಿಕರ ದೃಷ್ಟಿಯಿಂದ ರಸ್ತೆ ಅಗೆಯುವ ಕೆಲಸ ಕೈಬಿಡಲಾಗಿದೆ. ಬದಲಾಗಿ ತುಮಕೂರಿಗೆ ತೆರಳಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪುರಸಭೆ ಸದಸ್ಯ ರಾಮು, ಹಳ್ಳಿಕಾರ್ ಹನುಮಂತರಾಜು, ರೈತ ಸಂಘದ ತಾಲ್ಲೂಕು ಯುವ ಘಟಕ ಅಧ್ಯಕ್ಷ ರವಿಕುಮಾರ್, ಶಿವಲಿಂಗಯ್ಯ, ಚಂದ್ರಯಪ್ಪ, ಬುಡನ್ ಸಾಬ್, ಕಾಂತರಾಜು, ನಾರಾಯಣ, ಪುರಸಭಾ ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ ರೇವಣ್ಣ, ಚಿಕ್ಕಣ್ಣ, ಕರಿಯಪ್ಪ, ಮುನಿರಾಜ್, ರಾಜಣ್ಣ, ರಂಗಸ್ವಾಮಯ್ಯ, ತಗೀಕುಪ್ಪೆ ನಾರಾಯಣ್, ಗುಡ್ಡಳ್ಳಿ ರಾಮಣ್ಣ ಭಾಗವಹಿಸಿದ್ದರು. ರಸ್ತೆಯ ಅಗೆಯಲು ಅವಕಾಶ ನೀಡ ಪೊಲೀಸರು ಮಾಗಡಿ-ಕುಣಿಗಲ್ ಮುಖ್ಯರಸ್ತೆ ಅಗೆದು ಪ್ರತಿಭಟನೆ ನಡೆಸಲು ಮುಂದಾಗಿದ್ದ ರೈತ ಸಂಘ ಹಸಿರು ಸೇನೆ ಪದಾಧಿಕಾರಿಗಳಿಗೆ ಪೊಲೀಸರು ಅವಕಾಶ ನೀಡಲಿಲ್ಲ. ರೈತ ಮುಖಂಡರ ಜೊತೆ ಮಾತುಕತೆ ನಡೆಸಿದ.


ಉದಯವಾಹಿನಿ ಚಿತ್ರ

**ಪೊಲೀಸರು ರಸ್ತೆ ಅಗೆಯಲು ಅವಕಾಶ ಕೊಡುವುದಿಲ್ಲ. ಕೇವಲ ಪ್ರತಿಭಟನೆಗೆ ಮಾತ್ರ ಅವಕಾಶ ನೀಡಲಾಗುವುದು ಒಂದು ವೇಳೆ ರಸ್ತೆ ಅಗೆಯಲು ಮುಂದಾದರೆ ಬಂಧಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸಾರ್ವಜನಿಕರ ಹಿತದೃಷ್ಟಿಯಿಂದ ರಸ್ತೆ ಅಗೆಯುವ ನಿರ್ಧಾರದಿಂದ ಹಿಂದೆ ಸರಿದ ರೈತರು ಪ್ರತಿಭಟನೆಗೆ ಅವಕಾಶ ಕೋರಿದರು. ರಸ್ತೆ ಅಗೆಯಲು ತಂದಿದ್ದ ಹಾರೆ ಕೋಲು ಗುದ್ದಲಿ ಹಾಗೂ ಜೆಸಿಬಿ ಯಂತ್ರ ಮುಂದೆ ಪ್ರತಿಭಟನೆ ನಡೆಸಿದರು.**

# ಎಂ-ಸ್ಯಾಂಡ್ ಸಾಗಾಣಿಕೆ ವೇಳೆ ಟಾರ್ಪಲ್ ಹೊದಿಕೆ ಕಡ್ಡಾಯ

• ಉದಯವಾಹಿನಿ ಮಡಿಕೇರಿ

ಲಾರಿ, ಪಿಕ್‌ಅಪ್ ಸೇರಿದಂತೆ ಯಾವುದೇ ಬಗೆಯ ವಾಹನದಲ್ಲಿ ಎಂ-ಸ್ಯಾಂಡ್, ಜಲ್ಲಿಕಲ್ಲುಗಳನ್ನು ಸಾಗಾಣಿಕೆ ಮಾಡುವಾಗ ಕಡ್ಡಾಯವಾಗಿ ಟಾರ್ಪಲ್‌ನ್ನು ಮುಚ್ಚಿರಬೇಕು. ಇಲ್ಲದಿದ್ದರೆ, ದಂಡ ವಿಧಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಚ್ಚರಿಕೆ ನೀಡಿದರು.

ಇಲ್ಲಿನ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಅವರು ಲಾರಿ ಚಾಲಕರು, ಮಾಲೀಕರ ಸಂಘದ ಅಧ್ಯಕ್ಷರು, ಸದಸ್ಯರು, ಟ್ಯಾಕ್ಸಿ ಇತರೆ ಸರಕು ಸಾಗಣೆ ವಾಹನ ಚಾಲಕರೊಂದಿಗೆ ನಡೆಸಿದ ಸಭೆಯಲ್ಲಿ ಈ ಎಚ್ಚರಿಕೆಯನ್ನು ರವಾನಿಸಿದರು. ಒಂದು ವೇಳೆ ಟಾರ್ಪಲ್ ಮುಚ್ಚದೇ ತೆಗೆದುಕೊಂಡು ಹೋಗುವುದನ್ನು ಸಾರ್ವಜನಿಕರು ಫೋಟೊ ತೆಗೆದು ಕಳುಹಿಸಿದರೆ ದೂರು ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಮರದ ದಿಮ್ಮಿಗಳನ್ನು ಸಾಗಾಣಿಕೆ ಮಾಡುವ ವಾಹನಗಳಲ್ಲಿ ನಿಗದಿಪಡಿಸಿದಕ್ಕಿಂತ ಹೆಚ್ಚಿನ ಭಾರ ಹಾಕಬಾರದು, ಅತಿ ವೇಗ ಅಜಾಗರೂಕತೆಯಿಂದ ಯಾವುದೇ ಕಾರಣಕ್ಕೂ ವಾಹನಗಳನ್ನು ಚಾಲನೆ ಮಾಡಲೇಬಾರದು ಎಂದು ಸೂಚಿಸಿದರು. ಎಲ್ಲಾ ಚಾಲಕರು ಹಾಗೂ ಸಾರ್ವಜನಿಕರೊಂದಿಗೆ ಪೊಲೀಸರು ಸಹ ಗೌರವದಿಂದ ಮಾತನಾಡಬೇಕು, ಸೌಜನ್ಯದಿಂದ ವರ್ತಿಸಬೇಕು ಎಂದೂ ಅವರು ಪೊಲೀಸರಿಗೆ ನಿರ್ದೇಶನ ನೀಡಿದರು. ರಸ್ತೆಗಳಲ್ಲಿ ವಾಹನ ಸವಾರರು ಯಾವುದೇ ಬಗೆಯ ಸಂಚಾರ ನಿಯಮಗಳನ್ನು ಉಲ್ಲಂಘಿಸಿದ್ದೇ ಆದಲ್ಲಿ ಆ ಕುರಿತ ಮಾಹಿತಿ ನೀಡುವಂತೆಯೂ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರ್‌ರಾಜ್, ಡಿವೈಎಸ್‌ಪಿ ರವಿ ಹಾಗೂ ಇತರೆ ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

**ರಸ್ತೆಯಲ್ಲಿ ಯಾವುದೇ ರೀತಿಯ ಅಪಘಾತ ಸಂಭವಿಸಿದ್ದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಅಥವಾ ತುರ್ತು ಸಹಾಯವಾಣಿ 112 ಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದೂ ಅವರು ಕೋರಿದರು. ಪೊಲೀಸ್ ನಿಯಂತ್ರಣ ಕಚೇರಿಯ ಮೊ: 9480804900 ದೂ 08272228330 ಗೆ ಕರೆ ಮಾಡಿ ಮಾಹಿತಿ ನೀಡಿದರೆ ಮಾಹಿತಿ ನೀಡಿದವರ ಹೆಸರುಗಳನ್ನು ವಿವರಗಳನ್ನು ಬಹಿರಂಗಪಡಿಸುವುದಿಲ್ಲ ಎಂದು ಅವರು ಭರವಸೆ ನೀಡಿದರು. ಚಾಲಕರ ಕುಂದುಕೊರತೆಗಳನ್ನೂ ಆಲಿಸಿದ ಅವರು ಆ ಕುರಿತು ಸಭೆಯಲ್ಲಿ ಚರ್ಚೆ ನಡೆಸಿದರು.**

# ಉಳ್ಳವರಿಗೆ ಸ್ವತ್ತು ಇಲ್ಲದವರಿಗೆ ಅಲೆದಾಟದ ಸುಸ್ತು

• ಉದಯವಾಹಿನಿ ಹನೂರು

ಚಾಮರಾಜನಗರ ನಗರಸಭೆಯ ಖಾತೆ ಆಟಾಟೋಪ ಇನ್ನು ನಿಂತಂತಿಲ್ಲ. ತಾಲ್ಲೂಕ್ ತಹಶೀಲ್ದಾರ್ ನೇತೃತ್ವದಲ್ಲಿ ನಡೆದ ತನಿಖೆಗೂ ಬಗ್ಗದ ಪೌರಾಯುಕ್ತ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ತಮಗೇನೂ ಅರಿವಿಲ್ಲದಂತೆ ತಮ್ಮ ಹಳೆಯ ಚಾಳಿ ಮುಂದುವರಿಸಿದ್ದಾರೆ.

ದಿನಂಪ್ರತಿ ಸಾರ್ವಜನಿಕರು ಕಚೇರಿಗೆ ಅಲೆದು ಅಲೆದು ಹೈರಾಣಾದರು ಸಹ ಬಡ ಹಾಗೂ ಮಧ್ಯಮ ವರ್ಗದ ಜನರ ಪಾಡನ್ನು ಕೇಳುವವರಿಲ್ಲದಂತಾಗಿದೆ. ಇದೀಗ ಬಂದ ತನಿಖಾಧಿಕಾರಿಗಳ ತಂಡ ಕೂಡ ಇದೇ ನೆಪದಲ್ಲಿ ತಮಗೆ ಬೇಕಾದವರ ಹಲವು ದಿನಗಳಿಂದ ನನೆಗುದಿಗೆ ಬಿದ್ದಿದ್ದ ಕಡತಗಳನ್ನು ಈ ಸ್ವತ್ತು ಮಾಡಿಸಿಕೊಂಡಿದ್ದು ಗುಟ್ಟಾಗಿ ಉಳಿದಿಲ್ಲ.ಇದರ ಜೊತೆ ಹೊಸ ಪ್ರಭಾರ ಕಂದಾಯಾಧಿಕಾರಿ ಸಂತೋಷ್ ರವರು ಶರವಣರಿಂದ ತೆರವಾದ ಸ್ಥಾನಕ್ಕೆ ಬಂದ ಇವರು ಆರಂಭದಿಂದಲೇ ನಯವಾಗಿ ಹಣಕ್ಕಾಗಿ ಪೀಡಿಸುತ್ತ ಕಡತಗಳನ್ನು ತಮ್ಮ ಬಳಿ ಇಟ್ಟುಕೊಳ್ಳುತ್ತಿರುವುದು ನೋಡಿದರೆ ಪ್ರಾಯಶಃ ಸ್ಥಳ ಮಹಿಮೆಯೇ ಎನ್ನಬಹುದು.ಪೌರಾಯುಕ್ತರು ಸಹವಾಗಿ ಅವರ ಬಳಿ ಕಡತ ತಲುಪುವುದೇ ಸೌಭಾಗ್ಯ ಆದರೆ ಅವರ ಬಳಿ ಹೋದರೆ ಇಲ್ಲಸಲ್ಲದ ಕಾನೂನು ಹೇಳಿ ಇಂತಿಷ್ಟು ಕಾಣಿಕೆ ನೀಡಲು ಪರೋಕ್ಷವಾಗಿ ಸೂಚಿಸಿ ಕಡತಗಳ ಮೇಲೆ ಕೋಡಿಂಗ್ ಬರೆದು ಪಕ್ಕಕ್ಕಿಡುತ್ತಾರೆ. ಆದ್ರೆ ಉಳ್ಳವರಿಗೆ , ಶ್ರೀಮಂತರಿಗೆ ಹಣದ ಆಮಿಷಕ್ಕೆ ಇದೆಲ್ಲ ಒಂದರ ಹಿಂದೆ ಒಂದರಂತೆ ಕೆಲವೇ ದಿನಗಳಲ್ಲಿ ಹೇಗೆ ಈ ಸ್ವತ್ತು ಆಗುತ್ತದೆ ಪ್ರತಿಷ್ಠಿತ ಬಡಾವಣೆಗಳಲ್ಲಿ ಹಲವಾರು ಮನೆಗಳು ನಿರ್ಮಾಣವಾಗಿದ್ದು ಇದು ಕಟ್ಟಡ ಪರವಾನಿಗೆ ಇಲ್ಲದೆ ಹಾಗೂ ನಿಯಮ ಬಾಹಿರವಾಗಿ ಇದ್ದರೂ ಈ ಸ್ವತ್ತು ಆಗಿದೆ. ಮುಗಿಲೆತ್ತರಕ್ಕೆ ವಾಣಿಜ್ಯ ಸಂಕೀರ್ಣಗಳು ನಿಯಮಬಾಹಿರವಾಗಿ ತಲೆಯೆತ್ತಿದ್ದರು ಸಹ ಕೇಳುವವರಿಲ್ಲ.ಆದರೆ ಬಡ ಹಾಗೂ ಮಧ್ಯಮ ವರ್ಗದವರಿಗೆ ಮಾತ್ರ ನಿಯಮಗಳು ಹಾಗು ಬಲವಂತವಾಗಿ ಪೀಡನೆ ಹಾಗು ಕಾಲಹರಣ.

# ಮಕ್ಕಳ ನೈಜ ಬುದ್ಧಿಮತ್ತೆ ನಿಷ್ಕ್ರಿಯಗೊಳಿಸಬಾರದು

• ಉದಯವಾಹಿನಿ ಮೈಸೂರು

ಮಕ್ಕಳನ್ನು ಕೃತಕ ಬುದ್ಧಿಮತ್ತೆ(ಎಐ)ಗೆ ಒಗ್ಗಿಸುವ ಮೂಲಕ ಅವರಲ್ಲಿರುವ ಅಸ್ಲಿ ಇಂಟಲಿಜೆನ್ಸ್ ಅನ್ನು ನಿಷ್ಕ್ರಿಯಗೊಳಿಸಬಾರದು ಎಂದು ಪದ್ಮಶ್ರೀ ಪುರಸ್ಕೃತ ಹಾಗೂ ಇಸ್ರೊ ಮಾಜಿ ಅಧ್ಯಕ್ಷ ಡಾ.ಎ.ಎಸ್. ಕಿರಣ್ ಕುಮಾರ್ ತಿಳಿಸಿದರು.

ದಟ್ಟಗಳ್ಳಿಯಲ್ಲಿರುವ ನೈಪುಣ್ಯ ಶಾಲೆಯಲ್ಲಿ ಮಂಗಳವಾರ ನೈಪುಣ್ಯ ಸ್ಪೇಸ್ ಲ್ಯಾಬ್ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಕೃತಕ ಬುದ್ಧಿಮತ್ತೆ ಬಗ್ಗೆ ಕಲಿಸಬೇಕಿದೆ. ಆದರೆ ಅದನ್ನು ಕಲಿಸುವ ಭರದಲ್ಲಿ ಅವರಲ್ಲಿರುವ ನೈಜ ಬುದ್ಧಿಮತ್ತೆ ಬೆಳವಣಿಗೆಗೆ ಅವಕಾಶವಿಲ್ಲದ ಸನ್ನಿವೇಶ ಸೃಷ್ಟಿಸಬಾರದು ಎಂದು ಮಾರ್ಗದರ್ಶನ ಮಾಡಿದರು.

ಬುದ್ಧಿಶಕ್ತಿಯು ಮೆಮೊರಿಯನ್ನು ಬಳಸಿಕೊಂಡು ಬೆಳವಣಿಗೆ ಹೊಂದುತ್ತದೆ. ನಮ್ಮ ಮನಸ್ಸು ಬೇರೆಯವರನ್ನು ಕೇಳುವ ಪ್ರಶ್ನೆಗಳಿಗೆ ಉತ್ತರ ಸಿಗದಿದ್ದಾಗ ಅದಕ್ಕೆ ತಾನೇ ಉತ್ತರ ಪಡೆಯಲು ಮುಂದಾಗುತ್ತದೆ. ಆಗ ಮಗುವಿನಲ್ಲಿ ಸಂಶೋಧನಾತ್ಮಕ ಗುಣ ಹೊರ ಬರುತ್ತದೆ. ಅದನ್ನು ಪೋಷಿಸುವುದು ಪೋಷಕರ ಕರ್ತವ್ಯ ಎಂದರು.


ಉದಯವಾಹಿನಿ ಚಿತ್ರ

ಮನುಷ್ಯನ ದೇಹದಲ್ಲಿಯೇ ಅಸ್ಲಿ ಬುದ್ಧಿಮತ್ತೆ ಕೆಲಸ ಮಾಡುತ್ತಿದೆ. ನಮ್ಮ ಪಂಚೇಂದ್ರಿಯಗಳು ಹಾಗೂ ಕರ್ಮೇಂದ್ರಿಯಗಳು ಅದನ್ನು ಸಾಕಾರಗೊಳಿಸಲು ಸಹಕರಿಸುತ್ತಿವೆ. ನಾವು ಕಾಣುವ ಕನಸೇ ನಮ್ಮಲ್ಲಿರುವ ಬುದ್ಧಿಮತ್ತೆಗೆ ಒಂದು ನಿದರ್ಶನವಾಗಿದೆ.

ಹೀಗಾಗಿ ಯಾವುದೇ ಶಿಕ್ಷಣ ಸಂಸ್ಥೆ ಮಕ್ಕಳಿಗೆ ತಮ್ಮನ್ನು ತಾವು ಅರಿಯುವ ಶಿಕ್ಷಣ ನೀಡಬೇಕು. ಅಲ್ಲದೇ ಮಕ್ಕಳಲ್ಲಿರುವ ಸಾಮರ್ಥ್ಯವನ್ನು ಅವರ ಅರಿವಿಗೆ ಬರುವಂತೆ ಮಾಡಬೇಕೆಂದು ಎಂದು ಮಾರ್ಗದರ್ಶನ ಮಾಡಿದರು.ಪ್ರತಿಯೊಬ್ಬ ಮನುಷ್ಯನಲ್ಲಿ ಒಬ್ಬ ವಿಜ್ಞಾನಿ ಇದ್ದಾನೆ. ಪ್ರಕೃತಿಯಲ್ಲಿ ತಾನು ನೋಡಿದ್ದನ್ನು ತಾನು ನಿರ್ಮಾಣ ಮಾಡಬೇಕು ಎಂಬ ಭಾವನೆ ಆತನಲ್ಲಿರುವ ಆವಿಷ್ಕಾರ ಮನೋಭಾವವನ್ನು ಪ್ರಚೋದಿಸುತ್ತದೆ. ಹಾಗೆಯೇ ಸಾಧನೆ ಮಾಡಿದವರನ್ನು ಗಮನಿಸಿದರೆ ಎಲ್ಲಾ ವ್ಯಕ್ತಿಯಲ್ಲಿಯೂ ಪ್ರತಿಭೆ ಸುಪ್ತವಾಗಿರುವುದು ತಿಳಿಯುತ್ತದೆ. ಅದನ್ನು ಗುರುತಿಸಿ ಪ್ರೋತ್ಸಾಹ ನೀಡಿದಲ್ಲಿ ಅಗಾದವಾದ ಪ್ರತಿಭೆಗಳನ್ನು ಹೊರತರಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಅಧ್ಯಕ್ಷ ಕೌಟಿಲ್ಯ ರಘು ಮಾತನಾಡಿ, ಕಿರಣ್ ಕುಮಾರ್ ಅವರು ಕನ್ನಡದ ವ್ಯಕ್ತಿಯಾಗಿ ಹಾಸನ ಜಿಲ್ಲೆಯ ಒಂದು ಸಣ್ಣ ಗ್ರಾಮದಲ್ಲಿ ಹುಟ್ಟಿ ಇಸ್ರೋ ಅಧ್ಯಕ್ಷರಾಗುವ ಮಟ್ಟಕ್ಕೆ ಬೆಳೆದಿರುವುದೇ ಒಂದು ದೊಡ್ಡ ಸಾಧನೆಯಾಗಿದೆ. ಹಾಗಾಗಿ ವಿದ್ಯಾರ್ಥಿಗಳು ಅವರ ವ್ಯಕ್ತಿತ್ವವನ್ನೇ ಮಾದರಿಯಾಗಿ ಸ್ವೀಕರಿಸಿ ಸಾಧನೆ ಕಡೆಗೆ ತೊಡಗಿಸಿಕೊಳ್ಳಬೇಕೆಂದರು.ಕಾರ್ಯಕ್ರಮದಲ್ಲಿ ಶಿವಾನಂದ ಕಲ್ಕೇರಿ, ಭಾವನ ಶ್ರೀಕಾಂತ, ಪ್ರಾಂಶುಪಾಲೆ ಶಾಂತಿನಿ ಹಾಗೂ ಇತರರು ಇದ್ದರು.

# ಬಿಡದಿ ಪುರಸಭೆ: ಸಮಸ್ಯೆಗಳ ಸರಮಾಲೆಗೆ ಮುಕ್ತಿ ನಿರೀಕ್ಷೆ

## ಇತ್ತೀಚೆಗೆ ಅಧಿಕಾರಕ್ಕೆ ಬಂದಿರುವ ಪುರಸಭೆಯ ನೂತನ ಆಡಳಿತ ಮಂಡಳಿಯ ಸಾಮಾನ್ಯ ಸಭೆ

• ಉದಯವಾಹಿನಿ ಬಿಡದಿ

ಗುಂಡಿಬಿದ್ದ ರಸ್ತೆಗಳು, ವಾಹನಗಳು ಸಂಚರಿಸಿದರೆ ಹೊಗೆಯಂತೆ ಏಳುವ ಧೂಳು, ನನೆಗುದಿಗೆ ಬಿದ್ದಿರುವ ಯುಜಿಡಿ ಕಾಮಗಾರಿ, ಅನಿಲ್ ಪೈಪ್‌ಲೈನ್‌ಗಾಗಿ ಅಗೆದ ರಸ್ತೆಯನ್ನು ಸರಿಯಾಗಿ ಮುಚ್ಚದಿರುವುದು, ರಸ್ತೆ ಬದಿ ಅಲ್ಲಲ್ಲಿ ಕಸದ ರಾಶಿ, ದುರಸ್ತಿಗೆ ಕಾದಿರುವ ಶುದ್ಧ ಕುಡಿಯುವ ನೀರಿನ ಘಟಕಗಳು, ಬೆಳಗದ ಬೀದಿ ದೀಪಗಳು, ಕಟ್ಟಿಕೊಳ್ಳುವ ಚರಂಡಿಗಳು, ವಿಳಂಬವಾಗುವ ಪುರಸಭೆ ಕೆಲಸಗಳು... ಜಿಲ್ಲೆಯಲ್ಲಿರುವ ಕೈಗಾರಿಕಾ ಕಾಶಿ ಬಿಡದಿ ಪಟ್ಟಣದ ಸದ್ಯದ ಸ್ಥಿತಿ ಇದು. ಪಟ್ಟಣದ 23 ವಾರ್ಡ್‌ಗಳಲ್ಲಿ ಎಲ್ಲೇ ಓಡಾಡಿದರೂ ಮೇಲಿನ ಸಮಸ್ಯೆಗಳಲ್ಲಿ ಒಂದಲ್ಲ ಒಂದು ಕಣ್ಣಿಗೆ ರಾಚುತ್ತದೆ. ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಪಟ್ಟಣ ಹೀಗಿದೆಯಲ್ಲಾ ಎನಿಸುತ್ತಲೇ, ಸ್ಥಳೀಯ ಆಡಳಿತ ಏನು ಮಾಡುತ್ತಿದೆ ಎಂಬ ಪ್ರಶ್ನೆಯು ಮೂಡುತ್ತಿತ್ತು.

ನಾಗರಿಕರ ಈ ಪ್ರಶ್ನೆಗೆ ಉತ್ತರವಾಗಿ, ಇತ್ತೀಚೆಗೆ ಅಧಿಕಾರಕ್ಕೆ ಬಂದಿರುವ ಪುರಸಭೆಯ ನೂತನ ಆಡಳಿತ ಮಂಡಳಿಯ ಸಾಮಾನ್ಯ ಸಭೆ ಬುಧವಾರ ನಡೆಯಲಿದೆ. ಮೇಲಿನ ಸಮಸ್ಯೆಗಳ ಕುರಿತು ಪಟ್ಟಣದ ಪ್ರತಿನಿಧಿಗಳು ಚರ್ಚಿಸಿ, ಅದಕ್ಕೆ ಪರಿಹಾರ ಕಂಡುಕೊಂಡು ಅಭಿವೃದ್ಧಿ ಪಥದಲ್ಲಿ ಪಟ್ಟಣ ಕೊಂಡೊಯ್ಯುವ ನಿರೀಕ್ಷೆ ಗರಿಗೆದರಿದೆ.


ಉದಯವಾಹಿನಿ ಚಿತ್ರ


**ಸಾಮಾನ್ಯ ಸಭೆಯಲ್ಲಿ ಪಟ್ಟಣದ ಅಭಿವೃದ್ಧಿ**

ಬೆಂಗಳೂರಿಗೆ ಹೊಂದಿಕೊಂಡಂತಿರುವ ಬಿಡದಿಯು ಕೈಗಾರಿಕೆಗಳ ಕಾರಣಕ್ಕಾಗಿ ವಿಶ್ವಮಟ್ಟದಲ್ಲಿ ಹೆಸರುವಾಸಿಯಾಗಿದೆ. ಆದರೆ, ಅದಕ್ಕೆ ತಕ್ಕಂತೆ ಪಟ್ಟಣ ಅಭಿವೃದ್ಧಿಯಾಗಿಲ್ಲ. ಅದಕ್ಕೆ ಕಾರಣಗಳು ಅನೇಕ. ಈಗಿನ ಕಾಂಗ್ರೆಸ್ ಶಾಸಕರಾದ ಆಡಳಿತಾರೂಢ ಪಕ್ಷದ ಎಚ್.ಸಿ. ಬಾಲಕೃಷ್ಣ ಅವರು ಪಟ್ಟಣಕ್ಕೆ ಅಭಿವೃದ್ಧಿಯ ಹೊಸ ಸ್ಪರ್ಶ ನೀಡುತ್ತಾರೆಂಬ ನಿರೀಕ್ಷೆ ನಾಗರಿಕರಿಗೆ ಇದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಪ್ತರಾಗಿರುವ ಬಾಲಕಷ ಅವರು ಹೆಚ್ಚುವರಿ ಪಟ ಣಕೆ ಹೆಚ್ಚುವರಿ ಅನುದಾನ ತಂದು ಕಸ ವಿಲೇವಾರಿ ಘಟಕ, ರಸ್ತೆಗಳಿಗೆ ದುರಸ್ತಿ ಭಾಗ್ಯ ಸೇರಿದಂತೆ ಹಲವು ಸಮಸ್ಯೆಗಳಿಗೆ ಮುಕ್ತಿ ಸಿಗಲಿದೆ ಎಂಬ ನಿರೀಕ್ಷೆ ಇದೆ.

ಸಾಮಾನ್ಯಸಭೆಯಲ್ಲಿ ಪಟ್ಟಣದ ಅಭಿವೃದ್ಧಿ ಯೋಜನೆಗಳು ಜನರ ಸಮಸ್ಯೆಗಳ ಪರಿಹಾರ ಮೂಲಸೌಕರ್ಯ ಅಭಿವೃದ್ಧಿ ಕುರಿತು ಮುಖ್ಯವಾಗಿ ಚರ್ಚೆಯಾಗಲಿದೆ. ಪಟ್ಟಣದ ಚಿತ್ರಣ ಬದಲಿಸಲು ಸಭೆ ಪೂರಕವಾಗಲಿದೆ.-ರಮೇಶ್ ಕೆ.ಜಿ, ಮುಖ್ಯಾಧಿಕಾರಿ ಬಿಡದಿ ಪುರಸಭೆಶಾಸಕರು ಪುರಸಭೆ ಅಧ್ಯಕ್ಷರು ಸದಸ್ಯರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಪಟ್ಟಣದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ.

ಕಡೆಗೂ ಮೂರು ವರ್ಷಗಳ ಬಳಿಕ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳ ಮೀಸಲಾತಿ ಅಧಿಸೂಚನೆ ಇದೇ ಸೆ. 9ರಂದು ಪ್ರಕಟವಾಯಿತು. ನಂತರ ನಡೆದ ಚುನಾವಣೆಯಲ್ಲಿ ಎರಡೂ ಸ್ಥಾನಗಳು ಹೆಚ್ಚಿನ ಸದಸ್ಯರನ್ನು ಜೆಡಿಎಸ್ ಪಾಲಾದವು. ನೂತನ ಅಧ್ಯಕ್ಷ-ಉಪಾಧ್ಯಕ್ಷರು ಅಧಿಕಾರಕ್ಕೆ ಬಂದು ಎರಡು ತಿಂಗಳ ಬಳಿಕ ಮೊದಲ ಸಾಮಾನ್ಯ ಸಭೆ ನಡೆಯುತ್ತಿದೆ.

**ಮೊದಲ ಸಾಮಾನ್ಯಸಭೆಯಲ್ಲಿ ಶಾಸಕರೂ ಭಾಗವಹಿಸುವುದರಿಂದ ಪಟ್ಟಣದ ಅಭಿವೃದ್ಧಿಯ ನೀಲನಕ್ಷೆ ಏನಿರಲಿದೆ ಎಂಬ ಕುತೂಹಲ ಹೆಚ್ಚಾಗಿದೆ. -ಹರಿಪ್ರಸಾದ್, ಅಧ್ಯಕ್ಷ ಬಿಡದಿ ಪುರಸಭೆ ಅಧಿಕಾರಕ್ಕೆ ಬಂದು ಎರಡು ತಿಂಗಳ ನಂತರ ಸಾಮಾನ್ಯ ಸಭೆ ನಡೆಯುತ್ತಿದೆ. ಮೂಲಸೌಕರ್ಯಗಳಾದ ಯುಜಿಡಿ ರಸ್ತೆ ಬೀದಿದೀಪ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಒತ್ತು ನೀಡುತ್ತಿದ್ದೇವೆ.**
**-ನವೀನ್ ಕುಮಾರ್ ಎಂ. ಸದಸ್ಯ ಬಿಡದಿ ಪುರಸಭೆ**

**ಮೂಲಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. 3 ವರ್ಷ ಆಡಳಿತಾಧಿಕಾರಿ ದರ್ಬಾರ್ 2021ರ ಡಿ. 27ರಂದು ಪುರಸಭೆಗೆ ಚುನಾವಣೆ ಜನಪ್ರತಿನಿಧಿಗಳು ಆಯ್ಕೆಯಾಗಿದ್ದರು. ಆದರೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ಪ್ರಕಟವಾಗದ ಕಾರಣ ಮೂರು ವರ್ಷವಾದರೂ ಆಡಳಿತ ಮಂಡಳಿ ಇದ್ದೂ ಇಲ್ಲದಂತಿತ್ತು. ಆಡಳಿತಾಧಿಕಾರಿ ಸೇರಿದಂತೆ ಅಧಿಕಾರಿಗಳ ದರ್ಬಾರ್ ನಡೆಯುತ್ತಿತ್ತು ಇದರಿಂದಾಗಿ ಸ್ಥಳೀಯ ಜನಪ್ರತಿನಿಧಿಗಳ ಕೈ ಕಟ್ಟಿ ಹಾಕಿದಂತಾಗಿತ್ತು.**

# ಮಿನಿ ನ್ಯೂಸ್

## ಹನುಮ ಜಯಂತಿ ಪೋಸ್ಟರ್ ಬಿಡುಗಡೆ ಮಾಡಿದ ಶಿವರಾಜ್ ಕುಮಾರ್

• ಉದಯವಾಹಿನಿ ಚಾಮರಾಜನಗರ

ನಗರದಲ್ಲಿ ಡಿ.21ರಂದು ಹನುಮ ಜಯಂತಿಯ ಪ್ರಯುಕ್ತ ನಡೆಯುವ ಹನುಮ ಜಯಂತ್ಯುತ್ಸವದ ಕಾರ್ಯಕ್ರಮದ ಪೋಸ್ಟರ್ ಅನ್ನು ನಟ ಶಿವರಾಜಕುಮಾರ್ ಬಿಡುಗಡೆ ಮಾಡಿ ಶುಭ ಹಾರೈಸಿದರು. ಹನುಮ ಜಯಂತಿ ನಗರದಲ್ಲಿ ವಿಜೃಂಭಣೆಯಿಂದ ನಡೆಯುತ್ತಿದ್ದು ಪ್ರಮುಖ ಬೀದಿಗಳಲ್ಲಿ ವಿವಿಧ ಕಲಾತಂಡಗಳ ಪ್ರದರ್ಶನ ಹಾಗೂ ಹನುಮನ ಮೂರ್ತಿಯ ಮೆರವಣಿಗೆ ನಡೆಯಲಿದೆ. ಪೋಸ್ಟರ್ ಬಿಡುಗಡೆ ಸಂದರ್ಭ ಶಿವರಾಜ್ ಕುಮಾರ್ ಪತ್ನಿ ಗೀತಾ ಶಿವರಾಜ ಕುಮಾರ್, ಸಮಿತಿಯ ಪ್ರವೀಣ್, ಪೃಥ್ವಿ, ರಾಜು, ಯಶವಂತ್, ಮಧು, ಪ್ರಸನ್ನ, ಭಾನುಪ್ರಕಾಶ್, ಹರ್ಷದ್ ಗೌಡ, ಪ್ರಮೋದ್, ಹೇಮಂತ್, ಅಭಿಮಾನಿಗಳಾದ ನಾಗೇಶ್ ಟಗರು, ಕಾರ್ತಿಕ್ ಪವರ್, ಡೈರಿ ಮಂಜು ಇದ್ದರು.

## ಹಸಿ ಒಣ ಕಸ ವಿಂಗಡಿಸಿ ನೀಡಿ: ಶ್ರೀನಿಧಿ ಕುದರ್

• ಉದಯವಾಹಿನಿ ಚಾಮರಾಜನಗರ

ನಗರದ ಸ್ವಚ್ಛತೆ ಕಾಪಾಡುವ ದೃಷ್ಟಿಯಿಂದ ಪ್ರತಿಯೊಬ್ಬರೂ ಹಾಸಿ ಹಾಗೂ ಒಣ ಕಸವನ್ನು ಬೇರ್ಪಡಿಸಿ ಕಸ ಸಂಗ್ರಹಿಸುವ ವಾಹನಕ್ಕೆ ನೀಡಬೇಕು ಎಂದು ಉದ್ಯಮಿ ಶ್ರೀನಿಧಿ ಕುದರ್ ಸಲಹೆ ನೀಡಿದರು. ನಗರದ 13ನೇ ವಾರ್ಡನಲ್ಲಿ ನಗರಸಭೆ ವತಿಯಿಂದ ಆಯೋಜಿಸಿದ್ದ ಹಸಿಕಸ, ಒಣಕಸ ಸಂಗ್ರಹಣೆ ಬುಟ್ಟಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಗರಸಭೆಗೆ ಕಸ ವಿಲೇವಾರಿ ಬಹುದೊಡ್ಡ ಸಮಸ್ಯೆಯಾಗಿದೆ. ಹಸಿ ಹಾಗೂ ಒಣ ಕಸವನ್ನು ಸಾರ್ವಜನಿಕರು ಪ್ರತ್ಯೇಕಗೊಳಿಸಿ ನೀಡಿದರೆ ಸಮಸ್ಯೆಗೆ ಪರಿಹಾರ ಸಿಗಬಹುದು ಎಂಬ ದೃಷ್ಟಿಯಿಂದ ನಗರಸಭೆ ಬುಟ್ಟಿಗಳನ್ನು ನೀಡುತ್ತಿದೆ ಎದರು.
ಕಸದ ಬುಟ್ಟಿಗಳನ್ನು ಅನ್ಯ ಕಾರ್ಯಕ್ಕೆ ಬಳಸದೆ ಹಸಿ-ಒಣಕಸವನ್ನು ಬೇರ್ಪಡಿಸಿ ನೀಡಲು ಬಳಸಬೇಕು. ವಾರ್ಡ್ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ನಗರಸಭೆ ಜೊತೆ ಸಹಕರಿಸಬೇಕು ಎಂದು ಸಲಹೆ ನೀಡಿದರು. ವಾರ್ಡ್ ಸದಸ್ಯೆ ಕಲಾವತಿ ರವಿಕುಮಾರ್, ನಗರಸಭೆ ಪರಿಸರ ಎಂಜಿನಿಯರ್ ರೂಪಾ, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ಮುಖಂಡರಾದ ಮಾಧು ಹಾಗೂ ವಾರ್ಡ್ ನಿವಾಸಿಗಳು ಇದ್ದರು.

## ಡೈನಮೈಟ್ ಸ್ಫೋಟ: ಇಬ್ಬರಿಗೆ ಗಾಯ

• ಉದಯವಾಹಿನಿ ಮಧುಗಿರಿ

ಕಲ್ಲು ಬಂಡೆಗಳನ್ನು ಸೀಳುವಾಗ ಡೈನಮೈಟ್ ಸ್ಫೋಟಿಸಿ ಇಬ್ಬರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಸಮೀಪ ಮಂಗಳವಾರ ನಡೆದಿದೆ. ತಾಲ್ಲೂಕಿನ ಡಿ.ವಿ.ಹಳ್ಳಿ ಗ್ರಾಮದ ಮಂಜುನಾಥ್ (32) ಹೊಸಹಳ್ಳಿ ಗ್ರಾಮದ ಕೋಟಯ್ಯ (34) ಗಾಯಗೊಂಡವರು. ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಹೊರವಲಯದಲ್ಲಿ ಕಲ್ಲು ಬಂಡೆ ಕಿತ್ತು, ಮಾರಾಟಮಾಡಿ ಜೀವನ ಸಾಗಿಸುತ್ತಿದ್ದರು. ಬಂಡೆಗಳನ್ನು ಕೀಳಲು ಡೈನಮೈಟ್ ಇಟ್ಟಿದ್ದಾರೆ. ಸಾಕಷ್ಟು ಸಮಯವಾದರೂ ಸಿಡಿದಿಲ್ಲ. ಹತ್ತಿರ ಹೋಗಿ ನೋಡಲು ಮುಂದಾದಾಗ ಡೈನಮೈಟ್ ಸ್ಫೋಟಿಸಿ ಗಾಯಗೊಂಡಿದ್ದಾರೆ. ತಕ್ಷಣ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

## ರಸ್ತೆಯಲ್ಲಿ ಹಗಲಲ್ಲೇ ಆನೆ ಮರಿಗೆ ದ್ವಿಚಕ್ರ ವಾಹನ ಸವಾರರು ಕೀಟಲೆ

• ಉದಯವಾಹಿನಿ ಗುಂಡ್ಲುಪೇಟೆ(ಚಾಮರಾಜನಗರ)

ಬಂಡೀಪುರ-ವಯನಾಡು ರಸ್ತೆಯಲ್ಲಿ ಹಗಲಲ್ಲೇ ಆನೆ ಮರಿಗೆ ದ್ವಿಚಕ್ರ ವಾಹನ ಸವಾರರು ಕೀಟಲೆ ಮಾಡಿರುವ ವಿಡಿಯೋವೊಂದು ವೈರಲ್ ಆಗಿದ್ದು, ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಸೇರಿ ಹಲವರು ಟ್ವಿಟ್ ಮಾಡಿ ಆಕ್ರೋಶ ಹೊರ ಹಾಕಿದ್ದಾರೆ. ಬಂಡೀಪುರ ರಾತ್ರಿ ಸಂಚಾರಕ್ಕೆ ಅವಕಾಶ ಕೊಡಬೇಕೆಂದು ಸಂಸದೆ ಪ್ರಿಯಾಂಕಾ ಗಾಂಧಿ ಒತ್ತಾಯಿಸುತ್ತಿರುವ ಸಂದರ್ಭದಲ್ಲೇ ಬಂಡೀಪುರ- ವಯನಾಡು ಮಾರ್ಗವಾಗಿ ಕೇರಳ ರಸ್ತೆಯಲ್ಲಿ ಸಂಚರಿಸುತ್ತಿರುವ ವಾಹನ ಸವಾರರು ರಸ್ತೆಯಲ್ಲಿ ಆನೆ ಮರಿಯೊಂದನ್ನು ಕಂಡು ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಂಡಿದ್ದಾರೆ. ನಂತರ ಎರಡು ಬೈಕ್ ಸವಾರರು ವಾಪಸ್ ಆನೆ ಮರಿ ಬಳಿ ಬಂದು ಕೀಟಲೆ ಮಾಡಿದ್ದಾರೆ. ಈ ವೇಳೆ ಆನೆ ಗಾಂಬರಿಗೊಂಡು ಸವಾರರ ಮೇಲೆರಗಲು ಮುಂದಾದಾಗ ವೇಗದಲ್ಲಿ ವಾಹನ ಚಾಲನೆ ಮಾಡಿಕೊಂಡು ತೆರಳಿದ್ದಾರೆ. ಈ ವಿಡಿಯೋವನ್ನು ಟ್ಯಾಗ್ ಮಾಡಿ ಎಕ್ಸ್‌ನಲ್ಲಿ ಟೀಟ್ ಮಾಡಿರುವ ಮಾಜಿ ಸಿಎಂ ಡಿ.ವಿ.ಸದಾನಂದಗೌಡ, ಬಂಡೀಪುರದಲ್ಲಿ ರಾತ್ರಿ ಸಂಚಾರ ನಿರ್ಬಂಧ ತೆರವುಗೊಳಿಸಲು ರಾಷ್ಟ್ರೀಯ ಕಾಂಗ್ರೆಸ್ ಮುಂದಾಗಿದೆ. ರಾತ್ರಿ ಸಂಚಾರಕ್ಕೆ ಅವಕಾಶ ಕೊಟ್ಟರೇ ಪ್ರಾಣಿಗಳಿಗೆ ತೊಂದರೆಯಾಗಲಿದೆ ಎಂದು ಬರೆದುಕೊಂಡಿದ್ದಾರೆ. ಇದಕ್ಕೆ ಹಲವು ಮಂದಿ ಪುಷ್ಟಿ ನೀಡಿ ಟ್ವಿಟ್ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ವಕೀಲ ವೃತ್ತಿಯ ಘನತೆ ಕಾಪಾಡಿ ವಿರಾಜಪೇಟೆ ಕ್ಷೇತ್ರದ ಶಾಸಕ

• ಉದಯವಾಹಿನಿ ಮಡಿಕೇರಿ

ವಕೀಲ ವೃತ್ತಿಯ ಘನತೆಯನ್ನು ಸದಾ ಎತ್ತರದಲ್ಲಿರುವಂತೆ ಪ್ರತಿಯೊಬ್ಬ ವಕೀಲರೂ ಗಮನಹರಿಸಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದರು. ಹೊರವಲಯದಲ್ಲಿನ ಖಾಸಗಿ ರೆಸಾರ್ಟ್‌ನಲ್ಲಿ ಮಡಿಕೇರಿ ವಕೀಲರ ಸಂಘದ ವತಿಯಿಂದ ನಡೆದ ವಕೀಲರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಯುವಪೀಳಿಗೆಯ ವಕೀಲರಿಗೆ ಹಿರಿಯ ವಕೀಲರು ಪ್ರೋತ್ಸಾಹ ನೀಡುವ ಮಾರ್ಗದರ್ಶಿಗಳಾಗಬೇಕು ಎಂದರು. ರಾಜ್ಯ ಸರ್ಕಾರದ ಹೆಚ್ಚುವರಿ ಅಡ್ವಕೇಟ್ ಜನರಲ್ ಎನ್.ದೇವದಾಸ್ ಮಾತನಾಡಿ, 75 ವರ್ಷಗಳನ್ನು ಪೂರೈಸಿರುವ ದೇಶದ ಸಂವಿಧಾನ ಅಪಾಯದಲ್ಲಿದೆ ಎಂಬ ಕೂಗು ಕೇಳಿಬಂದಿರುವ ಈ ಕಾಲಘಟ್ಟದಲ್ಲಿ ವಕೀಲರು ಸಂವಿಧಾನದ ಸಂರಕ್ಷರಾಗುವತ್ತ ಮುಂದಡಿ ಇರಿಸಬೇಕು' ಎಂದು ತಿಳಿಸಿದರು. ಮಡಿಕೇರಿ ನ್ಯಾಯಾಲಯಕ್ಕೆ 1,30 ಕೋಟಿ ಮೊತ್ತದ ತಡೆಗೋಡೆ ಕಾಮಗಾರಿಗೆ ಸರ್ಕಾರದಿಂದ ಮಂಜುರಾತಿ ಕೊಡಿಸುವಂತೆ ವಕೀಲರ ಸಂಘದ ವತಿಯಿಂದ ಅಧ್ಯಕ್ಷ ನಿರಂಜನ್ ಅವರು ಪೊನ್ನಣ್ಣ ಅವರಿಗೆ ಮನವಿ ಪತ್ರ ನೀಡಿದರು. ಮಡಿಕೇರಿ ವಕೀಲರ ಸಂಘದ ಪ್ರಧಾನ ಡಿ.ಎಂ.ಕೇಶವ, ಉಪಾಧ್ಯಕ್ಷ ಎಂ.ಪಿ.ನಾಗರಾಜ್, ಖಜಾಂಜಿ ಜಿ.ಆರ್. ರವಿಶಂಕರ್, ಉಪಾಧ್ಯಕ್ಷ ಪವನ್ ಪೆಮ್ಮಯ್ಯ, ಎಂ.ಆರ್ ಜಿತೇಂದ್ರ, ಕಪಿಲ್ ಕುಮಾರ್ ಭಾಗವಹಿಸಿದ್ದರು. ವಕೀಲರ ಸಾಧಕ ಮಕ್ಕಳಿಗೆ ಬಹುಮಾನ, ಕ್ರೀಡಾಕೂಟದಲ್ಲಿ ವಿಜೇತರಾದ ವಕೀಲರಿಗೆ ಬಹುಮಾನ ವಿತರಿಸಲಾಯಿತು.

## ಅಂತರಾಳದಿಂದ... EDITORIAL

# ಬಿಜೆಪಿ ಭಿನ್ನಮತ ಅತ್ತ ಧರಿ, ಇತ್ತ ಪುಲಿ


ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ಹೇಳಿಕೆ ನೀಡಿರುವ ಕಾರಣಕ್ಕಾಗಿ ಕೊನೆಗೂ ಒಲ್ಲದ ಮನಸ್ಸಿನಿಂದ ವರಿಷ್ಠರು ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಶೋಕಾಸ್ ನೋಟಿಸ್ ರವಾನಿಸಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಅವರು ತಮ್ಮ ಹೇಳಿಕೆಗಳ ಮೂಲಕ ರಾಜ್ಯ ಬಿಜೆಪಿಗೆ ಮಾಡಿರುವ ಹಾನಿಗೆ ಹೋಲಿಸಿದರೆ ಅವರನ್ನು ಯಾವತ್ತೋ ವರಿಷ್ಠರು ಪಕ್ಷದಿಂದ ಅಮಾನತು ಮಾಡಬೇಕಾಗಿತ್ತು ಆದರೆ ಬಿಜೆಪಿ ನಾಯಕರು ಮೌನವಾಗಿ ಯತ್ನಾಳ್ ಬಂಡಾಯಕ್ಕೆ ಕುಮ್ಮಕ್ಕು ನೀಡುತ್ತಲೇ ಬಂದಿದ್ದರು ಯತ್ನಾಳ್ ಟೀಕೆಗಳಿಗೆ ಯಾವುದೇ ಪ್ರತಿಕ್ರಿಯೆ ನೀಡದಿರುವುದರ ಅರ್ಥ, ಪರೋಕ್ಷವಾಗಿ ಆ ಟೀಕೆಗಳಿಗೆ ಸಮ್ಮತಿ ವ್ಯಕ್ತಪಡಿಸಿದಂತೆ ಇದೀಗ ಯತ್ನಾಳ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ತಮ್ಮದೇ ಪರ್ಯಾಯ ಸಮಾವೇಶಗಳನ್ನು ಹಮ್ಮಿಕೊಂಡಿದ್ದಾರೆ. ಬೆಳಗಾವಿಯಲ್ಲಿ ವಕ್ಫ್‌ನ್ನು ವಿರೋಧಿಸುವ ನೆಪದಲ್ಲಿ ಯತ್ನಾಳ್ ಹಮ್ಮಿಕೊಂಡಿರುವುದು ಯಡಿಯೂರಪ್ಪ ವಿರೋಧಿ ಸಮಾವೇಶಗಳನ್ನು ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ನಾಯಕತ್ವವನ್ನು ಯಾವುದೇ ರೀತಿಯಲ್ಲಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎನ್ನುವುದನ್ನು ಈ ಸಮಾವೇಶದ ಮೂಲಕ ಅವರು ವರಿಷ್ಠರಿಗೆ ಸ್ಪಷ್ಟಪಡಿಸಿದ್ದಾರೆ. ನಿಜಕ್ಕೂ ವರಿಷ್ಠರಿಗೆ ಯತ್ನಾಳ್ ವಿರುದ್ಧ ಕ್ರಮ ತೆಗೆದುಕೊಳ್ಳುವ ಉದ್ದೇಶ ವಿದ್ದರೆ, ಅವರು ಸಮಾವೇಶವನ್ನೇ ನಡೆಸದಂತೆ ನೋಡಿಕೊಳ್ಳಬೇಕಾಗಿತ್ತು. '

> **ಇದೇ ಸಂದರ್ಭದಲ್ಲಿ ಯತ್ನಾಳ್‌ನ ಬೀಸು ಹೇಳಿಕೆಗಳು ಇತ್ತೀಚೆಗೆ ಆರೆಸ್ಸೆಸ್‌ಗೇ ಗಾಯಗಳನ್ನುಂಟು ಮಾಡುತ್ತಿವೆ. ಮುಖ್ಯವಾಗಿ ಬಸವಣ್ಣ ಕುರಿತಂತೆ ಯತ್ನಾಳ್ ಆಡಿರುವ ಮಾತು, ಲಿಂಗಾಯತರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಬಸವಣ್ಣ ಅವರು ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರು' ಎಂದು ಧ್ವನಿಸುವ ಹೇಳಿಕೆಯನ್ನು ಮಾತಿನ ಮಧ್ಯೆ ನೀಡಿರುವುದು ಲಿಂಗಾಯತ ಸಮುದಾಯವನ್ನು ಕೆರಳಿಸಿದೆ. ಯಡಿಯೂರಪ್ಪ ಬಣ ಕೂಡ ಯತ್ನಾಳ್ ವಿರುದ್ಧ ಈ ಹೇಳಿಕೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತದೆ. ಈಗಾಗಲೇ ಲಿಂಗಾಯತ ಧರ್ಮದ ಹಲವು ಮುಖಂಡರು, ಸ್ವಾಮೀಜಿಗಳು ಯತ್ನಾಳ್ ವಿರುದ್ಧ ಹೇಳಿಕೆಗಳನ್ನು ನೀಡಿದ್ದಾರೆ.**

'ಪರ್ಯಾಯ ಸಮಾವೇಶವನ್ನೇನಾದರೂ ಹಮ್ಮಿಕೊಂಡರೆ ಕ್ರಮ ತೆಗೆದುಕೊಳ್ಳುತ್ತೇವೆ' ಎನ್ನುವ ಎಚ್ಚರಿಕೆಯನ್ನು ಆರಂಭದಲ್ಲೇ ನೀಡಬೇಕಾಗಿತ್ತು. ಮಾತ್ರವಲ್ಲ ಎಚ್ಚರಿಕೆಯನ್ನು ಮೀರಿ ಸಮಾವೇಶ ನಡೆಸಿದ ಕಾರಣಕ್ಕೆ ಪಕ್ಷದಿಂದ ವಜಾಗೊಳಿಸಿ, ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ನೈತಿಕ ಧೈರ್ಯ ನೀಡಬೇಕಾಗಿತ್ತು ವಿಪರ್ಯಾಸವೆಂದರೆ ಸಮಾವೇಶ ಆರಂಭಗೊಂಡು ಹಲವು ದಿನಗಳು ಕಳೆದಿವೆಯಾದರೂ, ಈ ಪ್ರತಿಭಟನಾ ಸಮಾವೇಶಕ್ಕೂ ಬಿಜೆಪಿಗೂ ಯಾವುದೇ ಸಂಬಂಧವಿಲ್ಲ ಎನ್ನುವ ಸ್ಪಷ್ಟೀಕರಣವನ್ನು ವರಿಷ್ಠರು ಈವರೆಗೆ ನೀಡಿಲ್ಲ. ಪಕ್ಷವನ್ನು ಉಲ್ಲಂಘಿಸಿ ಸಮಾವೇಶ ನಡೆಸಿದ್ದಕ್ಕಾಗಿ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಶೋಕಾಸ್ ನೋಟಿಸನ್ನು ರವಾನಿಸಿ ಕೈ ತೊಳೆದುಕೊಂಡಿದ್ದಾರೆ.

ಸಮಯ ಸಂದರ್ಭ ಸಿಕ್ಕಿದಾಗಲೆಲ್ಲ ಬಿಜೆಪಿ ವರಿಷ್ಠರು ಯಡಿಯೂರಪ್ಪರನ್ನು ಬಗ್ಗು ಬಡಿಯಲು ಪ್ರಯತ್ನಿಸಿದ್ದರು. ಯಡಿಯೂರಪ್ಪರನ್ನು ಮೂಲೆಗುಂಪು ಮಾಡಿ ಪಕ್ಷವನ್ನು ಮುನ್ನಡೆಸಲು ಸಾಧ್ಯವಿಲ್ಲ ಎನ್ನುವ ಅನಿವಾರ್ಯ ಸ್ಥಿತಿಯಲ್ಲಿ ವಿಜಯೇಂದ್ರ ಅವರಿಗೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನವನ್ನು ನೀಡಲಾಯಿತು. ತನ್ನ ಬೆನ್ನಿಗಿರುವ ಲಿಂಗಾಯತ ಶಕ್ತಿಯನ್ನು ತೋರಿಸಿ, ವರಿಷ್ಠರಿಂದ ರಾಜ್ಯಾಧ್ಯಕ್ಷ ಸ್ಥಾನವನ್ನು ಯಡಿಯೂರಪ್ಪ ಕಿತ್ತುಕೊಂಡಿದ್ದರು. ಒಂದೆಡೆ ಯಡಿಯೂರಪ್ಪ ಬಣಕ್ಕೆ ಪಕ್ಷದ ನಾಯಕತ್ವವನ್ನು ನೀಡುತ್ತಲೇ, ಮಗದೊಂದೆಡೆ ಯಡಿಯೂರಪ್ಪ ವಿರೋಧಿ ಶಕ್ತಿಗಳನ್ನು ವರಿಷ್ಠರೇ ಸಾಕಿ ಬೆಳೆಸಿದ್ದಾರೆ. ಮೂರನೇ ದರ್ಜೆಯಲ್ಲಿ ದ್ವೇಷ ಭಾಷಣ ಮಾಡುತ್ತಾ ಸಮಾಜದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣ ಮಾಡುವಲ್ಲಿ ಕುಖ್ಯಾತನಾಗಿರುವ, ಅದನ್ನೇ ತನ್ನ ರಾಜಕೀಯ ಹೆಗ್ಗಳಿಕೆಯಾಗಿಸಿಕೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್ ಅವರ ಹಿಂದೆ ಆರೆಸ್ಸೆಸ್ ನಾಯಕರಿದ್ದಾರೆ. ಲಿಂಗಾಯತ ಸಮುದಾಯಕ್ಕೆ ಸೇರಿದ ನಾಯಕನಾಗಿದ್ದರೂ ಯಡಿಯೂರಪ್ಪರಿಗಿಂತ ಪರಿಣಾಮಕಾರಿಯಾಗಿ ಆರೆಸ್ಸೆಸ್ ಕಚೇರಿಯ ಗೇಟ್ ಕೀಪರ್ ಕೆಲಸ ಮಾಡಬಲ್ಲೆ ಎನ್ನುವುದನ್ನು ಯತ್ನಾಳ್ ಈಗಾಗಲೇ ಆರೆಸ್ಸೆಸ್ ನಾಯಕರ ಮುಂದೆ ಸಾಬೀತು ಪಡಿಸಿದ್ದಾರೆ. ಆದುದರಿಂದಲೇ, ಯಡಿಯೂರಪ್ಪ ಬಣವನ್ನು ಬಗ್ಗು ಬಡಿಯಲು ಯತ್ನಾಳರನ್ನು ಬಿಜೆಪಿಯೊಳಗಿನ ಗುಂಪೇ ಬಳಸಿಕೊಳ್ಳುತ್ತಿದೆ. ಯತ್ನಾಳ್ ವಿರುದ್ಧ ಕ್ರಮ ತೆಗೆದುಕೊಳ್ಳಲು ಅದೇ ಗುಂಪು ಅಡ್ಡಿಯಾಗಿದೆ. ಯಡಿಯೂರಪ್ಪ ಅವರ ಸುತ್ತಮುತ್ತ ಇರುವ ನಾಯಕರೇ ಪರೋಕ್ಷವಾಗಿ ಯತ್ನಾಳ್‌ಗೆ ಕುಮ್ಮಕ್ಕು ನೀಡುತ್ತಾ ಬರುತ್ತಿರುವುದರಿಂದ, ಶೋಕಾಸ್ ನೋಟಿಸ್ ವಿಶೇಷ ಪರಿಣಾಮವನ್ನು ಬೀರಲಾರದು. ನೋಟಿಸ್ ಸ್ವೀಕರಿಸಿದ ಬಳಿಕವೂ ಯತ್ನಾಳ್ ಅವರು ತಮ್ಮ ಪರ್ಯಾಯ ಸಮಾವೇಶದಿಂದ ಹಿಂದೆ ಸರಿದಿಲ್ಲ ಬದಲಿಗೆ ನೋಟಿಸ್‌ಗೆ ಸವಾಲು ಹಾಕುವಂತೆ ಭ್ರಷ್ಟಾಚಾರ, ಕುಟುಂಬ ರಾಜಕಾರಣದ ವಿರುದ್ಧ ತನ್ನ ಹೋರಾಟ ಮುಂದುವರಿಯುತ್ತದೆ' ಎಂದು ಹೇಳಿಕೆ ನೀಡಿದ್ದಾರೆ. ಅಂದರೆ ಯಡಿಯೂರಪ್ಪ ವಿರುದ್ಧ ಮುಂದೆಯೂ ಹೇಳಿಕೆ ನೀಡಲಿದ್ದೇನೆ ಎನ್ನುವುದು ಇದರ ಅರ್ಥವಾಗಿದೆ. ಕೊನೆಗೂ ಯತ್ನಾಳ್ ಅವರಿಗೆ ವರಿಷ್ಠರು ಜೋಕಾಸ್ ನೀಡಲು ಕಾರಣವೇನು? ಯತ್ನಾಳ್ ವಿರುದ್ಧ ಯಡಿಯೂರಪ್ಪ ವರಿಷ್ಠರಿಗೆ

ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ. ಹೀಗೆ ಆದಲ್ಲಿ ರಾಜ್ಯದಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ನನ್ನಿಂದ ಸಾಧ್ಯವಿಲ್ಲ ಎನ್ನುವ ಅರ್ಥದಲ್ಲಿ ವರಿಷ್ಠರಿಗೆ ಯಡಿಯೂರಪ್ಪ ಪತ್ರ ಬರೆದಿದ್ದಾರೆ ಎಂದು ಒಂದು ಮೂಲ ಹೇಳುತ್ತದೆ. ಸಾರ್ವಜನಿಕ ಕ್ಷಮಾಯಾಚನೆಗೆ ಒತ್ತಾಯಿಸಿದ್ದಾರೆ. ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ಯತ್ನಾಳ್ ಅವರು ಆರೆಸ್ಸೆಸ್‌ನ್ನು ಮೆಚ್ಚಿಸಲು ಹೊರಟಿದ್ದಾರೆ ಎನ್ನುವ ಆರೋಪಗಳೂ ಕೇಳಿ ಬರುತ್ತಿವೆ. ಯತ್ನಾಳ್ ವಿರುದ್ಧದ ಆಕ್ರೋಶ ನಿಧಾನಕ್ಕೆ ಬಿಜೆಪಿ ವಿರೋಧಿ ಆಕ್ರೋಶವಾಗಿ ಪರಿವರ್ತನೆಯಾಗುವ ಭಯದಿಂದ ಯತ್ನಾಳ್ ಜೊತೆಗೆ ಅಂತರ ಕಾಯುವುದು ಆರೆಸ್ಸೆಸ್ ಮತ್ತು ಬಿಜೆಪಿಯೊಳಗಿರುವ ಬ್ರಾಹ್ಮಣ ಲಾಬಿಗೆ ಅನಿವಾರ್ಯವಾಗಿದೆ. ಆದುದರಿಂದಲೇ, ಕೊನೆಗೂ ಯತ್ನಾಳ್ ವಿರುದ್ಧ ಶೋಕಾಸ್ ಎನ್ನುವ ಕಾಗದದ ಬಾಣವನ್ನು ಬಿಡಲಾಗಿದೆ. ಆದರೆ ಯತ್ನಾಳರನ್ನು ಪಕ್ಷದಿಂದ ವಜಾ ಮಾಡಲು ಪಕ್ಷದೊಳಗಿರುವ ರಾಜ್ಯ ನಾಯಕರೇ ಅವಕಾಶ ನೀಡುವುದಿಲ್ಲ. ಆರೆಸ್ಸೆಸ್‌ನ ಒಡೆದು ಆಳುವ ರಾಜಕೀಯಕ್ಕೆ ಮೂರನೇ ದರ್ಜೆಯ ದ್ವೇಷ ಭಾಷಣದ ಮೂಲಕ, ಯತ್ನಾಳ್‌ನಂತೆ ನೆರವಾಗುವ ಇನ್ನೊಬ್ಬ ನಾಯಕ ಲಿಂಗಾಯತರಲ್ಲಿ ಇಲ್ಲ ಎನ್ನುವುದು ಅದಕ್ಕೆ ಮುಖ್ಯ ಕಾರಣ. ಆರೆಸ್ಸೆಸನ್ನು ಓಲೈಸಲು ಬಸವ ತತ್ವವನ್ನು ಬಲಿಕೊಡಲು ಸಿದ್ಧ ಎನ್ನುವುದನ್ನು ಯತ್ನಾಳ್ ಪದೇ ಪದೇ ಸಾಬೀತು ಮಾಡುತ್ತಾ ಬಂದಿದ್ದಾರೆ.



## ರಾಮಾಯಣ
### ಆಹಲ್ಯಾ ದೇವಿಗೆ ಶಾಪ ಬಂದ ವೃತ್ತಾಂತ

• ಹಿಂದಿನ ಸಂಚಿಕೆಯಿಂದ 30 ನೆಯ ಅಧ್ಯಾಯ

ಆತನು ತೀರ್ಥದಲ್ಲಿ ಸ್ನಾನಮಾಡಿ ಯಜ್ಞಪುರುಷನೋಪಾದಿ ಯಲ್ಲಿ ತನ್ನ ಪ್ರಭಾವದಿಂದ ಸುತ್ತಲೂ ಪ್ರಕಾಶವನ್ನುಂಟುಮಾಡುತ್ತಾ ಶಾಪಾನುಗ್ರಹಸಾಮರ್ಥ್ಯ ವುಳ್ಳವನಾಗಿ ಕೈಯಲ್ಲಿ ದರ್ಭೆಸಮಿತ್ತುಗಳನ್ನು ತೆಗೆದುಕೊಂಡು ಬರುತ್ತಿರುವುದನ್ನು ಕಂಡು ದೇವೇಂದ್ರನ ಮುಖಕಾಂತಿಯು ಕುಂದಿತು ಆ ಋಷಿಯು ದುಷ್ಟನಾದ ದೇವೇಂದ್ರನನ್ನು ಕಂಡು ಮನಸ್ಸಿನಲ್ಲಿ ಸಂಶಯಪಟ್ಟು, ದೇವೇಂದ್ರನು ತನ್ನ ಆಕಾರವನ್ನು ತಳೆದಿದ್ದುದರಿಂದ ತನ್ನ ಮನೆಗೆ ಹೋಗಿದ್ದನೆಂದು ನಿಶ್ಚಯಿಸಿ ಮಹಾಕೋಪದಿಂದ ಎಲೈ ದುರ್ಬುದ್ಧಿಯುಳ್ಳ ದೇವೇಂದ್ರನೆ, ನನ್ನ ಸ್ವರೂಪದಿಂದ ಮಾಡಬಾರದ ಕೃತ್ಯವನ್ನು ಮಾಡಿದೆಯಾದ್ದರಿಂದ ನಿನ್ನ ವೃಷಣವು ಕತ್ತರಿಸಿ ಬೀಳಲಿ !' ಎಂದು ಶಾಪವನ್ನು ಕೊಟ್ಟನು. ಆ ಕ್ಷಣದಲ್ಲಿಯೇ ದೇವೇಂದ್ರನ ವೃಷಣವು ಕತ್ತರಿಸಿ ನೆಲಕ್ಕೆ ಬಿತ್ತು ಗೌತಮಮುನೀಶ್ವರನು ದೇವೇಂದ್ರನನ್ನು ಶಪಿಸಿದಮೇಲೆ ತನ್ನ ಸತಿಯಾದ ಅಹಲ್ಯಾದೇವಿಯನ್ನು ನೋಡಿ 'ಅಯಿ, ನೀನು ಅನೇಕಸಾವಿರ ವರುಷಗಳು ವಾಯುವನ್ನೇ ಆಹಾರವನ್ನಾಗಿ ಮಾಡಿಕೊಂಡು ಅನ್ನಾದಿಗಳಿಲ್ಲದೆ ಭಸ್ಮದ ಮೇಲೆ ಮಲಗಿಕೊಂಡು ತಪಸ್ಸು ಮಾಡುತ್ತಾ ಯಾರಿಗೂ ಗೋಚರವಾಗದೆ ಬಿದ್ದಿರು. ದಶರಥರಾಯನ ಕುಮಾರನಾಗಿ ಮಹಾ ಪರಾಕ್ರಮಿಯಾದ ರಘುನಾಥನು ಈ ಘೋರವಾದ ವನವನ್ನು ಪ್ರವೇಶಿಸಿದಾಗ ನಿನ್ನ ಶಾಪ ವಿಮೋಚನವಾಗುವುದು ನೀನು ರಘುನಾಥನನ್ನು ಕಂಡು ಅಂತರಂಗಶುದ್ಧಿಯಿಂದ ಆತನಿಗೆ ಅರ್ಘ್ಯಪಾದ್ಯಾದಿ ಸತ್ಕಾರಗಳನ್ನು ಮಾಡಿದರೆ ನೀನು ಪುನಃ ಉತ್ತಮವಾದ ದೇಹವನ್ನು ಪಡೆಯುವೆ' ಎಂದು ಶಾಪವನ್ನು ಕೊಟ್ಟು ಈ ಆಶ್ರಮವನ್ನು ಬಿಟ್ಟು ಸಮಸ್ತದೇವತೆಗಳೂ ಗಂಧರ್ವರೂ ದೇವರ್ಷಿಗಳೂ ಇರುವಂಥ ಹಿಮವತ್ಪರತಕ್ಕೆ ಹೋಗಿ ಆ ಪರ್ವತದ ಕೋಡುಗಲ್ಲಿನಲ್ಲಿ ತಪಸ್ಸನ್ನು ಮಾಡುತ್ತಿದ್ದನು.

### ಅಹಲ್ಯಾ ಶಾಪ ನಿನೋಚನೆ

ಶ್ರೀರಾಮ, ಆಮೇಲೆ ವೃಷಣರಹಿತನಾದ ದೇವೇಂದ್ರನು ಯಜ್ಞಪುರುಷ ಸಿದ್ಧ ಚಾರಣ ಗಂಧರ್ವರು ಮೊದಲಾದ ದೇವತೆಗಳ ಬಳಿಗೆ ಹೋಗಿ 'ದೇವತೆಗಳಿರಾ, ಗೌತಮಮುನೀಶ್ವರನಿಗೆ ಕೋಪವನ್ನು ಹುಟ್ಟಿಸಿ ಆತನ ತಪಸ್ಸಿಗೆ ವಿಘ್ನ ಮಾಡಿ ದೇವತೆಗಳ ಕಾವ್ಯವನ್ನು ಸಾಧಿಸಿದೆನು ಅದರಿಂದ ಆ ಮುನೀಶ್ವರನು ಕೋಪಗೊಂಡು ಶಪಿಸಲು ನಾನು ವೃಷಣರಹಿತನಾದೆನು. ಅಹಲ್ಯಾದೇವಿಯು ಆ ಮುನೀಶ್ವರನಿಂದ ನಿರಾಕರಿಸಲ್ಪಟ್ಟವಳಾದಳು. ಎಲೈ ದೇವತೆಗಳಿರಾ, ನಿಮ್ಮ ಕಾರಕ್ಕಾಗಿ ಶಾಪವನ್ನು ಪಡೆದು ವೃಷಣವನ್ನು ಕಳೆದುಕೊಂಡ ನನಗೆ ಮೊದಲಿನ ಹಾಗೆಯೇ ವೃಷಣವುಂಟಾಗುವಂತೆ ಯತ್ನ ಮಾಡಿರಿ' ಎಂದು ಹೇಳಿದನು

ಮುಂದುವರಿಯುವುದು...

# ಕಣ್ಮನ ಸೂರೆಗೊಂಡ ಕಾವ್ಯಶ್ರೀಯ ನಾಟ್ಯವಿಲಾಸ



**ಕಲಾ ಸಾಹಿತ್ಯ**
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

• ಉದಯವಾಹಿನಿ, ವಿಶೇಷ

ಅದೊಂದು ನೂಪುರ ನಾದದ ಹಿತವಾದ ಸಂಜೆ. ಖ್ಯಾತ ಕಲಾನಿಧಿ ಆರ್ಟ್ಸ್' ನೃತ್ಯ ಸಂಸ್ಥೆಯ ನಾಟ್ಯಗುರು ವಿದುಷಿ. ಪವಿತ್ರ ಶ್ರೀಧರ್ ಬದ್ಧತೆಯ ಅವರ ನುರಿತ ಗರಡಿಯಲ್ಲಿ ರೂಪುಗೊಂಡ ನೃತ್ಯಶಿಲ್ಪ ಕು. ಕಾವ್ಯಶ್ರೀ ಮನಂ ಯಲಹಂಕದ ಕಲಾನಿಧಿ ಆರ್ಟ್ಸ್ ಸಭಾಂಗಣದಲ್ಲಿ ವಿದ್ಯುಕ್ತವಾಗಿ ತನ್ನ ಗೆಜ್ಜೆಪೂಜೆಯನ್ನು ನೆರವೇರಿಸಿಕೊಂಡಳು.

ಬಾಲಪ್ರತಿಭೆ ಕಾವ್ಯಶ್ರೀಯ ಕಣ್ಮನ ಸೆಳೆದ ಪ್ರಸ್ತುತಿ ಅವಳ ಗೆಜ್ಜೆಪೂಜೆಯ ಮೊದಲಹೆಜ್ಜೆಗಳು ಅನಿಸದೆ, ಪಳಗಿದ ನರ್ತಕಿಯ ರಮಣೀಯ ನೃತ್ಯ ಪ್ರದರ್ಶನ ಎನಿಸಿತು. ಅವಳ ನಿರಾಯಾಸ ನರ್ತನದ ಒಂದೊಂದು ಭಾವಾಭಿವ್ಯಕ್ತಿಯೂ, ಅಪ್ರತಿಮ ಭಂಗಿಗಳಿಂದ ವಿಸ್ಮಯಗೊಳಿಸಿತು. ವೈವಿಧ್ಯಪೂರ್ಣ ನೃತ್ತಗಳ ವಿನ್ಯಾಸ ಮನಸೂರೆಗೊಂಡಿತು. ಪವಿತ್ರ ಶ್ರೀಧರ್ ಅವರ ಸುಮನೋಹರ ನೃತ್ಯ ಸಂಯೋಜನೆಯಲ್ಲಿ ರೂಪುಗೊಂಡ ಕೃತಿಗಳನ್ನು ಅಂಗಶುದ್ಧವಾಗಿ ಯಾವ ಅರೆಕೊರೆಯಿಲ್ಲದೆ, ಮಿಂಚಿನ ಸಂಚಾರದ ನೃತ್ತ-ಮನೋಹರ ಭಾವ-ಭಂಗಿಗಳಿಂದ ಸಾಕ್ಷಾತ್ಕರಿಸಿ ಮಿಂಚಿದ್ದಳು ಕಲಾವಿದೆ ಕಾವ್ಯಶ್ರೀ. ನಗುಮೊಗ-ಆತ್ಮವಿಶ್ವಾಸದಿಂದ ಕಲಾವಿದೆ, ರಂಗವನ್ನು ಪ್ರವೇಶಿಸಿದ ಬಗೆಯೇ ವಿಶಿಷ್ಟವಾಗಿತ್ತು. ಬಾಲಮುರಳಿ ಕೃಷ್ಣ ಅವರ ರಚನೆಯ ಪುಷ್ಪಾಂಜಲಿ' ಯಲ್ಲಿ ಗುರು-ಹಿರಿಯರಿಗೆ, ದೇವಾನುದೇವತೆಗಳಿಗೆ ವಾದ್ಯ ನಿಪುಣ ವಿದ್ವಾಂಸರಿಗೆ ಮತ್ತು ಸಭಾಸದನದ ಕಲಾರಸಿಕರಿಗೆ ತನ್ನ ಸುಂದರ ನೃತ್ತಗಳ ಮೂಲಕ ನಾಟ್ಯನಮನ ಸಲ್ಲಿಸಿದಳು. ಕಾವ್ಯಶ್ರೀ, ತನ್ನ ಭಾವಪೂರ್ಣ ಮುಖಾಭಿವ್ಯಕ್ತಿಯಿಂದ, ಆಂಗಿಕಾಭಿನಯ- ಶಿಲ್ಪ ಸದೃಶ ಭಂಗಿಗಳಿಂದ ಪ್ರಥಮ ಪೂಜಿತ ಗಂ ಗಂ ಗಣಪತಿಯನ್ನು ಆರಾಧಿಸಿದ ಬಗೆ ಮುದ ನೀಡಿತು. ಅನಂತರ ಪ್ರಸ್ತುತವಾದ ದೇವ ಮುರುಗನ ಕುರಿತ ಕವಿತ್ವಂ ಷಣ್ಮುಖನ ಸೌಂದರ್ಯ-ವೈಶಿಷ್ಟ್ಯಗಳನ್ನು ಕಲಾವಿದೆ ತನ್ನ ಶಕ್ತಿಶಾಲಿಯಾದ ಆಂಗಿಕಾಭಿನಯದ ಮೂಲಕ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದಳು. ಗುರು ಪವಿತ್ರ ಅವರ ಸುಶ್ರಾವ್ಯ ಗಾಯನದ ಜೊತೆ ಮೂಡಿಬಂದ ಸ್ಫುಟವಾದ ನಟುವಾಂಗದ ಬನಿ ಕಲಾವಿದೆಯ ಚೈತನ್ಯಕ್ಕೆ ಮತ್ತಷ್ಟು ಸ್ಫೂರ್ತಿಯನ್ನು ಎರೆಯಿತು. ಮುರುಗನ ವಾಹನ ಮಯೂರದ ನಡಿಗೆಯ ಲಾಸ್ಯ, ಕುತ್ತಿಗೆ ಕೊಂಕಿಸುವ ಸುಕೋಮಲ ಚಲನೆ, ಹೊಸವಿನ್ಯಾಸದ ನೃತ್ತದ ರಮಣೀಯತೆ, ರಂಗಾಕ್ರಮಣದಲ್ಲಿ ನಿರೂಪಿಸಿದ ಮಂಡಿ ಅಡವು ಅದ್ಭುತ ರೀತಿಯಲ್ಲಿ ಪ್ರದರ್ಶಿತವಾದವು.



**ಹನುಮಂತ ದೇವ ನಮೋ ವೀರಾಂಜನೇಯನ ಪ್ರತಿರೂಪ**

ಮುಂದೆ- ಭೋರ್ಗರೆದ ಶಿವನು ಚಿತ್ ಸಭೆಯಲ್ಲಿ ಆಡಿದ ಆನಂದ ತಾಂಡವದ ರೋಮಾಂಚಕ ನೃತ್ಯವೈಭವ ಢಮರುಗದ ಹೆಜ್ಜೆ- ಗೆಜ್ಜೆಗಳಲ್ಲಿ ವಿನೂತನ ಅನುಭವ ನೀಡಿತು. ಲೀಲಾಜಾಲವಾಗಿ ನರ್ತಿಸಿದ ಕಲಾವಿದೆಯ ಅನುಪಮ ಭಂಗಿಗಳು ಮನ ತಣಿಸಿದವು. ಕಲಾವಿದೆಯ ಪ್ರತಿಭೆಗೆ ಕನ್ನಡಿ ಹಿಡಿದ 'ಹನುಮಂತ ದೇವ ನಮೋ' ವೀರಾಂಜನೇಯನ ಪ್ರತಿರೂಪವಾಗಿ, ಕೆಚ್ಚೆದೆಯ ಕಲಿ ಆತ್ಮವಿಶ್ವಾಸದಿಂದ ಸಮುದ್ರಲಂಘನ ಮಾಡಿ ಸೀತಾಮಾತೆಯನ್ನು ದರ್ಶಿಸಿ, ಮುದ್ರೆಯುಂಗುರ ನೀಡಿ, ಚೂಡಾಮಣಿ ಪಡೆಯುವ ಕೆಚ್ಚೆದೆಯ ಕಲಿಯಾಗಿ ಕಾವ್ಯಶ್ರೀ ಹನುಮಂತನಲ್ಲಿ ಪರಕಾಯ ಪ್ರವೇಶ ಮಾಡಿ ಅಭಿನಯಿಸಿದ್ದು ರೋಮಾಂಚಕಾರಿಯಾಗಿತ್ತು. 'ಜೈ ಸೀಯ ರಾಮ್ ಎಂದು ಭಕ್ತಿ ತಾದಾತ್ಮ್ಯತೆಯಿಂದ ಹನುಮ ಕುಣಿದ ಪರಿ, ಕುಪ್ಪಳಿಸಿ ನಿಲ್ಲುವ ಬಗೆ,

> **'ಮಾತೆ ಮಲಯಧ್ವಜ ಪಾಂಡ್ಯ ಸಂಜಾತೆ' ಮೀನಾಕ್ಷಿಯ ಕಥೆಯನ್ನು ಸಾದ್ಯಂತ ಕಟ್ಟಿಕೊಟ್ಟ ಕೃತಿಯನ್ನು ಕಲಾವಿದೆ ತನ್ನ ಚೇತೋಹಾರಿ ಅಭಿನಯದಿಂದ ಕಣ್ಣಿಗೆ ಹಬ್ಬವಾಗಿಸಿದಳು. ಪವಿತ್ರರ ನಟುವಾಂಗದ ಝೇಂಕಾರ, ಕುಣಿಸುವ ಲಯದ ಕೊನ್ನಕೋಲುಗಳು, ಕಾವ್ಯಶ್ರೀಗೆ ಪ್ರೇರಣೆ ನೀಡಿ, ಮಿಂಚಿನ ಸಂಚಾರದ ಲಯಾತ್ಮಕ ನೃತ್ತಗಳ ಸಲಿಲ ಪರಿಣಾಮಕಾರಿಯಾಗಿ ಭೋರ್ಗರೆಯಿತು. ತಾಜಾ ನೃತ್ತದ ಆಯಾಮಗಳು ಮತ್ತು ಕಾವ್ಯಶ್ರೀಯ ಯೋಗಾಸನದ ಅದ್ಭುತ ಭಂಗಿಗಳು, ಆಕಾಶಚಾರಿಗಳು, ಹಸ್ತಮುದ್ರಿಕೆಗಳ ನಿಖರತೆ, ನೃತ್ಯ ವ್ಯಾಕರಣದ ಎಲ್ಲಾ ಅಂಶಗಳೂ ಸ್ಫುಟವಾಗಿ ಪ್ರಕಟಗೊಂಡು ಅದರೊಡನೆ ಆಹ್ಲಾದ ಅಭಿನಯವೂ ಸೇರಿ ಮನಸ್ಸಿಗೆ ಖುಷಿಯ ಅನುಭವ ನೀಡಿತು.**

ಕುಕ್ಕುರುಗಾಲಲ್ಲಿ ಚಂಗನೆ ನೆಗೆವ ಪವಮಾನನ ಅಸೀಮ ಚಟುವಟಿಕೆಯನ್ನು ಬಿಂಬಿಸಿದ ಕಲಾವಿದೆಯ ಚೈತನ್ಯ ಬೆರಗುಗೊಳಿಸಿತು. 'ಪವಮಾನ'ನ ಸ್ಮರಣೆಯೊಂದಿಗೆ ಕಾವ್ಯಶ್ರೀಯ ನೃತ್ಯ ಪ್ರಸ್ತುತಿ ಮಂಗಳಗೊಂಡಿತು.



## ಸಾಮಾಜಿಕ ಕಳಕಳಿ

ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

• ಉದಯವಾಹಿನಿ, ವಿಶೇಷ

ಸರಸರನೆ ನಡೆನೀನು ಮರುಗದಲೆ ಮುಂದಕ್ಕೆ
ಹಿರಿತನಕೆ ಬೆಲೆನೀಡು ಎಂದೆಂದಿಗೂ
ಕಿರಿಯರಿಗೆ ಹಿರಿಯರಿಗೆ ಮಾರ್ಗ ದರ್ಶಿಯು ನೀನು
ಸರಿಯಾಗಿ ನೀನಿರಲು ಲಕ್ಷ್ಮಿದೇವಿ.....

### ದಿನಕ್ಕೊಂದು ಮುಕ್ತಕ -43



**ಭಾವಾರ್ಥ :** ಸರ ಸರನೆ ನಡೆಯದೆಯೆ ಮುಂದಕ್ಕೆ ಯೋಚನೆಯ ಮಾಡುತಲಿ ನಡೆಯುತ್ತಿರಬೇಕು. ನಮ್ಮ ಹಿರಿಯರಿಗೆ ಬೆಲೆಯನ್ನು ನೀಡುತ್ತಾ, ಅವರ ಮಾತುಗಳಿಗೆ ಬೆಲೆಯನ್ನು ನೀಡುತ್ತಾ ಸಾಗ ಬೇಕು. ಆಗ ಜೀವನದಲ್ಲಿ ಹಲವಾರು ವಿಚಾರಗಳನ್ನು ತಿಳಿಯುತ್ತೇವೆ. ನಾವು ಹಿರಿಯರಿಗೆ ಪ್ರೀತಿಯನ್ನು ನೀಡಿ ಜೀವನ ಮಾಡಬೇಕು. ಅವರ ಮಾತುಗಳಿಗೆ ಬೆಲೆಯನ್ನು ನೀಡಿ ಜೀವನದಲ್ಲಿ ಮುಂದೆ ಸಾಗಬೇಕು. ನಮಗಿಂತ ಹಿರಿಯರೆ ಕಿರಿಯ ಹಿರಿಯರಿಗೆ ಮಾರ್ಗದರ್ಶಕರಾಗಿರುತ್ತಾರೆ. ನಾವು ಸರಿಯಾಗಿ ಜೀವನವನ್ನು ಮಾಡಿಕೊಂಡು ಹೋಗಬೇಕು. ಆಹಾ ನಮಗೆ ಹಿರಿಯರ ಮಾರ್ಗದರ್ಶನಗಳು ಆಶೀರ್ವಾದದ ರೀತಿಯಲ್ಲಿ ಸಿಗುತ್ತದೆ. ಪ್ರತಿಯೊಂದು ಕೆಲಸದಲ್ಲಿ ಯಶಸ್ವಿಯನ್ನು ಪಡೆಯಲು ಅವರ ಆಶೀರ್ವಾದ ಮಾರ್ಗದರ್ಶನ ಮುಖ್ಯ. ಒಟ್ಟಾರೆ ಕಿರಿಯರಿಗೆ ಗೌರವವನ್ನು ನೀಡುವುದನ್ನ ಕಲಿಯಬೇಕು. ಅವರ ಮಾತುಗಳಿಗೆ ಬೆಲೆಯನ್ನು ನೀಡಬೇಕು.

# ಡಿ. 6 ರಿಂದ 8 ರ ವರೆಗೆ 15ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ

• ಉದಯವಾಹಿನಿ ಬೆಂಗಳೂರು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಸ್ವದೇಶಿ ವಿಜ್ಞಾನ ಆಂದೋಲನ ಮತ್ತು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಸಹಭಾಗಿತ್ವದಲ್ಲಿ ಡಿಸೆಂಬರ್ 6 ರಿಂದ 8 ರವರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ''15ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ''ವನ್ನು ಆಯೋಜಿಸಲಾಗಿದೆ. ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಈ ವೈಜ್ಞಾನಿಕ ಸಮ್ಮೇಳನ ಸಹಕಾರಿಯಾಗಲಿದೆ.

ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಸಾಮಾನ್ಯರಿಗೆ ಮತ್ತು ವಿಶೇಷವಾಗಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯಲ್ಲಿ ತಲುಪಿಸುವ ಗುರಿ ಹೊಂದಲಾಗಿದೆ. ಆಧುನಿಕ ವಿಜ್ಞಾನದ ಜೊತೆಗೆ ಪಾರಂಪರಿಕ ವಿಜ್ಞಾನಗಳಾದ ಮನೋ ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಯೋಗ, ಭಾರತೀಯ ಪಾರಂಪರಿಕ ವೈದ್ಯಕೀಯ ಪದ್ಧತಿ, ಕಲೆ, ಸಾಹಿತ್ಯ ಮತ್ತು ಆಧುನಿಕ ವಿಜ್ಞಾನಗಳನ್ನೊಳಗೊಂಡ ಸ್ವದೇಶಿ ವಿಜ್ಞಾನವನ್ನು ಉತ್ತೇಜಿಸಲು ಈ ವಿಜ್ಞಾನ ಮೇಳವನ್ನು ಆಯೋಜಿಸಲಾಗಿದೆ ಎಂದು ಕರ್ನಾಟಕ ಸಂಸ್ಕೃತ ವಿ.ವಿ. ಕುಲಪತಿ ಡಾ. ಎಸ್. ಅಹಲ್ಯ, ಮಾತೃವೇದಿಕೆ ಸ್ವದೇಶಿ ವಿಜ್ಞಾನ ಆಂದೋಲನದ ಸಂಚಾಲಕರಾದ ಡಾ ವೈ. ಎಸ್. ಗಾಯತ್ರಿರವರು ತಿಳಿಸಿದ್ದಾರೆ.

ದೇಶದ 200 ಕ್ಕೂ ಹೆಚ್ಚು ಮಹಿಳಾ ವಿಜ್ಞಾನಿಗಳು, ಪ್ರಾಧ್ಯಾಪಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳು ವೈಜ್ಞಾನಿಕ ಲೇಖನ, ಪ್ರಬಂಧಗಳನ್ನು ಇಂಗ್ಲೀಷ್, ಕನ್ನಡ, ಹಿಂದಿ ಮತ್ತು ಸಂಸ್ಕೃತ ಭಾಷೆಯಲ್ಲಿ ಮಂಡಿಸಲಿದ್ದಾರೆ.



**ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆ**

ಸಾಹಿತ್ಯ ಪರಿಷತ್ ನ ಶ್ರೀ ಕೃಷ್ಣರಾಜ ಪರಿಷತ್ ಮಂದಿರದಲ್ಲಿ ಡಿ. 6 ರಂದು ಬೆಳಿಗ್ಗೆ 10 ಗಂಟೆಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಸಿಂಧೂ ಬಿ. ರೂಪೇಶ್ ರವರು ಸಮ್ಮೇಳನ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಸಂಸ್ಕೃತ ವಿ.ವಿ. ಕುಲಪತಿ ಡಾ. ಎಸ್. ಅಹಲ್ಯ, ಮಹಿಳಾ ವಿಜ್ಞಾನಿಗಳಾದ ಡಾ. ವಿ. ಶುಭಾ ಪಾಲ್ಗೊಳ್ಳಲಿದ್ದು, ಕೊಚ್ಚಿಯ ಚಿನ್ಮಯಿ ಅಂತರರಾಷ್ಟ್ರೀಯ ಪ್ರತಿಷ್ಠಾನದ ನಿರ್ದೇಶಕರಾದ ಡಾ. ಗೌರಿ ಮಹುಲಿಕರ್ ಪ್ರಧಾನ ಭಾಷಣ ಮಾಡಲಿದ್ದಾರೆ. ಸ್ವದೇಶಿ ವಿಜ್ಞಾನ ಆಂದೋಲನ-

> **ರಾಜ್ಯದಲ್ಲಿ ಸ್ವದೇಶಿ ವಿಜ್ಞಾನ ಆಂದೋಲನ 25 ಜಿಲ್ಲಾ ಘಟಕಗಳನ್ನು ಹೊಂದಿದ್ದು, ಮಹಿಳಾ ವಿಜ್ಞಾನ ಸಮ್ಮೇಳನದಲ್ಲಿ ರಾಜ್ಯದ ವಿಶ್ವವಿದ್ಯಾನಿಲಯ ಮತ್ತು ಪ್ರಾಧ್ಯಾಪಕರು, ಶಿಕ್ಷಕರು, ಸಂಶೋಧನಾ ವಿದ್ಯಾರ್ಥಿಗಳು, ಅನ್ವೇಷಣಾಭಿವೃದ್ಧಿ ಸಂಸ್ಥೆಗಳ ಮಹಿಳಾ ವಿಜ್ಞಾನಿಗಳು ಭಾಗಹಿಸಲಿದ್ದಾರೆ. ಭಾರತರತ್ನ ಸರ್ ಸಿ. ವಿ. ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರವನ್ನು ನಿರ್ಮಾಯಿ ಹೆಲ್ಸ್ ಅನಲೆಟಿಕ್ಸ್ ಸಂಸ್ಥೆಯ ಸಂಸ್ಥಾಪಕರಾದ ಡಾ. ಗೀತಾ ಮಂಜುನಾಥ ಮತ್ತು ಮೇಡಂ ಕ್ಯೂರಿ ಮಹಿಳಾ ವಿಜ್ಞಾನ ಪುರಸ್ಕಾರವನ್ನು ಬೆಂಗಳೂರಿನ ನಿಯಾಸ್ ಸಂಸ್ಥೆಯ ಪ್ರಾಧ್ಯಾಪಕರಾದ ಡಾ. ದೀಪ್ತಿ ನವರತ್ನ ರವರಿಗೆ ನೀಡಿ ಗೌರವಿಸಲಾಗುವುದು ಎಂದು ಹೇಳಿದ್ದಾರೆ.**

ಕರ್ನಾಟಕ ಘಟಕದ ರಾಜ್ಯಾಧ್ಯಕ್ಷ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ವಿಶ್ವನಾಥ ಪಿ. ಹಿರೇಮಠ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

# ಚಂಡಮಾರುತ ಪ್ರಭಾವ: ಈ ಒಂದು ಜಿಲ್ಲೆಯಲ್ಲೇ 70,000 ಎಕರೆ ಬೆಳೆ ನಾಶ

• ಉದಯವಾಹಿನಿ ಬೆಂಗಳೂರು

ಕರ್ನಾಟಕ ರಾಜ್ಯದ ದಕ್ಷಿಣ ಒಳನಾಡು ವ್ಯಾಪ್ತಿಯಲ್ಲಿ ಚಂಡಮಾರುತ ಸೈಕ್ಲೋನ್‌ನಿಂದ ಅತೀವ ಮಳೆಯಾಗಿದೆ. ಇದರಿಂದ ರಾಮನಗರ ಜಿಲ್ಲೆ ಒಂದರಲ್ಲಿ ರೈತರು ಬೆಳೆದ ಅಪಾರ ಪ್ರಮಾಣದ ಬೆಳೆ ನಾಶವಾಗಿದೆ. ಇದು ಕಟಾವು ಯಂತ್ರ ಬಾಡಿಗೆ ಹೆಸರಿನಲ್ಲಿ ನಡೆಯುತ್ತಿರುವ ಸುಲಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಬಿಜೆಪಿ ವಿಪಕ್ಷ ನಾಯಕ ಆರ್.ಅಶೋಕ್ ವಿವರಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಟೀಟ್ ಮಾಡಿರುವ ಅವರು, ಫೆಂಗಲ್ ಚಂಡ ಮಾರುತದಿಂದಾಗಿ ರಾಮನಗರ ಜಿಲ್ಲೆಯಲ್ಲಿ ಸುರಿದ ಅಕಾಲಿಕ ಮಳೆಯಿಂದ 70,000 ಎಕರೆ ಪ್ರದೇಶದಲ್ಲಿ ಭತ್ತ, ರಾಗಿ ಬೆಳೆಗಳು ನೆಲಕಚ್ಚಿವೆ. ಹುಲ್ಲು ಕೊಳೆತು ಜಾನುವಾರುಗಳ ಮೇವಿಗೂ ಕೊರತೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿಕೆಶಿವಕುಮಾರ್ ಅವರೇ, ನಿಮ್ಮ ಸ್ವಾಭಿಮಾನಿ, ಜನಕಲ್ಯಾಣ ಸಮಾವೇಶದ ಕಿತ್ತಾಟದ ಮಧ್ಯದಲ್ಲಿ ಬಿಡುವು ಮಾಡಿಕೊಂಡು ಒಮ್ಮೆ ರಾಮನಗರ ಜಿಲ್ಲೆಗೆ ಭೇಟಿ ನೀಡಬೇಕು. ಇಲ್ಲಿನ ರೈತರು ಭಾರೀ ಮಳೆಗೆ ಎದುರಿಸಿರುವ ಕಷ್ಟ ಕೇಳಿ. ಕುಂದು ಕೊರತೆ ಆಲಿಸಿ, ಬೆಳೆ ನಷ್ಟ ಪರಿಹಾರ ಕೊಡಿಸುವ ಮೂಲಕ ಅನ್ನದಾತರ ನೆರವಿಗೆ ಬರಬೇಕು ಎಂದು ಸರ್ಕಾರಕ್ಕೆ ಅವರು ಆಗ್ರಹಿಸಿದರು.



**ನೆಲಕಚ್ಚಿದ ಭತ್ತ ಮತ್ತು ರಾಗಿ ಬೆಳೆ:** ರೈತರು ಕಣ್ಣೀರು ಬಂಗಾಳಕೊಲ್ಲಿಯಲ್ಲಿ ಉಂಟಾಗಿ ಕರಾವಳಿಗೆ ಅಪ್ಪಳಿಸಿದ ಚಂಡಮಾರುತದಿಂದ ರಾಮನಗರ ಇತರ ಕಡೆಗಳಲ್ಲಿ ಭಾರೀ ಮಳೆ ಆಗಿದೆ. ಈ ಅಕಾಲಿಕ ಮಳೆಯಿಂದಾಗಿ ಸಾವಿರಾರು ಎಕರೆ ಪ್ರದೇಶದಲ್ಲಿ ಭತ್ತ ಮತ್ತು ರಾಗಿ ಬೆಳೆ ನೆಲಕಚ್ಚಿ ಈಗಾಗಲೇ ಹೈರಾಣಾಗಿರುವ ರೈತರಿಗೆ, ಕಟಾವು ಯಂತ್ರ ಬಾಡಿಗೆ ಹೆಸರಿನಲ್ಲಿ ನಡೆಯುತ್ತಿರುವ ಸುಲಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಅವರು ಪುನರುಚ್ಚರಿಸಿದರು.ಕೃಷಿ ಸಚಿವರಾದ ಚಲುವನಾರಾಯಸ್ವಾಮಿ ಅವರೇ, ಸ್ವಾಭಿಮಾನಿ ಸಮಾವೇಶ, ಜನಕಲ್ಯಾಣ ಸಮಾವೇಶದ ಸಂಭ್ರಮದಲ್ಲಿ ತಾವು ರಾಜ್ಯದ ಕೃಷಿ ಸಚಿವರು ಎನ್ನುವುದನ್ನೆ ಮರೆತಿರುವಂತಿದೆ ಎಂದು ಲೇವಡಿ ಮಾಡಿದರು.

**ಕಟಾವು ಯಂತ್ರಗಳಿಗೆ ಅಧಿಕ ದರ ನಿಗದಿ:** ಆಕ್ರೋಶ ಕಟಾವು ಯಂತ್ರಗಳಿಗೆ ಜಿಲ್ಲಾಡಳಿತಗಳು ನಿಗದಿ ಪಡಿಸಿರುವ ದರವನ್ನು ಮೀರಿ ಹೆಚ್ಚು ದರ ವಸೂಲಿ ಮಾಡುವ ಮೂಲಕ ರೈತರನ್ನು ಸುಲಿಗೆ ಮಾಡಲಾಗುತ್ತಿದೆ. ನಿರರ್ಥಕ ಸಮಾವೇಶಗಳಲ್ಲಿ ತಮ್ಮ ಸಮಯ ವ್ಯರ್ಥ ಮಾಡುವ ಬದಲು ರೈತರಿಗೆ ಉಪಯೋಗ ಆಗುವ ಕೆಲಸ ಮಾಡಿ ಪುಣ್ಯ ಕಟ್ಟಿಕೊಳ್ಳಿ.ಕಟಾವು ಯಂತ್ರಗಳು ಕೈಗೆಟಕುವ ದರದಲ್ಲಿ ರೈತರಿಗೆ ಸಿಗುವಂತೆ ಯಾವುದಾದರೂ ಪರಿಹಾರ ಕಂಡುಕೊಳ್ಳುವ ಮಾರ್ಗ ಹುಡುಕಿ ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕು ಎಂದು ಅವರು ಸರ್ಕಾರಕ್ಕೆ ಆಗ್ರಹಿಸಿದರು. ಕೊಯ್ಲಿಗೆ ಬಂದಿದ್ದ ಭತ್ತ, ರಾಗಿಯು ಭಾರೀ ಮಳೆಯ ಹೊಡೆತಕ್ಕೆ ಹಾಳಾಗಿದೆ. ಹುಲ್ಲು ಸಹ ಜಾನುವಾರುಗಳಿಗೆ ಸಿಗದಂತಾಗಿದೆ.

# ಅನಧಿಕೃತ ಕಟ್ಟಡಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ

## ಪಿ.ಯು.ಬಿ ಕಟ್ಟಡದ 10ನೇ ಮಹಡಿಯಲ್ಲಿ ನಡೆದ ಮುಖ್ಯ ಆಯುಕ್ತರ ನಡೆ ವಲಯದ ಕಡೆ ಕಾರ್ಯಕ್ರಮ

• ಉದಯವಾಹಿನಿ ಬೆಂಗಳೂರು

ಪೂರ್ವ ವಲಯದಲ್ಲಿ ಅನಧಿಕೃತ ಕಟ್ಟಡಗಳ ಮೇಲೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಮುಖ್ಯ ಆಯುಕ್ತರಾದ ಶ್ರೀ ತುಷಾರ್ ಗಿರಿ ನಾಥ್ ರವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಪೂರ್ವ ವಲಯದ ಪಿ.ಯು.ಬಿ ಕಟ್ಟಡದ 10ನೇ ಮಹಡಿಯಲ್ಲಿ ನಡೆದ ಮುಖ್ಯ ಆಯುಕ್ತರ ನಡೆ ವಲಯದ ಕಡೆ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ವೇಳೆ ಮಾತನಾಡಿದ ಅವರು, ಅನಧಿಕೃತ ಕಟ್ಟಡ ನಿರ್ಮಾಣ ಮಾಡುವವರಿಗೆ ನೋಟೀಸ್ ಜಾರಿ ಮಾಡಿ ಕಾಲಮಿತಿಯೊಳಗಾಗಿ ಅನಧಿಕೃತ ಕಟ್ಟಡ ಹಾಗೂ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಸೂಚನೆ ನೀಡಿದರು.

**ಕಸ್ತೂರಿ ನಗರದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಮಾಡಿ:** ಸಿ.ವಿ. ರಾಮನ್ ನಗರದ ಕಸ್ತೂರಿ ನಗರ ವ್ಯಾಪ್ತಿಯ ರಸ್ತೆ ಬದಿ ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಪಾದಚಾರಿ ಮಾರ್ಗಗಳಲ್ಲಿ ಒತ್ತುವರಿಯಾಗಿರುವುದನ್ನು ಪಾಲಿಕೆ ವತಿಯಿಂದ ತೆರವುಗೊಳಿಸಲಾಗುತ್ತಿದ್ದು, ಪಾದಚಾರಿ ಮಾರ್ಗದಲ್ಲಿ ಒತ್ತುವರಿ ತೆರವುಮಾಡಿ ಶಾಶ್ವತವಾಗಿ ಸ್ಥಾಪಿಸಿರುವ ಪೆಟ್ಟಿಗೆಗಳು ಇಲ್ಲದಂತೆ ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

**ಜಲಮಂಡಳಿಯಿಂದ ರಸ್ತೆ ಮುಚ್ಚಿಸಿ:** ನ್ಯೂ ತಿಪ್ಪಸಂದ್ರ ವೆಂಕಟೇಶ್ವರ ಕಾಲೋನಿ ರಸ್ತೆಯಲ್ಲಿ ಒಳಚರಂಡಿಯ ಕಾಮಗಾರಿಗಾಗಿ ರಸ್ತೆ ಮಧ್ಯದ ಭಾಗ ಅಗೆದಿದ್ದು, ಕಾಮಗಾರಿ ಪೂರ್ಣಗೊಂಡು 6 ತಿಂಗಳಾದರೂ ರಸ್ತೆ ದುರಸ್ತಿ ಮಾಡಿರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ, ಜಲಮಂಡಳಿ ಅಧಿಕಾರಿಗಳ ಜೊತೆ ಮಾತನಾಡಿ ಕೂಡಲೆ



**ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವು**

ರಸ್ತೆ ಅಗೆದಿರುವ ಭಾಗವನ್ನು ಜಲಮಂಡಳಿಯಿಂದ ಮುಚ್ಚಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಕಾಕ್ಸ್ ಟೌನ್ ಮಾರುಕಟ್ಟೆ ತೆರೆಯಲು ಮನವಿ:** ಕಾಕ್ಸ್ ಟೌನ್‌ನಲ್ಲಿ ಮಾರುಕಟ್ಟೆ ನಿರ್ಮಾಣ ಮಾಡಿದ್ದು, ಅದನ್ನು ಇನ್ನೂ ತೆರೆದಿರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಕಾಕ್ಸ್ ಟೌನ್ ಮಾರುಕಟ್ಟೆ ತೆರವು ವಿಚಾರವಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಿದರು.

**ಅಪಘಾತ ಜಾಗಗಳನ್ನು ನಿಯಂತ್ರಿಸಿ:** ಪೂರ್ವ ವಲಯ ವ್ಯಾಪ್ತಿಯಲ್ಲಿ ಅಪಘಾತ ಸ್ಥಳಗಳನ್ನು ಗುರುತಿಸಿ, ಆ ಸ್ಥಳಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿಗಳ ಸಲಹೆ ಮೇರೆಗೆ ರಸ್ತೆ ಉಬ್ಬುಗಳನ್ನು ಹಾಕಿ ರಸ್ತೆಯಲ್ಲಾಗುವ ಅಪಘಾತಗಳನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**ಸಾರ್ವಜನಿಕರಿಂದ 66 ದೂರುಗಳ ಸ್ವೀಕಾರ:**

### ಸಾರ್ವಜನಿಕರಿಂದ ಬಂದ ಪ್ರಮುಖ ಅಹವಾಲುಗಳ ವಿವರ

- ಸದಾನಂದ ನಗರದಲ್ಲಿ ರಸ್ತೆ ಡಾಂಬರೀಕರಣ ಮಾಡಲು ಮನವಿ.
- ಇ-ಖಾತಾ ಪಡೆಯಲು ಸಮಸ್ಯೆಯಾಗುತ್ತಿದ್ದು, ಕೂಡಲೆ ಇ-ಖಾತಾ ವ್ಯವಸ್ಥೆ ಮಾಡಿಕೊಡಲು ಮನವಿ.
- ಬೀದಿ ದೀಪಗಳನ್ನು ಅಳವಡಿಸಲು ಮನವಿ.
- ಅನಧಿಕೃತ ಕಟ್ಟಡ ಹಾವಳಿ ಹೆಚ್ಚಾಗಿದ್ದು, ಅದನ್ನು ನಿಯಂತ್ರಿಸಲು ಮನವಿ.
- ಉಚ್ಛ ನ್ಯಾಯಾಲಯದ ಆವರಣದಲ್ಲಿ ಸಾರ್ವಜನಿಕ ಶೌಚಾಲಯ ವ್ಯವಸ್ಥೆ ಮಾಡಲು ಮನವಿ.
- ಖಾಲಿ ಜಾಗದಲ್ಲಿ ತ್ಯಾಜ್ಯ ಬಿಸಾಡುತ್ತಿದ್ದು, ಅದನ್ನು ನಿಯಂತ್ರಿಸಲು ಮನವಿ.
- ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಮಾಡಲು ಮನವಿ.
- ರಸ್ತೆ ಬದಿ ಚರಂಡಿಗಳಲ್ಲಿ ಹೂಳೆತ್ತಿ ಸ್ವಚ್ಛತೆ ಕಾಪಾಡಲು ಮನವಿ.
- ಅನಧಿಕೃತ ರಸ್ತೆ ಕತ್ತರಿಸುವಿಕೆಯನ್ನು ನಿಯಂತ್ರಿಸಲು ಮನವಿ.
- ರಿಚರ್ಡ್ಸ್ ಟೌನ್‌ನಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲು ಮನವಿ.
- ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಒಳಚರಂಡಿಯಿಂದ ಕೊಳಚೆ ನೀರು ಹುಕ್ಕಿ ಬರುತ್ತಿದ್ದು, ಅದನ್ನು ನಿಯಂತ್ರಿಸಲು ಮನವಿ.
- ಅಸ್ಸೆಯಾ ರಸ್ತೆಯಲ್ಲಿ ಗ್ರೇಂಟಿಂಗ್ಸ್ ಗಳ ಮೇಲೆ ಅಳವಡಿಸಿರುವ ಗ್ರಿಲ್‌ಗಳು ಹಾಳಾಗಿದ್ದು, ಅದನ್ನು ದುರಸ್ತಿ ಪಡಿಸಲು ಮನವಿ.
- ರಸ್ತೆಯಲ್ಲಿ ವೇಗ ತಗ್ಗಿಸಲು ರಸ್ತೆ ಉಬ್ಬುಗಳನ್ನು ನಿರ್ಮಿಸಿದ್ದು, ಅದಕ್ಕೆ ಮಾರ್ಕಿಂಗ್ ಮಾಡಲು ಮನವಿ.
- ಸ್ಕೈವಾಕ್‌ಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಮನವಿ.
- ಹೊರ ವರ್ತುಲ ರಸ್ತೆಯ ಸರ್ವೀಸ್ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಮನವಿ.

ಪೂರ್ವ ವಲಯದಲ್ಲಿ ಆಯುಕ್ತರ ನಡೆ ವಲಯದ ಕಡೆ ಕಾರ್ಯಕ್ರಮದಲ್ಲಿ 66 ದೂರುಗಳನ್ನು ಸ್ವೀಕರಿಸಲಾಗಿದ್ದು, ಎಲ್ಲಾ ಸಮಸ್ಯೆಗಳನ್ನು ನಿಗದಿತ ಸಮಯದೊಳಗಾಗಿ ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ವಲಯ ಆಯುಕ್ತರಾದ ಪ್ರೀತಿ ಗೆಹ್ಲೋಟ್, ವಲಯ ಜಂಟಿ ಆಯುಕ್ತರಾದ ಸರೋಜಾ, ಮುಖ್ಯ ಅಭಿಯಂತರರಾದ ಸುಗುಣಾ, ಉಪ ಆಯುಕ್ತರಾದ ರಾಜು, ಕಾರ್ಯಪಾಲಕ ಅಭಿಯಂತರರು, ಆರೋಗ್ಯಾಧಿಕಾರಿ ಸೇರಿದಂತೆ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ಈ ರಾಶಿಚಕ್ರದ ಉದ್ಯಮಿಗಳು, ಇಂದು ನಿಮ್ಮ ಬಳಿ ಹಣವನ್ನು ಕೇಳುತ್ತಾರೆ ಮತ್ತು ನಂತರ ಮರುಪಾವತಿ ಮಾಡದೇ ಇರುವಂತಹ ನಿಮ್ಮ ಮನೆಯ ಸದಸ್ಯರಿಂದ ದೂರವಿರಬೇಕು.

**ವೃಷಭ** ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ – ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ, ವಿಶ್ವಾಸ ಮೂಡುತ್ತದೆ. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ.ನಿಮ್ಮ ಮಾಮ, ತಾತ ನಿಮಗೆ ಆರ್ಥಿಕ ಬೆಂಬಲ ಮಾಡಬಹುದು.

**ಮಿಥುನ** ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ನೀವು ನಿಮ್ಮ ಇಂದಿನ ದಿನವನ್ನು ಉತ್ತಮಗೊಳಿಸಲು ಕಳೆದ ದಿನಗಳಲ್ಲಿ ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು. ಒಂದು ಹಳೆಯ ಸಂಪರ್ಕ ನಿಮಗೆ ಕೆಲವು ಸಮಸ್ಯೆಗಳನ್ನು ಸೃಷ್ಟಿಸಬಹುದು.

**ಕರ್ಕಾಟಕ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವು ದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ, ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಆರ್ಥಿಕ ನಿರ್ಬಂಧಗಳನ್ನು ತಪ್ಪಿಸಲು ನಿಮ್ಮ ಬಜೆಟ್‌ಗೆ ಅಂಟಿಕೊಳ್ಳಿ. ಇತರರಿಗೆ ಪ್ರತಿಫಲಗಳು ತರುವ ನಿಮ್ಮ ಸಾಮರ್ಥ್ಯ ಪ್ರತಿಫಲ ತರುತ್ತದೆ.

**ಸಿಂಹ** ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸಲು ಗಂಭೀರ ಪ್ರಯತ್ನಗಳನ್ನು ಮಾಡಿ. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ನಿಮ್ಮ ಏಕತಾನತೆಯ ಜೀವನದಿಂದ ಒಂದು ವಿರಾಮವನ್ನು ತೆಗೆದುಕೊಳ್ಳಲು ನಿಮ್ಮ ಸ್ನೇಹಿತರೊಂದಿಗೆ ಹೊರಗೆ ಹೋಗಿ ಮಾತನಾಡಿ.

**ಕನ್ಯಾ** ಇತರರನ್ನು ಟೀಕಿಸುವ ನಿಮ್ಮ ಅಭ್ಯಾಸದಂದಾಗಿ ಇಂದು ನೀವೇ ಕೆಲವು ಟೀಕೆಗಳನ್ನು ಎದುರಿಸುವ ಸಾಧ್ಯತೆಗಳಿವೆ. ನಿಮ್ಮ ಹಾಸ್ಯಪ್ರಜ್ಞೆ ಜಾಗೃತವಾಗಿರಲಿ ಮತ್ತು ನಿಮ್ಮ ಸ್ವರಕ್ಷಣೆ ಕಡಿಮೆಯಿರಲಿ. ಹೀಗಿದ್ದಲ್ಲಿ ಟೀಕೆಯನ್ನು ಎದುರಿಸುವ ಸಾಮರ್ಥ್ಯ ನಿಮ್ಮಲ್ಲಿ ಹೆಚ್ಚಿರುತ್ತದೆ.

**ತುಲಾ** ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲೂ ಒಂದು ಒಳ್ಳೆಯ ದಿನ. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ನಿಮ್ಮ ಆಕರ್ಷಣೆ ಹಾಗೂ ವ್ಯಕ್ತಿತ್ವ ನೀವು ಹೊಸ ಸ್ನೇಹಿತರನ್ನು ಗಳಿಸಲು ಸಹಾಯ ಮಾಡುತ್ತದೆ.

**ವೃಶ್ಚಿಕ** ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸಧೃಢವಾಗಿರಲು ಸಹಾಯ ಮಾಡುತ್ತದೆ. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ನಿಮ್ಮ ವರ್ತನೆಯಲ್ಲಿ, ವಿಶೇಷವಾಗಿ ನಿಮ್ಮ ಸಂಗಾತಿಯ ಜೊತೆ, ತಾಳ ತಪ್ಪದಿರಲಿ.

**ಧನಸ್ಸು** ಭಾವನಾತ್ಮಕವಾಗಿ ನೀವು ತುಂಬ ಸ್ಥಿರವಾಗಿರುವುದಿಲ್ಲ – ಆದ್ದರಿಂದ ನೀವು ಇತರರ ಮುಂದೆ ಹೇಗೆ ವರ್ತಿಸುತ್ತೀರಿ ಮತ್ತು ಏನು ಹೇಳುತ್ತೀರಿ ಎನ್ನುವ ಬಗ್ಗೆ ಎಚ್ಚರದಿಂದಿರಿ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು.

**ಮಕರ** ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಹಣಕಾಸು ಲಾಭ ಒಂದಕ್ಕಿಂತ ಹೆಚ್ಚು ಮೂಲಗಳಿಂದ ಬರುತ್ತದೆ. ಒಬ್ಬರು ಇನ್ನೊಬ್ಬರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಮೂಲಕ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿ.

**ಕುಂಭ** ನಿಯಮಿತ ತೊಂದರೆ ನಿಮಗೆ ಕೆಲವು ಸಮಸ್ಯೆಗಳನ್ನು ಉಂಟುಮಾಡಬಹುದು. ನಿಮ್ಮ ನರಮಂಡಲದ ಕಾರ್ಯವೆಸಗುತ್ತಿರಲು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಿ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ.

**ಮೀನ** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ಮನರಂಜನೆ ಇಡೀ ಕುಟುಂಬವನ್ನು ಒಳಗೊಂಡಿದ್ದಲ್ಲಿ ಅದು ಮೋಜಿನ ವಿಷಯವಾಗಿರುತ್ತದೆ.

## ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿಗೆ ಖಂಡನೆ: ರಾಯಚೂರಿನಲ್ಲಿ ಪ್ರತಿಭಟನೆ

• ಉದಯವಾಹಿನಿ, ರಾಯಚೂರು

ಬಾಂಗ್ಲಾದೇಶದ ಧಾರ್ಮಿಕ ಮುಖಂಡರ ಮೇಲಿನ ಹಲ್ಲೆ ದೇವಾಲಯಗಳ ಧ್ವಂಸ ಹಾಗೂ ಅಲ್ಲಿನ ಹಿಂದೂಗಳ ಮೇಲಿನ ಆಕ್ರಮಣವನ್ನು ಖಂಡಿಸಿ ಹಿಂದೂ ಹಿತರಕ್ಷಣಾ ಸಮಿತಿ ಕಾರ್ಯಕರ್ತರು ನಗರದ ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಶಾಂತಮಲ್ಲ ಶಿವಾಚಾರ್ಯರು ಮಾತನಾಡಿ, 'ನಾವೆಲ್ಲರೂ ಶಾಂತಿ ಪ್ರಿಯರು, ಮಡಿವಂತಿಕೆ, ಜಾತಿ ಮನೆಯಲ್ಲಿ ಇಟ್ಟುಕೊಳ್ಳಬೇಕು. ಧರ್ಮ ರಕ್ಷಣೆಗೆ ಬೀದಿಗೆ ಬರಬೇಕು. ದೇಶ, ಧರ್ಮ ರಕ್ಷಣೆಗೆ ಕಂಕಣ ಬದ್ಧರಾಗಬೇಕು.

ಕೇಂದ್ರ ಸರ್ಕಾರ ಹಿಂದೂಗಳಿಗೆ ನೆರವು ನೀಡಬೇಕು. ಅನ್ಯಾಯ ತಡೆಗಟ್ಟಬೇಕು ಎಂದು ಮನವಿ ಮಾಡಿದರು. ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ವ್ಯವಸ್ಥಾಪಕ ಕೃಷ್ಣ ಜೋಶಿ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರೂ ಆದ ಶಾಸಕ ಶಿವರಾಜ ಪಾಟೀಲ, ಹಿಂದೂ ಹಿತರಕ್ಷಣಾ ಸಮಿತಿ ಜಿಲ್ಲಾ ಕಾರ್ಯದರ್ಶಿ ಅಶೋಕ ಪಾಟೀಲ ಅತ್ತೂರು, ವಿವಿಧ ಮಠಾಧೀಶರು, ಜನ ಪ್ರತಿನಿಧಿಗಳು, ಹಿಂದೂ ಪರ ಸಂಘಟನೆಗಳು, ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಚಾಲಾಕಿ ಕಳ್ಳನನ್ನು ಪೊಲೀಸರಿಗೆ ಒಪ್ಪಿಸಿದ ಯುವಕರು

• ಉದಯವಾಹಿನಿ, ಸುಳ್ಯ

ಕಳೆದ ಎರಡು ದಿನಗಳ ಹಿಂದೆ ಪೈಚಾರು ಫುಡ್ ಪಾಯಿಂಟ್ ಹೊಟೇಲಿಗೆ ರಾತ್ರಿ ವೇಳೆ ನುಗ್ಗಿ ಕಳ್ಳತನ ಮಾಡಿದ್ದ ಚಾಲಾಕಿ ಕಳ್ಳನನ್ನು ಪೈಚಾರಿನ ಯುವಕರೇ ಛಲ ಬಿಡದೆ ಹಗಲಿರುಳು ಹುಡುಕಾಟ ನಡೆಸಿ ಕೊನೆಗೂ ಕಳ್ಳನನ್ನು ಹಿಡಿದು ತಂದು ಸುಳ್ಯ ಪೊಲೀಸರಿಗೆ ಒಪ್ಪಿಸಿದ ಘಟನೆ ನಡೆದಿದೆ. ನ 30 ರಂದು ನಡೆದಿದ್ದ ಹೊಟೇಲ್ ಕಳ್ಳತನದ ಬಳಿಕ ಸ್ಥಳೀಯ ಯುವಕರು ಈತನ ಪತ್ತೆ ಗಾಗಿ ಹಗಲು ರಾತ್ರಿ ಎನ್ನದೇ ಗುಂಡ್ಯ, ಸುಬ್ರಹ್ಮಣ್ಯ, ಬೆಳ್ಳಾರೆ, ಪುತ್ತೂರು, ಕಲ್ಲುಗುಂಡಿ ಮುಂತಾದ ಕಡೆಗಳಿಗೆ ಇಬ್ಬರು, ಮೂವರ ತಂಡವನ್ನು ಮಾಡಿ ಕಳ್ಳನ ಹುಡುಕಾಟಕ್ಕೆ ಮುಂದಾಗಿದ್ದರು. ಕಳ್ಳನ ಫೋಟೋ ವನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಿ ಈತನನ್ನು ಕಂಡಲ್ಲಿ ಮಾಹಿತಿ ನೀಡುವಂತೆ ಪ್ರಸಾರ ಪಡಿಸಿದ್ದರು.

ಪುತ್ತೂರು ಭಾಗದಲ್ಲಿ ಹುಡುಕಾಟ ನಡೆಸುತಿದ್ದ ವೇಳೆ ಸೋಶಿಯಲ್ ಮೀಡಿಯಾದಲ್ಲಿ ನೋಡಿದ್ದ ಓರ್ವರಿಗೆ ಈ ಕಳ್ಳನನ್ನು ಪುತ್ತೂರು ರೈಲ್ವೆ ನಿಲ್ದಾಣದ ಬಳಿ ಕಂಡಿದ್ದು ಕೂಡಲೇ ಅಲ್ಲಿ ಹುಡುಕಾಟ ನಡೆಸುತಿದ್ದ ತಂಡಕ್ಕೆ ಮಾಹಿತಿ ಬಂದು ತಕ್ಷಣ ಅಲ್ಲಿಗೆ ತೆರಳಿ ಕಳ್ಳನನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಬಳಿಕ ಆತನನ್ನು ಸುಳ್ಯಕ್ಕೆ ತಂದು ಸುಳ್ಯ ಪೊಲೀಸರಿಗೆ ಒಪ್ಪಿಸಿದ್ದಾರೆ. ಆತನ ಹೆಸರು ಮತ್ತು ಊರಿನ ಬಗ್ಗೆ ಸ್ಪಷ್ಟವಾಗಿ ಆತ ಹೇಳುತಿಲ್ಲ ಎಂದು ಕೂಡ ತಿಳಿದು ಬಂದಿದೆ.

## ಬಲಿಷ್ಠ ಭಾರತ ನಿರ್ಮಾಣಕ್ಕೆ ಯುವ ಪೀಳಿಗೆ ಪಾತ್ರ ಮಹತ್ವದ್ದು

• ಉದಯವಾಹಿನಿ, ಬೆಳಗಾವಿ

ಭಾರತ ಎಲ್ಲಾ ಕ್ಷೇತ್ರಗಳಲ್ಲಿ ಮುಂಚೂಣಿಯ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ. ವಿದ್ಯಾರ್ಥಿಗಳು ಪದವಿಯ ನಂತರ ಸಮಗ್ರ ಜ್ಞಾನ ಪಡೆದುಕೊಂಡು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈಯುವ ಮೂಲಕ ಸಾಮಾಜಿಕ-ಆರ್ಥಿಕ-ಶೈಕ್ಷಣಿಕವಾಗಿ ಭಾರತವನ್ನು ಇನ್ನಷ್ಟು ಬಲಿಷ್ಟಗೊಳಿಸಬೇಕು ಎಂದು ಸಚಿವರಾದ ಡಾ. ಎಂ.ಸಿ. ಸುಧಾಕರ್ ಅವರು ತಿಳಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಡಾ. ಎಪಿಜೆ ಅಬ್ದುಲ್ ಕಲಾಂ ''ಜ್ಞಾನ ಸಂಗಮ'' ಸಭಾಂಗಣದಲ್ಲಿ ನಡೆದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಹೊಸ ಸವಾಲುಗಳನ್ನು ಎದುರಿಸಲು ಸಿದ್ಧರಾಗಿ ಜ್ಞಾನವಂತ, ಕೌಶಲ್ಯಪೂರ್ಣ ಮತ್ತು ಶಸಕ್ತ ವ್ಯಕ್ತಿಗಳಾಗಿ ವಿವಿಧ ಕ್ಷೇತ್ರಗಳಲ್ಲಿ ಕಾಲಿಡುವ ಮೂಲಕ ಯಶಸ್ಸು ಗಳಿಸಲು ಮುಂದಾಗಬೇಕು ಎಂದು ಹೇಳಿದರು.

# ಬಾಲಕಿಯರ ವಸತಿನಿಲಯ ಸಮಸ್ಯೆಗಳ ಆಗರ, ಮುಕ್ತಿ ಯಾವಾಗ ?

### ಸಂಬಂಧಿಸಿದವರು ನೋ ರೆಸ್ಪಾನ್ಸ್, ಮಕ್ಕಳ ಕಷ್ಟ ಆಲಿಸುವರು ಯಾರು?, ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ಬಗೆಹರಿಸದೆ ನಿರ್ಲಕ್ಷ್ಯ

• ಮಹೇಬೂಬಶಾ ಅಣವಾರ

• ಉದಯವಾಹಿನಿ ವಿಶೇಷ ವರದಿ

ಚಿಂಚೋಳಿ: ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಬಾಲಕಿಯರ ವಸತಿನಿಲಯವು ಹಾಳು ಬಿದಿದ್ದು ಅದರಲ್ಲಿ ಹೈಸ್ಕೂಲ್ ಮತ್ತು ಕಾಲೇಜು ವಿದ್ಯಾರ್ಥಿನಿಯರಿಗೆ ವಸತಿನಿಲಯ ಮಾಡಲಾಗಿದ್ದು ಸಮಸ್ಯೆಗಳ ಆಗಾರವಿದ್ದರು ಸಹ ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ಬಗೆಹರಿಸದೆ ನಿರ್ಲಕ್ಷ್ಯ ವಹಿಸುತ್ತಿರುವುದರಿಂದ ಮಕ್ಕಳ ವಿದ್ಯಾಭ್ಯಾಸ ಮೇಲೆ ಪರಿಣಾಮ ಬೀರುತ್ತಿದ್ದು ಸಮಸ್ಯೆಗೆ ಪರಿಹಾರ ಯಾವಾಗ ಎಂಬುವುದು ಯಕ್ಷಪ್ರೇಶ್ನೆಯಾಗಿದೆ.



ಉದಯವಾಹಿನಿ ಚಿತ್ರ

> ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಬಾಲಕಿಯರ ವಸತಿನಿಲಯವು ಶಿಕ್ಷಣ ಇಲಾಖೆ ಅಧಿನದಲ್ಲಿ ನಡೆಯುತ್ತದೆ ಇದಕ್ಕೆ ಸಂಪೂರ್ಣವಾಗಿ ಜವಾಬ್ದಾರಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಅಧಿಕಾರಿಗಳೆ ನೋಡಿಕೊಳ್ಳುತ್ತಾರೆ. ಆದರೆ ಈ ವಸತಿನಿಲಯ ಬಗ್ಗೆ ನನಗೆ ಮಾಹಿತಿ ಇಲ್ಲ ಅವರಿಂದ ಮಾಹಿತಿ ತಾವು ಪಡೆದುಕೊಳ್ಳಬಹುದು ಎಂದು ಪತ್ರಕರ್ತರಿಗೆ ಬಿಇಓ ಲಕ್ಷ್ಮಯ್ಯ ಹೇಳಿದರು.


**ಕರೆ ಸ್ವೀಕರಿಸುತ್ತಿಲ್ಲ**

ವಸತಿನಿಲಯದ ಮಾಹಿತಿ ಕೇಳಲು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಅಧಿಕಾರಿಗೆ ಮತ್ತು ವಾರ್ಡನ್ ಅವರಿಗೆ ಎರಡು ದಿನದಿಂದ ಪತ್ರಕರ್ತರು ಫೋನ್ ಕರೆ ಮಾಡುತ್ತಿದ್ದರು ಕರೆ ಸ್ವೀಕರಿಸುತ್ತಿಲ್ಲ, ಮಾಹಿತಿ ನೀಡುತ್ತಿಲ್ಲ ಮೇಲಾಧೀಕಾರಿಗಳು ಪರಿಶೀಲಿಸಬೇಕು.

ಪಟ್ಟಣದ ಹೊರವಲಯದಲ್ಲಿರುವ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಬಾಲಕಿಯರ ವಸತಿನಿಲಯದಲ್ಲಿ ಸಮಸ್ಯೆಗಳ ಸುರಿಮಳೆಯಿದೆ.

**ಸಮಸ್ಯೆಗಳು:** ವಿದ್ಯಾರ್ಥಿನಿಯರಿಗೆ ಮೇನುಚಾಟ್ ಪ್ರಕಾರ ಊಟವಿಲ್ಲ, ತಿಂಡಿಯಿಲ್ಲ, ವಸತಿ ನಿಲಯ ಸ್ವಚ್ಛತೆಯಿಲ್ಲ, ರಾತ್ರಿಯಲ್ಲಿ ಇನ್ವೇಟರ್ ಯಿಲ್ಲ, ವಸತಿ ನಿಲಯಕ್ಕೆ ಹೋಗಲು ಸಮರ್ಪಕವಾಗಿ ರಸ್ತೆಯಿಲ್ಲ, ವಸತಿನಿಲಯದ ಕಿಟಾಕಿಯ ಗಾಜು ಪುಡಿಯಾಗಿವೆ, ಬಿಸಿನೀರಿಲ್ಲ, ವಿದ್ಯುತ್ ಹೋದರೆ ಇನ್ವೇಟರ್ ಇಲ್ಲ, ಫ್ಯಾನ್ ಇಲ್ಲ, ಆಟದ ಸಾಮಾನಿಲ್ಲ, ಊಟಕ್ಕೆ ತಟ್ಟೆಗಳಿಲ್ಲ, ಸಮಯಕ್ಕೆ ಉಟ ನೀಡಲ್ಲ, ಶೌಚಾಲಯ ವಿದ್ಯಾರ್ಥಿನಿಯರೆ ಸ್ವಚ್ಛತೆ ಮಾಡಿಕೊಳ್ಳುವ ಪದ್ಧತಿ, ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಅಧಿಕಾರಿಗಳು ಮಾತ್ರ ಮೌನವಾಗಿದ್ದರೆ ನೋಡಿದರೆ ಗಾಢ ನಿದ್ರೆಯಲ್ಲಿದ್ದಾರೆ ಅವರಿಗೂ ಹೇಳುವವರು ಕೇಳುವವರು ಯಾರಿಲ್ಲಾ, ಅವರಿಗೆ ಮೇಲಾಧಿಕಾರಿಗಳ ಭಯವಿಲ್ಲ ಎಂಬುವುದು ಮೇಲ್ನೋಟಕ್ಕೆ ಕಾಣುತ್ತದೆ. ಮಧ್ಯಾಹ್ನ ಊಟ ಕೂಡದೆ ಬೆಳಿಗ್ಗೆ ಮಾಡಿದ ಊಟವೇ ಮಧ್ಯಾಹ್ನ ನೀಡುತ್ತಾರೆ, ವೇಜ್ ತರಕಾರಿ ಊಟವನ್ನು ದಿನಾಲು ಒಂದೇಕೊಡುತ್ತಾರೆ, ಚಿಕನ್ 15ದಿನ ಕೊಮ್ಮೆ ಕೊಡುತ್ತಾರೆ, ವಿದ್ಯುತ್ ಹೋದರೆ ಕೋಣೆಗೊಂದ್ದು ಮೇಣದಬತ್ತಿ ಕೊಡುತ್ತೋರೆ, ಆಟದ ಸಾಮಾನು ಕೊಟ್ಟಿಲ್ಲ, ಗ್ರಾಂಥಾಲಯ ವಿಲ್ಲ, ಶೌಚಾಲಯ ಸ್ವಚ್ಛತೆ ಇಲ್ಲದೆ ಗೋಬ್ಬುವಾಸನೆ, ವಸತಿನಿಲಯದಲ್ಲಿ ಅಂದಾಜು 50ರಿಂದ 60ವಿದ್ಯಾರ್ಥಿಗಳ ಪ್ರವೇಶ ಪಡೆದಿರಬಹುವುದು ಎಂಬ ಮಾಹಿತಿಯಿದೆ.

> ಈ ವಸತಿನಿಲಯದಲ್ಲಿ ವಿದ್ಯಾರ್ಥಿನಿಯರಿಗೆ ಯಾವುದೇ ಸುರಕ್ಷಿತ ಕ್ರಮಕೈಗೊಂಡಿಲ್ಲ ಹಾಗೂ ಮೂಲಭೂತ ಸೌಕರ್ಯ ಕೊರತೆ,ಊಟದ ಸಮಸ್ಯೆ, ವಿದ್ಯಾರ್ಥಿಗಳಿಗೆ ಕೆಲಸ ಹಚ್ಚುವುದು, ವಿದ್ಯಾರ್ಥಿಗಳಿಗೆ ಆಹಾರ ಪದಾರ್ಥಗಳನ್ನು ನೀಡದೆ ವಂಚನೆ ಮಾಡಿ ಇತಿಮಿತಿಯಲ್ಲಿ ನೀಡುವುದು,ಇವೆಲ್ಲವೂ ನೋಡಿದರೆ ಸರ್ಕಾರದ ಅನುದಾನ ಏಲ್ಲಿಗೆ ಹೋಗುತ್ತಿದೆ ಅಧಿಕಾರಿಗಳ ಮತ್ತು ವಾರ್ಡನ್ ಮನೆಗಳಿಗೆ ಹೋಗುತ್ತಿದೆಯೇ ಸಿಬ್ಬಂದಿ ವರ್ಗ ಅನುದಾನ,ಆಹಾರ ಪದಾರ್ಥಗಳ ಅನುದಾನ,ಮೂಲಭೂತ ಸೌಕರ್ಯ ಅನುದಾನ,ಎಲ್ಲಿಗೆ ಹೋಯಿತು,ಇವೆಲ್ಲದ್ದಕ್ಕೂ ಅಧಿಕಾರಿಗಳು ವಾರ್ಡನ್ ನೇರಹೊಣೆ ಮಕ್ಕಳಿಗೆ ಯಾವುದೇ ತೊಂದರೆ ಆದರೆ ಅಧಿಕಾರಿಗಳಿಗೆ ವಾರ್ಡನ್ ಗೆ ಆರೋಪ ಸ್ಥಾನದಲ್ಲಿ ಇಡಬೇಕು ಹಾಗೂ ಮೇಲಾಧೀಕಾರಿಗಳು 5ದಿನದಲ್ಲಿ ಆಗಮಿಸಿ ಪರಿಶೀಲಿಸಬೇಕು ಇಲ್ಲಾದಿದ್ದರೆ ನಮ್ಮ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಿ ವಿದ್ಯಾರ್ಥಿನಿಯರಿಗೆ ನ್ಯಾಯ ದೊರಕಿಸಿ ಕೊಡುತ್ತೇವೆ
>
> – ಸಚಿನ್ ಚವ್ಹಾಣ, ಅಧ್ಯಕ್ಷರು,ಯುವ ಕರ್ನಾಟಕ ವೇದಿಕೆ ಚಿಂಚೋಳಿ.



ಕೇಂದ್ರ, ರಾಜ್ಯ ಸರ್ಕಾ ರಗಳು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಕಷ್ಟು ಅನುದಾನ ಬಿಡುಗಡೆ ಮಾಡು ತ್ತವೆ ಆದರೆ ವಾರ್ಡನ್‌ಗಳು, ಅಧಿಕಾರಿಗಳು ವಸತಿ ನಿಲಯಗಳಲ್ಲಿ ಊಟದ ವ್ಯವಸ್ಥೆ ಮೂಲಭೂತ ಸೌಕರ್ಯ ನೀಡದೆ ವಿದ್ಯಾರ್ಥಿಗಳಿಗೆ ಸೌಲಭ್ಯದಿಂದ ವಂಚನೆ ಮಾಡುತ್ತಿರುವುದರಿಂದ ಶಿಕ್ಷಣದಲ್ಲಿ ಕುಂಠಿ ತವಾದ್ದು ಚಿಂಚೋಳಿ ತಾಲ್ಲೂಕಾವು ಕಲಬುರ್ಗಿ ಜಿಲ್ಲೆಯಲ್ಲಿಯೇ 10ನೇ ತರಗತಿಯ ಫಲಿತಾಂಶ ಕೊನೆಯ ಸ್ಥಾನದಲ್ಲಿದ್ದು ಮೇಲಾಧೀಕಾರಿಗಳ ಗಮನಿಸಬಹುದು. ಸರ್ಕಾರ ನೀಡಿದ ಈ ವಸತಿ ನಿಲಯದ ಅನುದಾನ ಏಲ್ಲಿಗೆ ಹೋಯಿತು ಯಾಕೆ ವಿದ್ಯಾ ರ್ಥಿನಿಯರಿಗೆ ಸೌಲಭ್ಯ ನೀಡುತ್ತಿಲ್ಲಾ ಎಂಬುವುದು ಮೇಲಾಧೀಕಾರಿಗಳು ಗಮನಿಸಿ ವಸತಿನಿಲಯಕ್ಕೆ ಆಗಮಿಸಿ ಪರಿಶೀಲಿಸಿ ತಪ್ಪಿಸ್ಥ ವಾರ್ಡನ್ ಹಾಗೂ ವಸತಿ ನಿಲಯಕ್ಕೆ ಸಂಬಂಧಿಸಿದ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಅಧಿಕಾರಿ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತಿರೆಯೋ ಇಲ್ಲವೋ ಕಾದು ನೋಡಬೇಕಾಗಿದೆ.

> ವಸತಿನಿಲಯದಲ್ಲಿ ಮೇನು ಚಾಟ್ ಹಾಕಿಲ್ಲ,ದಿನಾಲು ಬಗಾರ್ ಹೊಡೆದ ಅನ್ನ ಒಂದೇ ಕೊಡುತ್ತಾರೆ,ಬೆಳಿಗ್ಗೆ ನೀಡಿದ ಅನ್ನವೇ ಮಧ್ಯಾಹ್ನ ಊಟಕ್ಕೆ ಕೊಡುತ್ತಾರೆ, ಶೌಚಾಲಯ ವಿದ್ಯಾರ್ಥಿನಿಯರಿಂದ ಸ್ವಚ್ಛತೆ ಮಾಡಿಸುತ್ತಾರೆ,ಚಿಕನ್ 15ದಿನಕೊಮ್ಮೆ ಕೊಡುತ್ತಾರೆ, ನಮಗೆ ಯಾವುದೇ ಸೌಲಭ್ಯ ನೀಡದೆ ಸರ್ಕಾರದಿಂದ ಸಿಗುವ ಸೌಲಭ್ಯದಿಂದ ವಂಚನೆ ಮಾಡುತ್ತಿದ್ದಾರೆ ನಮಗೆ ಸರ್ಕಾರದ ಸೌಲಭ್ಯ ದೊರಕಿಸಿಕೊಟ್ಟು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯಲು ಅನುಕೂಲ ಕಲ್ಪಿಸಿಕೊಡಿ.
>
> – ಹೆಸರು ಹೇಳಲು ನಿರಾಕರಿಸಿದ ವಿದ್ಯಾರ್ಥಿನಿ

## ಕಾರ್ಖಾನೆಯಿಂದ ಹೊಗೆ, ದುರ್ವಾಸನೆ: ಪ್ರತಿಭಟನೆ

• ಉದಯವಾಹಿನಿ, ಶಿಗ್ಗಾಂವಿ

ತಾಲ್ಲೂಕಿನ ಕೋಣನಕೇರಿ ಸಮೀಪದ ವಿ.ಐ.ಎನ್.ಪಿ. ಡಿಸ್ಟಲರೀಸ್ ಮತ್ತು ಶುಗರ್ಸ್ ಪ್ರೈ.ಲಿ. ಕಾರ್ಖಾನೆ ಹೊರಸೂಸುವ ಹೊಗೆ ಮತ್ತು ದುರ್ವಾಸನೆಯಿಂದ ಜನರ ಆರೋಗ್ಯಕ್ಕೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ಕಾರ್ಖಾನೆ ಬಳಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು. ಭದ್ರಾಪುರ, ಕೋಣನಕರಿ, ಶಿವಪುರ, ಜಕ್ಕಿನಕಟ್ಟಿ, ಶಿಗ್ಗಾಂವಿ ಸೇರಿದಂತೆ ಸುತ್ತಲಿನ ಗ್ರಾಮಸ್ಥರಿಗೆ ಕಾರ್ಖಾನೆಯಿಂದ ಸಮಸ್ಯೆ ಉಂಟಾಗುತ್ತಿದೆ. ಕಾರ್ಖಾನೆ ಹೊರಸೂಸುವ ಹೊಗೆ ಮೂಲಕ ಹಾನಿಕಾರಕ ಪುಡಿ ಹಾರಿಬರುತ್ತಿದೆ. ಆಹಾರ ಪದಾರ್ಥಗಳ ಮೇಲೂ ಬೀಳುತ್ತಿರುವುದರಿಂದ ಆಹಾರ ವಿಷವಾಗುತ್ತಿದೆ. ಇದರಿಂದ ಚರ್ಮರೋಗ ಹರಡುತ್ತಿದೆ ಎಂದು ಪ್ರತಿಭಟನಾನಿರತರು ಹೇಳಿದರು.

ಕಾರ್ಖಾನೆಯಿಂದ ಹರಡುವ ಗಬ್ಬುವಾಸನೆಯಿಂದಾಗಿ ನೆಮ್ಮದಿಯಿಂದ ಜೀವನ ಮಾಡಲಾಗುತ್ತಿಲ್ಲ. ಈಗಾಗಲೇ ಜನರು ವಾಂತಿ, ಬೇಧಿಯಿಂದ ಬಳಲಿ, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಕಲುಷಿತ ನೀರನ್ನು ಕೆರೆಗೆ ಹರಿಸುತ್ತಿದ್ದು, ಸುತ್ತಲಿನ ಜಮೀನುಗಳಲ್ಲಿ ಬೆಳೆಗೆ ಹಾನಿಯಾಗುತ್ತಿದೆ ಎಂದರು. 'ಶಿಗ್ಗಾವಿಯಿಂದ ಕೋಣನಕೇರಿ ಗ್ರಾಮದವರೆಗಿನ ರಸ್ತೆ ಹದಗೆಟ್ಟಿದ್ದು, ವಾಹನಗಳ ಸವಾರರು ಆಯತಪ್ಪಿ ಬಿದ್ದು ಗಾಯಗೊಂಡ ಉದಾಹರಣೆಗಳಿವೆ. ಶೀಘ್ರ ದುರಸ್ತಿ ಮಾಡಬೇಕು' ಎಂದೂ ಆಗ್ರಹಿಸಿದರು. ಮಂಜುನಾಥ ಪ್ರಧಾನ ವ್ಯವಸ್ಥಾಪಕ ವಿ.ಐ.ಎನ್.ಪಿ.ಡಿಸ್ಟಲರೀಸ್ ಮತ್ತು ಶುಗರ್ಸ್ ಪ್ರೈ.ಲಿ.ಒಂದು ವಾರದೊಳಗೆ ಕಾರ್ಖಾನೆಗೆ ಅನುಮತಿ ಪಡೆಯುತ್ತೇವೆ. ಪೌಡರ್ ಹರಡುವಿಕೆ ತಡೆದು ಕಲುಷಿತ ನೀರನ್ನು ಹೊಂಡಕ್ಕೆ ಹರಿಸುತ್ತೇವೆ. ರಸ್ತೆ ಅಭಿವೃದ್ಧಿ ಮಾಡುತ್ತೇವೆ ಕಾರ್ಖಾನೆಗೆ ವಾರ ಗಡುವು' 'ವಿ.ಐ.ಎನ್.ಪಿ.ಡಿಸ್ಟಲರೀಸ್ ಮತ್ತು ಶುಗರ್ಸ್ ಪ್ರೈ.ಲಿ. ಕಾರ್ಖಾನೆ ಅನಧಿಕೃತವಾಗಿ ನಡೆಯುತ್ತಿದ್ದು ಈವರೆಗೆ ಗ್ರಾಮ ಪಂಚಾಯಿತಿಯಿಂದ ಅನುಮತಿ (ಎನ್.ಒ.ಸಿ) ಪಡೆದಿಲ್ಲ. ಈ ಕುರಿತು ಕಾರ್ಖಾನೆ ಮಾಲೀಕರಿಗೆ 14 ನೋಟಿಸ್ ನೀಡಲಾಗಿದೆ. ಯಾವುದಕ್ಕೂ ಪ್ರತಿಕ್ರಿಯೆ ನೀಡಿಲ್ಲ.

ಒಂದು ವಾರ ಗಡುವು ನೀಡಿ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಕೋಣನಕೇರಿ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಪರಶುರಾಮ ದ್ಯಾಮಣ್ಣನವರ ಹೇಳಿದರು.



ಉದಯವಾಹಿನಿ ಚಿತ್ರ

## ರೈಲ್ವೆ ನಿಲ್ದಾಣಗಳಿಗೆ 'ನಾಮಕರಣ'ದ ಚರ್ಚೆ

• ಉದಯವಾಹಿನಿ, ಕೊಪ್ಪಳ

ಜಿಲ್ಲೆಯ ಪ್ರಮುಖ ರೈಲು ನಿಲ್ದಾಣಗಳ ಹೆಸರು ಬದಲಿಸಿ ಸ್ಥಳೀಯ ಮಹತ್ವದ ಸ್ಥಳಗಳು ಹಾಗೂ ಮಹನೀಯರ ಹೆಸರು ನಾಮಕರಣ ಮಾಡಬೇಕು ಎನ್ನುವ ಕೂಗು ಜೋರಾಗಿದೆ. ಈ ಕುರಿತು ಚರ್ಚೆಯೂ ಬಿರುಸು ಪಡೆದು ಕೊಂಡಿದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಮಾಜ ಮುಖಿಯಾಗಿರುವ ಕೊಪ್ಪಳದ ಗವಿಸಿದ್ದೇಶ್ವರರ ಹೆಸರನ್ನು ಇಲ್ಲಿನ ರೈಲು ನಿಲ್ದಾಣಕ್ಕೆ ಶಿಫಾರಸು ಮಾಡಬೇಕು ಎನ್ನುವ ಬೇಡಿಕೆ ಜಿಲ್ಲೆಯ ಜನರಿಂದ ವ್ಯಕ್ತವಾಗುತ್ತಿದೆ.

**ಹೊಸ ಹೆಸರು ನಾಮಕರಣ ವಾಗಬೇಕು**

ಹಳೆಯದಾಗಿದ್ದ ರೈಲು ನಿಲ್ದಾಣವನ್ನು ಕೇಂದ್ರದ ಅಮೃತ ಭಾರತ್ ಯೋಜನೆಯಡಿ ಈಗಾಗಲೇ ಅಭಿವೃದ್ಧಿ ಮಾಡಲಾಗುತ್ತಿದ್ದು ಅದರ ಉದ್ಘಾಟನೆಯ ಜೊತೆಗೆ ಹೊಸ ಹೆಸರು ನಾಮಕರಣವಾಗಬೇಕು ಎಂದು ಸಾರ್ವಜನಿಕರು ಅಪೇಕ್ಷೆ ವ್ಯಕ್ತಪಡಿಸುತ್ತಿದ್ದಾರೆ. ಹನುಮ ಜನಿಸಿದ ನಾಡು ಎಂದೇ ಖ್ಯಾತಿಯಾಗಿರುವ ಅಂಜನಾದ್ರಿ ಇರುವ ಗಂಗಾವತಿಯ ರೈಲು ನಿಲ್ದಾಣಕ್ಕೆ ಅಂಜನಾದ್ರಿ ಹೆಸರು, ಶಕ್ತಿ ದೇವತೆ ಎಂದೇ ಹೆಸರಾದ ಹುಲಿಗಿಯ ಮುನಿರಾಬಾದ್ ನಿಲ್ದಾಣಕ್ಕೆ ಹುಲಿಗೆಮ್ಮದೇವಿ ಹೆಸರು ಮತ್ತು ಕುಕನೂರು ತಾಲ್ಲೂಕಿನ ಭಾನಾಪುರ



ಉದಯವಾಹಿನಿ ಚಿತ್ರ



ರೈಲು ನಿಲ್ದಾಣಕ್ಕೆ ಮಹಾತ್ಮ ಗಾಂಧಿ ಅವರ ಹೆಸರಿ ಡಬೇಕು ಎನ್ನುವ ಕೋರಿಕೆ ಹೆಚ್ಚಾಗಿದೆ. ಈ ಮೂರೂ ಹೆಸರುಗಳನ್ನು ಈಗಾಗಲೇ ಮುಖ್ಯಮಂತ್ರಿಗೆ ಶಿಫಾರಸು ಮಾಡಲಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಮಹಾತ್ಮ ಗಾಂಧೀಜಿ 1924ರಲ್ಲಿ ಬೆಳಗಾವಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಳ್ಳಲು ತೆರಳುವಾಗಿ ಭಾನಾಪುರದಲ್ಲಿ ಕೆಲಹೊತ್ತು ತಂಗಿದ್ದರು. ಅಲ್ಲಿ ಹರಿಜನರ ಉದ್ಧಾರಕ್ಕಾಗಿ ದೇಣಿಗೆ ಸಂಗ್ರಹವನ್ನೂ ಮಾಡಿದ್ದರು ಎನ್ನುವ ಕಾರಣಕ್ಕೆ ಈ ನಿಲ್ದಾಣ ಐತಿಹಾಸಿಕವಾಗಿ ಮಹತ್ವ ಪಡೆದುಕೊಂಡಿದೆ. ಆದ್ದರಿಂದ ಗಾಂಧೀಜಿ ಅವರ ಹೆಸರು ಮುಂಚೂಣಿಗೆ ಬಂದಿದೆ. ಅದರಂತೆ ಕೊಪ್ಪಳಕ್ಕೆ ಗವಿಸಿದ್ದೇಶ್ವರರ ಹೆಸರು ಇರಿಸಬೇಕು ಎನ್ನುವ ಬೇಡಿಕೆ ವ್ಯಕ್ತವಾಗಿದೆ. ಈ ಕುರಿತು

> ಶಿಫಾರಸು ರಾಜ್ಯದಿಂದ ಕೇಂದ್ರ ಗೃಹ ಸಚಿ ವಾಲಯಕ್ಕೆ ಕಳುಹಿಸಿದ ಬಳಿಕ ರೈಲ್ವೆ ಮಂಡಳಿಯಲ್ಲಿ ಈ ಕುರಿತು ಚರ್ಚೆಯಾಗಲಿದೆ. ರಾಜ್ಯದ ಹಾಗೂ ಕ್ಷೇತ್ರ ವ್ಯಾಪ್ತಿಯ ಸಂಸದರ ಅಭಿಪ್ರಾಯ ಆಲಿಸಿದ ಬಳಿಕ ಮಂಡಳಿ ಹೊಸ. ಹೆಸರು ನಾಮಕರಣದ ಬಗ್ಗೆ ತೀರ್ಮಾನ ಮಾಡಲಿದೆ.

ರಾಜಕೀಯ ನಾಯಕರು ತಮ್ಮ ಆಗ್ರಹಗಳನ್ನೂ ಮಾಧ್ಯಮಗಳ ಮೂಲಕ ವ್ಯಕ್ತ ಪಡಿಸುತ್ತಿದ್ದಾರೆ. ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಹುಲಿಗಿಗೆ ಈಗಿರುವಷ್ಟು ಖ್ಯಾತಿ ಮೊದಲು ಇರಲಿಲ್ಲ. ಹೀಗಾಗಿ ಹುಲಿಗಿಯಲ್ಲಿ ರೈಲ್ವೆ ನಿಲ್ದಾಣ ವಿದ್ದರೂ ಈಗಲೂ ಮುನಿರಾಬಾದ್ ನಿಲ್ದಾಣವೆಂದೇ ಕರೆಯಲಾಗುತ್ತಿದೆ.

ಇದನ್ನು ಬದಲಿಸಿ ರೈಲು ನಿಲ್ದಾಣ ಯಾವ ಊರಿನಲ್ಲಿದೆಯೊ ಅದೇ ಊರಿನ ದೇವಿಯ ಹೆಸರಿಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಎಲ್ಲರೂ ಸಮಯಕ್ಕೆ ಸರಿಯಾಗಿ ಸಭೆಗೆ ಬರಬೇಕು ಸೂಕ್ತ ಮಾರ್ಗದರ್ಶನ ಮಾಡಬೇಕು. ಸಲಹೆಗಳನ್ನು ನೀಡಬೇಕು ಎಂದು ಸಂಘದ ಕಾರ್ಯದರ್ಶಿ ಸಿದ್ದಣ್ಣ ನಾಲ್ಕಾಡ ಕೋರಿದ್ದಾರೆ.

## ರಸ್ತೆ ದುರಸ್ಥಿಗೆ ಆಗ್ರಹಿಸಿ ಧರಣಿ

• ಉದಯವಾಹಿನಿ, ರಾಣೆಬೆನ್ನೂರು

ಇಲ್ಲಿನ ಅಂಚೆಕಚೇರಿ ವೃತ್ತದಿಂದ ಸಂಗಮ್ ಚಿತ್ರಮಂದಿರದ ಮೂಲಕ ರೈಲ್ವೆ ನಿಲ್ದಾಣದವರೆಗಿನ ರಸ್ತೆ ದುರಸ್ತಿಗೆ ಆಗ್ರಹಿಸಿ ಡಾ. ರಾಜ್‌ಕುಮಾರ್ ಆಟೊ ಚಾಲಕರು ಮತ್ತು ಮಾಲೀಕರ ಸಂಘದ ಪದಾಧಿಕಾರಿಗಳು ಪಾದಯಾತ್ರೆ ಮೂಲಕ ನಗರಸಭೆ ಕಚೇರಿಗೆ ಆಗಮಿಸಿ ಪ್ರತಿಭಟನೆ ನಡೆಸಿದರು. ಪೌರಾಯುಕ್ತ ಎಫ್.ಐ. ಇಂಗಳಗಿ ಅವರಿಗೆ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಮುಖಂಡ ರಮೇಶ್ ಕೆಂಪಹನುಮಣ್ಣನವರ, 'ಪಟ್ಟಣದ ಎಪಿಎಂಸಿಗೆ ರಾಜ್ಯದ ನಾನಾ ಮೂಲೆಗಳಿಂದ ವ್ಯಾಪಾರಕ್ಕಾಗಿ ಹಲವು ಮಂದಿ ಬರುತ್ತಾರೆ. ಆದರೂ, ನಾಲ್ಕು ವರ್ಷಗಳಿಂದ ರಸ್ತೆಗಳ ದುರಸ್ತಿಯಾಗಿಲ್ಲ.



ಸತತ ಮಳೆಗೆ ರಸ್ತೆಗಳಲ್ಲಿ ಗುಂಡಿ ಬಿದ್ದಿವೆ. ಇದರಿಂದ ವಾಹನ ಸವಾರರು ಆಯತಪ್ಪಿ ಕೆಳಕ್ಕೆ ಬಿದ್ದು ಗಾಯಗೊಂಡ ಘಟನೆಗಳು ನಡೆದಿವೆ' ಎಂದರು. ದೇಶ-ವಿದೇಶಗಳಿಂದ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ. ಕೃಷ್ಣಮೃಗ ಅಭಯಾರಣ್ಯ, ಉಕ್ಕಡಗಾತ್ರಿ ದೇವಸ್ಥಾನಕ್ಕೆ ಸಾವಿರಾರು ಜನರು ಬರುತ್ತಾರೆ. ಹೀಗಿದ್ದರೂ ರಸ್ತೆಗಳ ದುರಸ್ತಿ ಮಾಡಿಲ್ಲ. ರಸ್ತೆಗಳು ಹದಗೆಟ್ಟಿರುವುದರಿಂದ ಆಟೊಗಳಿಗೆ ಹಾನಿಯಾಗುತ್ತಿದೆ. ಬಾಡಿಗೆಯಿಂದ ಬಂದ ಹಣವನ್ನು ವಾಹನ ರಿಪೇರಿಗೆ ಹಾಕಬೇಕಾಗಿದೆ' ಎಂದು ತಿಳಿಸಿದರು.

ರಸ್ತೆಗಳು ದೂಳಿನಿಂದ ಕೂಡಿವೆ. ರಸ್ತೆ ಅಕ್ಕಪಕ್ಕದ ಮನೆಗಳು, ಅಂಗಡಿಗಳಲ್ಲಿ ದೂಳು ಆವರಿಸುತ್ತಿದೆ. ಇದರಿಂದ ವ್ಯಾಪಾರದಲ್ಲಿ ನಮ್ಮ ಅನುಭವಿಸುವಂತಾಗಿದೆ. ಪ್ರಯಾಣಿಕರು ಅನಾರೋಗ್ಯಕ್ಕೀಡಾಗುತ್ತಿದ್ದಾರೆ. ಈ ಬಗ್ಗೆ ವಿವಿಧ ಸಂಘಟನೆಗಳು ನಗರಸಭೆ ಅಧಿಕಾರಿಗಳ ಗಮನಕ್ಕೆ ತಂದಾಗ, ಕಾಟಾಚಾರಕ್ಕೆ ಕೆಲವು ದಿನಗಳವರೆಗೆ ಮಾತ್ರ ನೀರು ಹಾಯಿಸಿದರು' ಎಂದು ಆರೋಪಿಸಿದರು.

ನಗರಸಭೆಯ ವಿಶೇಷ ಅನುದಾನದಡಿ ರಸ್ತೆಗಳ ದುರಸ್ತಿ ಮಾಡಬೇಕು. ಕಾಮಗಾರಿ ಕೈಗೊಳ್ಳಲು ವಿಳಂಬ ಮಾಡಿದರೆ ರಸ್ತೆ ಸಂಚಾರ ಬಂದ್ ಮಾಡಿ, ಬೇಡಿಕೆ ಈಡೇರು ವವರೆಗೂ ಅಹೋರಾತ್ರಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

## ಒಡಿಸ್ಸಾ ಸಮ್ಮೇಳನದಲ್ಲಿ ಕಾರ್ಮಿಕರ ಸಮಸ್ಯೆಗಳ ಚರ್ಚೆ

• ಉದಯವಾಹಿನಿ, ಹುಬ್ಬಳ್ಳಿ

ಇದೇ ತಿಂಗಳ 15ರಿಂದ 17ರವರೆಗೆ ಒಡಿಸ್ಸಾದ ಭುವನೇಶ್ವರದಲ್ಲಿ ನಡೆಯಲಿರುವ ಎಐಯುಟಿಯುಸಿಯ 22ನೇ ಅಖಿಲ ಭಾರತ ಸಮ್ಮೇಳನದಲ್ಲಿ ಕಾರ್ಮಿಕರು ಎದುರಿಸುತ್ತಿರುವ ಹಲವು ಸಮಸ್ಯೆಗಳ ಬಗ್ಗೆ ವಿಸ್ತ್ರತ ಚರ್ಚೆ ನಡೆಯಲಿದೆ ಎಂದು ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಗಂಗಾಧರ ಬಡಿಗೇರ ಹೇಳಿದರು.

ಇಲ್ಲಿನ ಚಿಟಗುಪ್ಪಿ ಆಸ್ಪತ್ರೆ ಆವರಣದಲ್ಲಿ ಜಿಲ್ಲಾ ಮಟ್ಟದ ಆಶಾ ಕಾರ್ಯಕರ್ತೆಯರ ಮಧ್ಯೆ ಸಮ್ಮೇಳನ ಕುರಿತು ಹಮ್ಮಿಕೊಂಡ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು. ದೇಶದಲ್ಲಿ ಅಷ್ಟೇ ಅಲ್ಲದೇ ಇಡೀ ಜಗತ್ತಿನಲ್ಲಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಲಿದೆ. ಕಾರ್ಮಿಕರ ಶೋಚನೀಯ ಪರಿಸ್ಥಿತಿ ಬಗ್ಗೆ ಮುಖ್ಯ ಭಾಷಣಕಾರರು ಮಾತನಾಡಲಿದ್ದಾರೆ. ಬಂಡವಾಳ ಶಾಹಿ ದಾಳಿಗಳನ್ನು ಎದುರಿಸಲು ನಿರ್ದಿಷ್ಟ ಸಂಘಟನಾತ್ಮಕ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಈ ಸಮ್ಮೇಳನದಲ್ಲಿ ರೂಪಿಸಲಾಗುವುದು ಎಂದು ತಿಳಿಸಿದರು. ಕಾರ್ಮಿಕರ ವೇತನವು ಗಣನೀಯವಾಗಿ ಕುಸಿಯುತ್ತಿದೆ. ನಿರುದ್ಯೋಗ ಸಮಸ್ಯೆಯು ಸಾರ್ವಕಾಲಿಕ ದಾಖಲೆ ಮುಟ್ಟಿದೆ. ಕೇಂದ್ರದಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರದ ಆಳ್ವಿಕೆಯ ಮುಂದುವರಿಕೆಯಾಗಿ ಬಿಜೆಪಿ ಸರ್ಕಾರವು ಸಾರ್ವಜನಿಕ ವಲಯದ ಉದ್ಯಮಗಳು, ಸರ್ಕಾರಿ ಉದ್ದಿಮೆಗಳ ಖಾಸಗೀಕರಣ ಮಾಡುತ್ತಿದೆ.

ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಮುಚ್ಚುವುದು, ಲೇಆಫ್, ಖಾಯಂ ಸ್ವರೂಪದ ಉದ್ಯೋಗಗಳನ್ನು ಗುತ್ತಿಗೆ- ಹೊರಗುತ್ತಿಗೆ ಮೂಲಕ ನೀಡುತ್ತಿರುವುದರಿಂದ ಉದ್ಯೋಗಿಗಳ ಸಂಖ್ಯೆ ಬಹಳಷ್ಟು ಕಡಿಮೆ ಮಾಡಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷತೆಯನ್ನು ಎಐಯುಟಿಯುಸಿ ಜಿಲ್ಲಾ ಉಪಾಧ್ಯಕ್ಷೆ ಭುವನಾ ಬಳ್ಳಾರಿ ವಹಿಸಿದ್ದರು.



ಉದಯವಾಹಿನಿ ಚಿತ್ರ



**ನಿರುದ್ಯೋಗ ಸಮಸ್ಯೆಯು ಸಾರ್ವಕಾಲಿಕ ದಾಖಲೆ ಮುಟ್ಟಿದೆ**

## ಸಂಚಾರ ನಿಯಮ ಪಾಲಿಸಿ: ಜಿಲ್ಲಾಧಿಕಾರಿ ದಿವ್ಯಪ್ರಭು

• ಉದಯವಾಹಿನಿ, ಧಾರವಾಡ

ಸುರಕ್ಷತೆ, ಸುಗಮ ಸಂಚಾರ ನಿಟ್ಟನಲ್ಲಿ ಸಂಚಾರ ನಿಯಮಗಳನ್ನು ಎಲ್ಲರೂ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ಹೇಳಿದರು. ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಆಯೋಜಿಸಿದ್ದ ರಸ್ತೆ ಸುರಕ್ಷತೆ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ವರ್ಷ ಜನವರಿಯಿಂದ ನವೆಂಬರ್‌ವರೆಗೆ ಅವಳಿನಗರದಲ್ಲಿ 118 ವಾಹನ ಅಪಘಾತ ಸಂಭವಿಸಿದ್ದು, 126 ಜನ ಸಾವಿಗೀಡಾಗಿದ್ದಾರೆ. ಸಂಚಾರ ನಿಯಮ ಪಾಲಿಸುವುದರಿಂದ ಅಪಘಾತಗಳನ್ನು ತಡೆಗಟ್ಟಬಹುದು ಎಂದು ಹೇಳಿದರು. ಅತಿವೇಗ, ಅಜಾಗರೂಕರವಾಗಿ ಚಾಲನೆ ಮಾಡುವುದರಿಂದ ಅಪಘಾತ ಸಂಭವಿಸುತ್ತವೆ.



ಉದಯವಾಹಿನಿ ಚಿತ್ರ

ಚಾಲಕ, ಇತರ ಪ್ರಯಾಣಿಕರಿಗೂ ತೊಂದರೆ ಆಗುತ್ತದೆ. ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಕಡ್ಡಾಯವಾಗಿ ಧರಿಸಬೇಕು.

ಕಾರು, ಜೀಪು ಮೊದಲಾದ ವಾಹನಗಳವರು ಸೀಟ್ ಬೆಲ್ಟ್ ಧರಿಸಬೇಕು. ರಸ್ತೆ ಬದಿ ಅಳವಡಿಸಿರುವ ಫಲಕಗಳಲ್ಲಿನ ಸೂಚನೆ ಪಾಲಿಸಬೇಕು ಎಂದು ಹೇಳಿದರು. ಜಿಲ್ಲೆಯಲ್ಲಿ ರಸ್ತೆ ಸಂಚಾರ ನಿಯಮಗಳ ಕುರಿತು ಜಾಗೃತಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಜಿಲ್ಲಾ ರಸ್ತೆ ಸುರಕ್ಷತಾ ಪ್ರಾಧಿಕಾರದಿಂದ ಆಯೋಜಿಸಲಾಗುತ್ತಿದೆ.

ಕರಪತ್ರ, ಪೋಸ್ಟರ್ ಮೂಲಕ ಸಂಚಾರ ನಿಯಮಗಳ ಮಾಹಿತಿ ನೀಡಲಾಗುತ್ತಿದೆ ಎಂದರು.

# ವಿದ್ಯಾರ್ಥಿಗಳೇ ದೇಶದ ಕೈ ಹಿಡಿದು ಮುನ್ನಡೆಸಿ: ನಾಡಗೌಡ

### ವಿದ್ಯಾರ್ಥಿಗಳು ನಿಮ್ಮ ಬುದ್ದಿಮಟ್ಟದಿಂದ ದೇಶಕ್ಕೆ ಕೊಡುಗೆಗಳನ್ನು ನೀಡಿ, ಮಕ್ಕಳಿಗೆ ಪಠ್ಯಪುಸ್ತಕದ ಜತೆ ಸಂಸ್ಕಾರಯುತ ಶಿಕ್ಷಣ ಅಗತ್ಯ

• ಉದಯವಾಹಿನಿ, ಮುದ್ದೇಬಿಹಾಳ

ದೇಶದ ಭವಿಷ್ಯ ಇಂದಿನ ಯುವ ಪೀಳಿಗೆಯ ಕೈಯಲ್ಲಿದೆ ದೇಶವನ್ನು ಕೈ ಹಿಡಿದು ನಡೆಸುವ ಸಾಮರ್ಥ್ಯ ನಿಮ್ಮಲಿದೆ ಎಂದು ಕೆಎಸ್ಡಿ ನಿಗಮದ ಅಧ್ಯಕ್ಷ ಶಾಸಕ ಸಿ.ಎಸ್ ನಾಡಗೌಡ ಹೇಳಿದರು ಅವರು ಬುಧುವಾರ ಪಟ್ಟಣದ ಆದರ್ಶ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೀಟ್ ಜೆಇಇ ಸಿಇಟಿ ತರಬೇತಿ, ಸರಕಾರದಿಂದ ನೂತನ ಕಂಪ್ಯೂಟರ್ ಕ್ಲಾಸ್, ಲ್ಯಾಬ್, ಇಂಟರ್ ಆ್ಯಕ್ಟಿವ್ ಡಿಜಿಟಲ್ ಬೋರ್ಡ್, ಉದ್ಘಾಟನೆ, ದಾನಿಗಳ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು ವಿದ್ಯಾರ್ಥಿಗಳು ನಿಮ್ಮ ಬುದ್ದಿಮಟ್ಟದಿಂದ ದೇಶಕ್ಕೆ ಕೊಡುಗೆಗಳನ್ನು ನೀಡಬೇಕು ಕಾಲೇಜಿನ ವಿದ್ಯಾರ್ಥಿಗಳಿಗೆ ಡೆಸ್ಕ್ ನೀಡಿದ ದಾನಿಗಳಿಗೆ ಸನ್ಮಾನ ಮಾಡುತ್ತಿರುವುದು ಶ್ಲಾಘನೀಯವೆಂದರು

ಬಾಲಾಜಿ ಶುಗರ್ಸ ನ ತಾಂತ್ರಿಕ ನಿರ್ದೇಶಕ ಶ್ರೀನಿವಾಸ ಅರಕೇರಿ ಮಾತನಾಡಿ ನಮ್ಮ ಬಾಲಾಜಿ ಶುಗರ್ಸ ಹಣ ಮಂತರಾಯಗೌಡರು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು ನೆಲದ ಮೇಲೆ ಕುಳಿತು ವಿದ್ಯಾರ್ಜನೆ ಮಾಡುತ್ತಿದ್ದಾರೆಂದು ಅರಿತು ಕಾಲೇಜಿಗೆ ತಕ್ಷಣ ಡೆಸ್ಕ್ ನೀಡುವ ಭಾಷೆಯಂತೆ 200 ಡೆಸ್ಕ್ ನೀಡಿದ್ದಾರೆ ಇಂದಿನ ಮಕ್ಕಳಿಗೆ ಪಠ್ಯಪುಸ್ತಕದ ಜೊತೆಗೆ ಸಂಸ್ಕಾರಯುತ ಶಿಕ್ಷಣದ ಅವಶ್ಯಕತೆ ಇದೆ ಎಂದರು.



ಉದಯವಾಹಿನಿ ಚಿತ್ರ

**ದಾನಿಗಳಿಗೆ ಸನ್ಮಾನ, ಕೃತಜ್ಞತೆ**

ದಿವ್ಯ ಸಾನಿಧ್ಯವನ್ನು ವಹಿಸಿದ್ದ ಚಬನೂರ ಹಿರೇಮಠದ ಶ್ರೀರಾಮಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಎಸ್ ಎಸ್ ಅಂಗಡಿ ಮಾತನಾಡಿ ಕಾಲೇಜು ನಡೆದು ಬಂದ ದಾರಿ ಹಾಗೂ ದಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಚಿನ್ನು ನಾಡಗೌಡ, ಬಾಲಾಜಿ ಶುಗರ್ಸನ ಪಿಆರ್ಓ ಮಾರುತಿ ಗುರವ ಕಾಲೇಜಿನ ಉಪನ್ಯಾಸರಾದ ಎಸ್ ಕೆ ಮಳಖೇಡ, ಎಸ್ ಜಿ ಲೋಟಗೇರಿ, ಎಲ್ ಎಸ್ ಗುರವ, ಸಿ ಎಲ್ ನಾಲತವಾಡ, ಬಿ ಎ ನಾಡಗೌಡ ಶ್ರೀಮತಿ ಎ.ಎಂ ಚಳಗೇರಿ, ಹೆಚ್ ಎಂ ಧನ್ನೂರ, ಲಕ್ಷ್ಮೀ ಬಳಿಗೇರ ಸೇರಿದಂತೆ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಕಾಲೇಜಿಗೆ 50 ಡೆಸ್ಕ್**

ಸರಕಾರಿ ಪಿಯು ಕಾಲೇಜಿನ ವಿದ್ಯಾರ್ಥಿಗಳಿಗೆ ಕುಳಿತು ಕೊಳ್ಳಲು ಡೆಸ್ಕ್ ಇರದ ಕಾರಣ ನೆಲದ ಮೇಲೆ ಕುಳಿತು ಪಾಠ ಕಲಿಯಬೇಕಿತ್ತು ಇದನ್ನು ಕನ್ನಡ ಖಾಸಗಿ ವಾಹಿನಿ ಪಬ್ಲಿಕ್ ಟಿವಿ ಬೆಳಕು ಕಾರ್ಯಕ್ರಮದಲ್ಲಿ ಪ್ರಸಾರ ಮಾಡಿದಾಗ ವಿಜಯಪುರದ ದಾನಿ ಮಹಾದೇವಪ್ಪ ಅಥಣಿ ಸ್ವಯಂ ಪ್ರೇರಣೆಯಿಂದ ಕಾಲೇಜಿಗೆ 50 ಡೆಸ್ಕ್‌ಗಳನ್ನು ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು

> ಪುರಸಭೆ ಅಧ್ಯಕ್ಷ ಮಹಿಬೂಬ ಗೋಳಸಂಗಿ ಅವರಿಗೆ ಕಾಲೇಜು ಪಕ್ಕದ ಅಂಬೇಡ್ಕರ್ ಭವನದಲ್ಲಿ ನಡೆಯುವ ಮದುವೆಗೆ ಅಡುಗೆಯನ್ನು ಕಾಲೇಜು ತರಗತಿ ಕೂಡಡಿ ಪಕ್ಕದಲ್ಲಿ ಮಾಡುತ್ತಾರೆ ಮತ್ತು ಬಡಾವಣೆಯ ತಾಜ್ಯ ಕಾಲೇಜು ಹಿಂಭಾಗದಲ್ಲಿ ಬಿಸಾಡುವ ಸಮಸ್ಯೆಗಳನ್ನು ಗಮನಕ್ಕೆ ತಂದರು ಆದಷ್ಟು ಬೇಗ ಅಂಬೇಡ್ಕರ್ ಭವನದಲ್ಲಿ ಪ್ರತ್ಯೇಕ ಅಡುಗೆ ಕೋಣೆ ಹಾಗೂ ಅದಕ್ಕೆ ಕಾಂಪೌಂಡ್ ನಿರ್ಮಾಣ ಮಾಡಲಾಗುತ್ತದೆ ಇದರಿಂದ ಸಮಸ್ಯೆ ಶಾಶ್ವತ ಪರಿಹಾರ ಸಿಗುತ್ತದೆ
>
> -ಮಹಿಬೂಬ ಗೋಳಸಂಗಿ

# ದಕ್ಷಿಣ ಕೊರಿಯಾದಲ್ಲಿ ಜನಾಕ್ರೋಶಕ್ಕೆ ಬೆಚ್ಚಿದ ಅಧ್ಯಕ್ಷ

## ತುರ್ತು ಮಾರ್ಷಿಯಲ್ ಕಾನೂನು ಘೋಷಿಸಿ, ಆರು ಗಂಟೆ ಬಳಿಕ ವಾಪಸ್ ಪಡೆದ ಕೊರಿಯಾ, ಲಾ ಜಾರಿಗೊಳಿಸುವ ಪ್ರಯತ್ನಕ್ಕೆ ಭಾರಿ ಹಿನ್ನಡೆ

**ಸೋಲ್:** ಜನ ಸಾಮಾನ್ಯರಿಗೆ ಮೂಗುದಾರ ಹಾಕುವ ಯೋಜನೆ ಜಾರಿಗೊಳಿಸಿದ್ದ ದಕ್ಷಿಣ ಕೊರಿಯಾ ಅಧ್ಯಕ್ಷ ಯೂನ್ ಸುಕ್ ಯೋಲ್, ಅದಕ್ಕೆ ವ್ಯಕ್ತವಾದ ಆಕ್ರೋಶಕ್ಕೆ ಬೆಚ್ಚಿಬಿದ್ದಿದ್ದಾರೆ. ಮಂಗಳವಾರ ರಾತ್ರಿ ಇಡೀ ದೇಶಕ್ಕೆ ಆಘಾತ ನೀಡಿದ ಯೋಲ್, ಮಾರ್ಷಿಯಲ್ ಲಾ ಘೋಷಿಸಿದ್ದರು. ಆದರೆ ಒಂದೆಡೆ ಸಾರ್ವಜನಿಕರು ಬೀದಿಗಳಿದರೆ, ಇನ್ನೊಂದೆಡೆ ಭದ್ರತಾ ಪಡೆಗಳ ಅಡ್ಡಿಯನ್ನು ಧಿಕ್ಕರಿಸಿ ಸಂಸದರು ಕಾನೂನಿನ ವಿರುದ್ಧ ಮತ ಚಲಾಯಿಸಿದ್ದರಿಂದ ಅವರು ಹಿಮ್ಮೆಟ್ಟಿದ್ದಾರೆ. ಕಠಿಣ ಕಾನೂನನ್ನು ಕೆಲವೇ ಗಂಟೆಗಳಲ್ಲಿ ಹಿಂದಕ್ಕೆ ಪಡೆದಿದ್ದಾರೆ. ಸುಮಾರು ಅರ್ಧ ಶತಮಾನದ ಬಳಿಕ ದಕ್ಷಿಣ ಕೊರಿಯಾದಲ್ಲಿ ದೇಶಾದ್ಯಂತ ಮಾರ್ಷಿ ಯಲ್ ಕಾನೂನು ಘೋಷಣೆಯಾಗಿತ್ತು. ಆದರೆ ಆರು ಗಂಟೆಗಳಲ್ಲಿಯೇ ಆದೇಶ ಹಿಂಪಡೆಯುವಂತಾಗಿದೆ. ಉತ್ತರ ಕೊರಿಯಾದಿಂದ ಬೆದರಿಕೆ ಇದೆ ಎಂದು ಪ್ರತಿಪಾದಿಸಿದ್ದ ಅಧ್ಯಕ್ಷ ಯೋಲ್, ಮಂಗಳವಾರ ರಾತ್ರಿ ದೇಶವನ್ನು ಉದ್ದೇಶಿಸಿ ಮಾಡಿದ



ದೇಶ ವಿರೋಧಿ ಶಕ್ತಿಗಳ ನಿರ್ಮೂಲನೆ

ಟೆಲಿವಿಷನ್ ಭಾಣದಲ್ಲಿ ದ. ಕೊರಿಯಾ ವಿಪಕ್ಷಗಳ ವಿರುದ್ಧ ಹರಿಹಾಯ್ದಿದ್ದರು. ಉತ್ತರ ಕೊರಿಯಾದ ಕಮ್ಯುನಿಸ್ಟ್ ಪಡೆಗಳು ಒಡ್ಡುತ್ತಿರುವ ಬೆದರಿಕೆಯಿಂದ ಉದಾರವಾದಿ ದಕ್ಷಿಣ ಕೊರಿಯಾವನ್ನು ರಕ್ಷಿಸಲು ಹಾಗೂ ಜನರ ಸ್ವಾತಂತ್ರ್ಯ ಮತ್ತು ಸಂತಸವನ್ನು ಕಿತ್ತುಕೊಳ್ಳುತ್ತಿರುವ ದೇಶ ವಿರೋಧಿ ಶಕ್ತಿಗಳನ್ನು ನಿರ್ಮೂಲನೆ ಮಾಡಲು ನಾನು ತುರ್ತು ಮಾರ್ಷಿಯಲ್ ಲಾ ಘೋಷಿಸುತ್ತಿದ್ದೇನೆ ಎಂದು ಹೇಳಿದ್ದರು. 1980ರ ಬಳಿಕ ಮೊದಲ ಬಾರಿಗೆ ದೇಶದಲ್ಲಿ ಮಾರ್ಷಿಯಲ್ ಲಾ ಜಾರಿಗೆ ಪ್ರಯತ್ನಿಸಲಾಗಿದೆ.

### ಪ್ರತಿರೋಧದಿಂದ ಮುಖಭಂಗ

**ಪಕ್ಕದ ಉತ್ತರ ಕೊರಿಯಾ ಸತತ ಬೆದರಿಕೆಗಳನ್ನು ಒಡ್ಡುತ್ತಿರುವ ನಡುವೆ, ದಕ್ಷಿಣ ಕೊರಿಯಾ ಹೊತ್ತಿ ಉರಿಯುವ ಸನ್ನಿವೇಶ ಹಠಾತ್ತನೆ ಸೃಷ್ಟಿಯಾಗಿದೆ. ಉತ್ತರ ಕೊರಿಯಾದ ಆಕ್ರಮಣಕಾರಿ ನೀತಿ ಹಾಗೂ ವಿರೋಧಿಗಳ ಚಟುವಟಿಕೆಗಳನ್ನು ಮುಂದಿಟ್ಟುಕೊಂಡು ಮಾರ್ಷಿಯಲ್ ಲಾ ಘೋಷಿಸಿದ್ದ ಅಧ್ಯಕ್ಷ ಯೂನ್ ಸುಕ್ ಯೋಲ್ ಭಾರಿ ಪ್ರತಿರೋಧದಿಂದ ಮುಖಭಂಗ ಅನುಭವಿಸಿದ್ದಾರೆ.**

**ಏನಿದು ಮಾರ್ಷಿಯಲ್ ಲಾ?:** ಮಾರ್ಷಿಯಲ್ ಕಾನೂನು ತುರ್ತು ಸಂದರ್ಭದಲ್ಲಿ ಸೇನಾ ಅಧಿಕಾರಿಗಳಿಂದ ನಡೆಯುವ ತಾತ್ಕಾಲಿಕ ಆಡಳಿತವಾಗಿರುತ್ತದೆ. ನಾಗರಿಕ ಅಧಿಕಾರಿಗಳು ಕಾರ್ಯನಿರ್ವಹಿಸಲು ಸಾಧ್ಯವಾಗದ ಸಂದರ್ಭದಲ್ಲಿ ಮಾರ್ಷಿಯಲ್ ಲಾವನ್ನು ಸಾಮಾನ್ಯವಾಗಿ ಜಾರಿಗೆ ತರುವ ಪದ್ಧತಿ ಇದೆ. 1979ರಲ್ಲಿ ಸುದೀರ್ಘ ಸಮಯದಿಂದ ಸೇನಾ ಸರ್ವಾಧಿಕಾರಿಯಾಗಿ ಆಡಳಿತ ನಡೆಸಿದ್ದ ಪಾರ್ಕ್ ಚುಂಗ್ ಹೀ ಅವರನ್ನು ದಂಗೆಯಲ್ಲಿ ಹತ್ಯೆ ಮಾಡಿದ ಬಳಿಕ ಮಾರ್ಷಿಯಲ್ ಲಾ ಘೋಷಣೆಯಾಗಿದ್ದು ಕೊನೆಯ ಸಲವಾಗಿತ್ತು.

**ಹತ್ತಾರು ನಿರ್ಬಂಧಗಳು:** ಭಾರತದಲ್ಲಿ 1975ರಲ್ಲಿ ಜಾರಿಯಾಗಿದ್ದ ತುರ್ತು ಪರಿಸ್ಥಿತಿಯಲ್ಲಿ ಇದ್ದ ಬಹುತೇಕ ನಿರ್ಬಂಧಗಳು ಇಲ್ಲಿ ಅನ್ವಯವಾಗುತ್ತವೆ.


ಎಂತಹದೇ ಸನ್ನಿವೇಶವಾದರೂ ಯಾವುದೇ ರಾಜಕೀಯ ಚಟುವಟಿಕೆಗೆ ಅವಕಾಶ ಇರುವುದಿಲ್ಲ. ಸಂಸತ್‌ನ ಚಟುವಟಿಕೆಗಳು, ಸ್ಥಳೀಯ ಸಂಸ್ಥೆಗಳು, ರಾಜಕೀಯ ಪಕ್ಷಗಳು, ರ್‍ಯಾಲಿಗಳು, ಪ್ರತಿಭಟನೆ ಅಥವಾ ಯಾವುದೇ ಮಾದರಿಯ ಪ್ರದರ್ಶನಗಳಿಗೂ ಅನುಮತಿ ಇರುವುದಿಲ್ಲ. ರಾಜಕೀಯ ಸಂಘ ಸಂಸ್ಥೆಗಳು ಹಾಗೂ ಒಡನಾಟಗಳನ್ನು ನಿಷೇಧಿಸಲಾಗುತ್ತದೆ. ಮುದ್ರಣ, ರೇಡಿಯೋ, ಟೆಲಿವಿಷನ್, ಇಂಟರ್ನೆಟ್ ಹಾಗೂ ಸಾಮಾಜಿಕ ಮಾಧ್ಯಮ ಸೇರಿದಂತೆ ಎಲ್ಲ ಮಾದರಿಯ ಮಾಧ್ಯಮಗಳು ಮಾರ್ಷಿಯಲ್ ಲಾ ಕಮಾಂಡ್‌ನ ಪರಿಶೀಲನೆ ಹಾಗೂ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ.

**ಅಧ್ಯಕ್ಷ ಯೋಲ್‌ಗೆ ವಾಗ್ದಂಡನೆ:** 1980ರಲ್ಲಿ ಸೇನಾ ಸರ್ವಾಧಿಕಾರಿ ಚುನ್ ಡೂ ಹಾನ್ ಆಡಳಿತದಲ್ಲಿ ಮಾರ್ಷಿಯಲ್ ಕಾನೂನು ಜಾರಿಗೆ ತಂದಾಗ, ನೂರಾರು ಪ್ರಜಾಪ್ರಭುತ್ವವಾದಿ ಹೋರಾಟಗಾರರನ್ನು ಹತ್ಯೆ ಮಾಡಲಾಗಿತ್ತು. ಆದರೆ ಈ ಬಾರಿ ಜನರನ್ನು ತಡೆಯಲು ಸೇನೆ ಬೀದಿ ಬೀದಿಯಲ್ಲಿ ಶಸ್ತ್ರಸಜ್ಜಿತವಾಗಿ ಇದ್ದರೂ, ಜನ ಶಕ್ತಿಯನ್ನು ಎದುರಿಸುವುದು ಸಾಧ್ಯವಾಗಲಿಲ್ಲ. ಸಂಸತ್‌ನಲ್ಲಿ ಸೇರಿಕೊಂಡ ಸಂಸದರು, ಆದೇಶದ ವಿರುದ್ಧ ಮತಚಲಾಯಿಸಿ, ಅಧ್ಯಕ್ಷರ ಯೋಲ್‌ಗೆ ಸೋಲಾಗುವಂತೆ ಮಾಡಿದರು. ಪ್ರಜಾಪ್ರಭುತ್ವದ ಆಶಯಗಳನ್ನು ಧಿಕ್ಕರಿಸಿದ ಯೋಲ್ ವಿರುದ್ಧ ಸಂಸತ್‌ನಲ್ಲಿ ವಾಗ್ದಂಡನೆ ಕೈಗೊಳ್ಳುವ ಸಾಧ್ಯತೆ ಇದೆ. 300 ಸದಸ್ಯರ ಸಂಸತ್‌ನಲ್ಲಿ ವಾಗ್ದಂಡನೆ ಪ್ರಕ್ರಿಯೆ ಅಂಗೀಕರಿಸಲು ಕನಿಷ್ಠ 201 ಸದಸ್ಯರು ಬೆಂಬಲ ನೀಡಬೇಕಾಗುತ್ತದೆ.

# ತೆಲಂಗಾಣದಲ್ಲಿ 5.3 ತೀವ್ರತೆ ಭೂಕಂಪನ

**ಹೈದರಬಾದ್:** ತೆಲಂಗಾಣದ ಮುಲುಗು ಜಿಲ್ಲೆಯಲ್ಲಿ ಬುಧವಾರ ಬೆಳಗ್ಗೆ 5.3 ತೀವ್ರತೆಯ ಭೂಕಂಪ ಸಂಭವಿಸಿದೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ (ಎನ್ಸಿಎಸ್) ತಿಳಿಸಿದೆ. ಕೆಲವು ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.ಐಎಂಡಿ ಪ್ರಕಾರ, ಕಂಪನವು ಬುಧವಾರ ಬೆಳಗ್ಗೆ 7.27 ರ ಸುಮಾರಿಗೆ ದಾಖಲಾಗಿದೆ. 40 ಕಿ.ಮೀ. ಆಳದಲ್ಲಿ ಮುಲುಗು ಪ್ರದೇಶದಲ್ಲಿ ಕೇಂದ್ರೀಕೃತವಾಗಿತ್ತು. ಹಲವು ವರ್ಷಗಳ ನಂತರ ಅಪರೂಪದ ಭೂಕಂಪನ ಸಂಭವಿಸಿದೆ.ಈ ಭಾಗಕ್ಕೆ ಇದು ತೀವ್ರ ಭೂಕಂಪನ ಎಂದು ತಜ್ಞರು ಹೇಳಿದ್ದಾರೆ.

ಘಟನೆ ನಡೆದ ಸ್ಥಳಕ್ಕೆ ಅಧಿಕಾರಿಗಳು ವಿಜ್ಞಾನಿಗಳ ತಂಡ ಆಗಮಿಸಿ ಪರಿಶೀಲನೆ ನಡೆಸುತ್ತಿದೆ. ಹೈದರಾಬಾದ್, ಹನಕೊಂಡ, ವಾರಂಗಲ್, ಖಮಂ, ರಂಗಾರೆಡ್ಡಿ, ಹೈದರಾಬಾದ್ ಮತ್ತು ಭದ್ರಾದ್ರಿ ಕೊಟ್ಟಗುಡೆಂನಲ್ಲಿ ಇದೇ ರೀತಿಯ ಕಂಪನದ ಅನುಭವವಾಗಿದೆ. ಆ ಭಯಕ್ಕೆ ಜನರು ಮನೆ ಬಿಟ್ಟು ಹೊರಗಡೆ ಬಂದಿದ್ದಾರೆ. 2024 ರ ಮಾರ್ಚ್ 14 ರಂದು ಆಂಧ್ರಪ್ರದೇಶದಲ್ಲಿ ಭೂಕಂಪ ಸಂಭವಿಸಿತ್ತು. ರಿಕ್ಟರ್ ಮಾಪಕದಲ್ಲಿ 3.9ರಷ್ಟು ತೀವ್ರತೆ ದಾಖಲಾಗಿ



ತ್ತು. ಅಕ್ಟೋಬರ್ 12 ರಾತ್ರಿ ಭೂಕಂಪ 2022 ಸಂಭವಿಸಿತ್ತು. ಆದಿಲಾಬಾದ್ ಜಿಲ್ಲೆಯ ಉಟ್ನೂರಿನಲ್ಲಿ ಭೂಮಿ ಕಂಪಿಸಿದ ಹಿನ್ನೆಲೆಯಲ್ಲಿ ಜನರು ಆತಂಕಗೊಂಡಿದ್ದರು. 13 ಜುಲೈ 2022 ರಂದು ನೆಲ್ಲೂರು ಮತ್ತು ಕಡಪ ಜಿಲ್ಲೆಗಳಲ್ಲಿ ಭೂಕಂಪ ಸಂಭವಿಸಿತ್ತು. ಕಂಡ್ರಿಕ, ಪಡಮಟ ನಾಯ್ಡುಪಲ್ಲಿ, ಚಿಲಕಪಾಡು, ಕೃಷ್ಣಾಪುರ ಮತ್ತಿತರ ಗ್ರಾಮಗಳಲ್ಲಿ ಭೂಮಿ ಕಂಪಿಸಿತ್ತು. ಭಾರತದಲ್ಲಿ ನಾಲ್ಕು ಭೂಕಂಪನ ವಲಯಗಳನ್ನು ಗುರುತಿಸಲಾಗಿದ್ದು, ವಲಯ 1, ವಲಯ 2, ವಲಯ 3, ಮತ್ತು ವಲಯ 4 ಎಂದು ಹೇಳಲಾಗಿದೆ.

ವಲಯ 5 ಅತ್ಯಧಿಕ ಮಟ್ಟದ ಭೂಕಂಪನವನ್ನು ಎದುರಿಸುತ್ತದೆ. ವಲಯ 2 ರಲ್ಲಿ ಅತೀ ವಿರಳವಾಗಿ ಭೂ ಕಂಪನಗಳು ಸಂಭವಿಸುತ್ತವೆ. ತೆಲಂಗಾಣವನ್ನು ವಲಯ 2ರಲ್ಲಿ ವರ್ಗೀಕರಿಸಲಾಗಿದ್ದು, ಇದು ಕಡಿಮೆ ತೀವ್ರತೆಯ ವಲಯವಾಗಿದೆ. ಇತ್ತೀಚೆಗೆ ಪಶ್ಚಿಮ ಘಟ್ಟದ ಕೆಲ ಭಾಗಗಳಲ್ಲಿಯೂ ಭೂಮಿ ಕಂಪಿಸಿದ್ದು, ಜನರಲ್ಲಿ ಭಯ ಉಂಟು ಮಾಡಿತ್ತು.

**ಯಾವುದೇ ಪ್ರಾಣಹಾನಿ ಅಥವಾ ಹೆಚ್ಚಿನ ಹಾನಿ ಸಂಭವಿಸಿಲ್ಲ. ಕಳೆದ 20 ವರ್ಷಗಳಲ್ಲಿ ಇಷ್ಟು ತೀವ್ರತೆಯ ಭೂಕಂಪ ಸಂಭವಿಸಿರುವುದು ಇದೇ ಮೊದಲು. ತೆಲಂಗಾಣ ಅಷ್ಟೇ ಅಲ್ಲದೆ ಹೈದರಾಬಾದ್‌ನ ಗೋದಾವರಿ ನದಿ ಸುತ್ತಲೂ ಪ್ರಬಲ ಭೂಕಂಪ ಸಂಭವಿಸಿದೆ. ಮುಲುಗುವನ್ನು ಕೇಂದ್ರಬಿಂದು ಎಂದು ಗುರುತಿಸಲಾಗಿದೆ. ಜಿಲ್ಲೆಯ ಜನರು ಜಾಗರೂಕರಾಗಿರಲು ಮತ್ತು ಭೂಕಂಪಗಳ ಸಮಯದಲ್ಲಿ ಕಿಕ್ಕಿರಿದ ಅಥವಾ ಅಸುರಕ್ಷಿತ ಕಟ್ಟಡಗಳಿಂದ ದೂರವಿರುವಂತೆ ತಜ್ಞರು ತಿಳಿಸಿದ್ದಾರೆ.**

# ಬಿಲ್ ಗೇಟ್ಸ್ ಹೇಳಿಕೆಗೆ ವ್ಯಾಪಕ ಆಕ್ರೋಶ



**ನ್ಯೂಯಾರ್ಕ್:** ಹೊಸತನ್ನು ಪರೀಕ್ಷಿಸಲು ಭಾರತ ಒಂದು ಉತ್ತಮ ಪ್ರಯೋಗಶಾಲೆ ಎಂದ ಮೈಕ್ರೋಸಾಫ್ಟ್‌ನ ಸಂಸ್ಥಾಪಕ ಬಿಲ್ ಗೇಟ್ಸ್ ಹೇಳಿಕೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಲಿಂಕ್‌ಡಿನ್ ಸಹ ಸಂಸ್ಥಾಪಕ ರೀಡ್ ಹಾಫ್‌ಮನ್ ಅವರೊಂದಿಗೆ ನಡೆಸಿದ ಪಾಡ್‌ಸ್ಟ್ ಸಂವಾದದಲ್ಲಿ ಮಾತನಾಡಿದ ಗೇಟ್ಸ್, ಭಾರತದಲ್ಲಿ ಸಾಕಷ್ಟು ಸಂಗತಿಗಳಿದ್ದು, ಹಲವು ಸಂಕಷ್ಟಗಳೂ ಇವೆ. ಆರೋಗ್ಯ, ಪೌಷ್ಟಿಕತೆ, ಶಿಕ್ಷಣ ಕ್ಷೇತ್ರಗಳು ಉತ್ತಮಗೊಳ್ಳುತ್ತಿವೆ. ಇವುಗಳಿಂದ ಸರ್ಕಾರದ ಆದಾಯವೂ ಹೆಚ್ಚಳವಾಗುತ್ತಿದೆ. 20 ವರ್ಷಗಳ ನಂತರ ಈ ಜನರ ಜೀವನದಲ್ಲಿ ಗಮನಾರ್ಹ ಬದಲಾವಣೆ ಕಾಣಲಿದೆ. ಹೀಗಾಗಿ ಭಾರತ ಎಂಬುದು ಎಂದಿಗೂ ಒಂದು ಉತ್ತಮ ಪ್ರಯೋಗಾಲಯವಾಗಿದೆ. ಭಾರತದಲ್ಲಿ ಸಾಬೀತಾಗಿದ್ದನ್ನು ಜಗತ್ತಿನ ಇತರ ರಾಷ್ಟ್ರಗಳಿಗೆ ತೆಗೆದುಕೊಂಡುಹೋಗುವುದು ಸುಲಭ' ಎಂದಿದ್ದರು. ಗೇಟ್ಸ್ ಅವರ ಈ ಅಭಿಪ್ರಾಯಕ್ಕೆ ನೆಟ್ಟಿಗರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. 2009ರಲ್ಲಿ ಕ್ಲಿನಿಕಲ್ ಟ್ರಯಲ್ ಹೆಸರಿನಲ್ಲಿ ಬಿಲ್ ಹಾಗೂ ಮಿಲಿಂಡಾ ಗೇಟ್ಸ್ ಪ್ರತಿಷ್ಠಾನವು ಭಾರತದ ಆದಿವಾಸಿಗಳ ಮೇಲೆ ನಡೆಸಿದ ಪ್ರಯೋಗದ ಪರಿಣಾಮ ಏಳು ಶಾಲಾ ಬಾಲಕಿಯರು ಮೃತ ಪಟ್ಟಿದ್ದರು. ಹಲವರು ತೀವ್ರವಾಗಿ ಅಸ್ವಸ್ಥರಾಗಿದ್ದರು' ಎಂಬುದನ್ನು ಉಲ್ಲೇಖಿಸಿದ್ದಾರೆ. ಆರೋಗ್ಯ ಕ್ಷೇತ್ರದ ತಂತ್ರಜ್ಞಾನದಲ್ಲಿ ನಿಖರ ಕಾರ್ಯಕ್ರಮ ಯೋಜನೆಯಡಿ ನಡೆಸಿದ ಕ್ಲಿನಿಕಲ್ ಟ್ರಯಲ್ಸ್ ನಡೆಸಿದ ಸ್ವಯಂ ಸೇವಾ ಸಂಸ್ಥೆಗೆ ಗೇಟ್ಸ್ ಪ್ರತಿಷ್ಠಾನವು ದೇಣಿಗೆ ನೀಡಿತ್ತು. ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ ಸಹಯೋಗದಲ್ಲಿ ಪಾಥ್ ನಡೆಸಿದ ಕ್ಲಿನಿಕಲ್ ಟ್ರಯಲ್‌ನಲ್ಲಿ ಗರ್ಭಕೊರಳಿನ ಕ್ಯಾನ್ಸರ್ ತಡೆಗಟ್ಟಲು ಅಭಿವೃದ್ಧಿಪಡಿಸಿದ್ದ ಲಸಿಕೆಯನ್ನು ತೆಲಂಗಾಣ, ಗುಜರಾತ್‌ನ ವಡೋದರಾದ 14 ಸಾವಿರ ಆದಿವಾಸಿ ಶಾಲಾ ಬಾಲಕಿಯರಿಗೆ ನೀಡಲಾಗಿತ್ತು. ಇದರಲ್ಲಿ ಪಾಲ್ಗೊಂಡಿದ್ದ ಕೆಲ ಬಾಲಕಿಯರಲ್ಲಿ ಲಸಿಕೆ ತನ್ನ ಅಡ್ಡಪರಿಣಾಮ ಬೀರಿತ್ತು. ಲಸಿಕೆ ಪಡೆದ ಬಹಳಷ್ಟು ಜನ ಅಡ್ಡಪರಿಣಾಮಗಳ ಕುರಿತು ವರದಿ ಮಾಡಿದ್ದರು. ಏಳು ಸಾವು ಸಂಭವಿಸಿತ್ತು. ಆದರೆ ಈ ಸಾವಿಗೂ ಲಸಿಕೆಗೂ ಸಂಬಂಧ ವಿಲ್ಲ ಎಂದೆನ್ನಲಾಗಿತ್ತು. ಕ್ಲಿನಿಕ್ ಟ್ರಯಲ್ಸ್‌ನಲ್ಲಿ ಸಾಕಷ್ಟು ಲೋಪಗಳು ಕಂಡುಬಂದಿದ್ದವು ಎಂದು ವೈದ್ಯರೊಬ್ಬರು ಹೇಳಿದ್ದರು.

# ಮಹಾರಾಷ್ಟ್ರ ಬಿಜೆಪಿ ಶಾಸಕಾಂಗ ನಾಯಕನಾಗಿ ಫಡ್ನಾವೀಸ್ ಆಯ್ಕೆ

**ಮುಂಬೈ:** ಫಲಿತಾಂಶ ಹೊರಬಿದ್ದು 13 ದಿನಗಳ ಬಳಿಕ ಮಹಾರಾಷ್ಟ್ರ ಮುಖ್ಯಮಂತ್ರಿ ಆಯ್ಕೆ ಕಗ್ಗಂಟು ಕೊನೆಗೂ ಸುಖಾಂತ್ಯ ಕಂಡಿದ್ದು, ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ದೇವೇಂದ್ರ ಫಡ್ನಾವೀಸ್ ಆಯ್ಕೆಯಾಗಿದ್ದು, ಅವರೇ ಮುಂದಿನ ಮಹಾರಾಷ್ಟ್ರ ಮುಖ್ಯಮಂತ್ರಿಯಾಗಲಿದ್ದಾರೆ.

ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಯುವ ನಾ ಯಕ ದೇವೇಂದ್ರ ಫಡ್ನಾವೀಸ್ ನೂತನ ಮುಖ್ಯಮಂತ್ರಿಯಾಗಿ ಇಂದು ಅಧಿಕಾರ ಸ್ವೀಕಾರ ಮಾಡಲಿದ್ದಾರೆ ಜೊತೆಗೆ ಮಾಜಿ ಮುಖ್ಯಮಂತ್ರಿ ಶಿವಸೇನೆಯ ಮುಖಂಡ ಏಕ್ ನಾಥ್ ಶಿಂಧೆ, ಎನ್ಸಿಪಿಯ ಅಜಿತ್ ಪವಾರ್ ಉಪ ಮುಖ್ಯಮಂತ್ರಿಯಾಗಿ ಅಧಿ ಕಾರ ಸ್ವಿಕಾರ ಮಾಡುವರು.

ಅಧಿಕಾರ ಹಂಚಿಕೆ ಮುಗಿದ ಬಳಿಕ ಸಚಿವ ಸಂಪುಟ ಮುಂದಿನ ವಾರದಲ್ಲಿ ನಡೆಯಲಿದೆ. ಮುಂಬೈನಲ್ಲಿ ನಡೆದ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಫಡ್ನಾವೀಸ್ ಅವರನ್ನು ಸರ್ವಾನುಮತದಿಂದ ಆಯ್ಕೆ



12 ಖಾತೆಗಳಷ್ಟೇ ಶಿವಸೇನೆಗೆ ಸಿಗುವ ಸಾಧ್ಯತೆ


ಮಾಡಲಾಯಿತು. ಕೇಂದ್ರದಿಂದ ವೀಕ್ಷಕರಾಗಿ ಆಗಮಿಸಿದ್ದ ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಹಾಗೂ ವಿಜಯ್ ರೂಪಾನಿ ಅನುಮೋದಿಸಿದ್ದಾರೆ. ಇಂದು ಸಂಜೆ ಮಹಾಯುತಿಯ ನಾಯಕರು ರಾಜ್ಯಪಾಲ ಸಿ.ಕೆ . ರಾಧಕೃಷ್ಣನ್ ಅವರನ್ನು ಭೇಟಿಯಾಗಿ ಸರ್ಕಾರದ ರಚನೆಗೆ ಹಕ್ಕು ಮಂಡನೆ ಮಾಡಲಿದ್ದಾರೆ.

ಫಡ್ನಾವೀಸ್, ಶಿಂಧೆ ಮತ್ತು ಪವಾರ್ ಅವರು ನಾಳೆ ಸಂಜೆ 5 ಗಂಟೆಗೆ ಮುಂಬೈನ ಆಜಾದ್ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಪ್ರಮಾಣ ವಚನ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.ಸರ್ಕಾರ ರಚನೆ, ಅಧಿಕಾರದ ಹಂಚಿಕೆ ಸೂತ್ರ ಕುರಿತಂತೆ ಹಂಗಾಮಿ ಸಿಎಂ ಏಕನಾಥ್ ಶಿಂಧೆ ಹಾಗೂ ಮಾಜಿ ಡಿಸಿಎಂ ದೇವೇಂದ್ರ ಫಡ್ನಾವೀಸ್ನಡುವೆ ನಡೆದ ಮಾತುಕತೆಯಲ್ಲಿ ಬಿಕ್ಕಟ್ಟು ಇತ್ಯರ್ಥಗೊಂಡಿದೆ. ಮೈತ್ರಿ ನಾಯಕನ ಆಯ್ಕೆಯ ಕಗ್ಗಂಟಿನ ನಡುವೆ ಮಹಾಯುತಿ ಮೈತ್ರಿ ಸರ್ಕಾರ ರಚನೆ, ಅಧಿಕಾರ ಹಂಚಿಕೆ ಸೂತ್ರ ಕುರಿತಂತೆ ಹಂಗಾಮಿ ಸಿಎಂ ಏಕನಾಥ್ ಶಿಂಧೆ ಹಾಗೂ ಮಾಜಿ ಡಿಸಿಎಂ ದೇವೇಂದ್ರ ಫಡ್ನಾವೀಸ್ ನಡುವೆ ಮಾತುಕತೆಯಲ್ಲಿ ಬಿಕ್ಕಟ್ಟು ಇತ್ಯರ್ಥಗೊಂಡಿದ್ದು, ಡಿಸಿಎಂ ಸ್ಥಾನ ವಹಿಸಿಕೊಳ್ಳಲು ಶಿಂಧೆ ಸಮತಿಸಿದ್ದಾರೆ. ಸಿಎಂ ಆಯ್ಕೆ, ಸಚಿವ ಸ್ಥಾನ, ಖಾತೆಗಳ ಹಂಚಿಕೆ ಬಗ್ಗೆ ಸಮಾಲೋಚಿಸಿದರು. ಉಭಯ ನಾಯಕರ ನಡುವೆ ನಡೆದ ಮಾತುಕತೆ ಬಳಿಕ ಮಹಾಯುತಿ ಮೈತ್ರಿಯಲ್ಲಿ ಮೂಡಿದ್ದ ಬಿಕ್ಕಟ್ಟು ಇತ್ಯರ್ಥಗೊಂಡಿದ್ದು, ಶಿವಸೇನೆ ಮೈತ್ರಿ ಸರ್ಕಾರದ ಭಾಗವಾಗಿ ಕಾರ್ಯ ನಿರ್ವಹಿಸಲು ಏಕನಾಥ್ ಶಿಂಧೆ ಸಮತಿಸಿದರು ಎಂದು ಮೂಲಗಳು ತಿಳಿಸಿವೆ. ಸರ್ಕಾರ ರಚನೆ ಬಳಿಕ ಸಚಿವ ಸ್ಥಾನ, ಖಾತೆ ಹಂಚಿಕೆ ಕುರಿತು ಅಂತಿಮ ಮಾತುಕತೆ ನಡೆಯಲಿದೆ. ಮಹಾಯುತಿ ಮೈತ್ರಿ ನಾಯಕನ ಆಯ್ಕೆಗೆ ನ.29 ರಂದು ದಿಲ್ಲಿಯಲ್ಲಿ ನಡೆದ ಅಪೂರ್ಣ ಸಭೆ ಬಳಿಕ ದಿಢೀರ್ ತವರು ಜಿಲ್ಲೆ ಸತಾರಾಗೆ ತೆರಳಿದ್ದ ಏಕನಾಥ್ ಶಿಂಧೆ ನಡೆಯಿಂದ ಸಿಎಂ ಆಯ್ಕೆ ಕಗ್ಗಂಟಾಗಿತ್ತು.

**ಸರ್ಕಾರ ರಚನೆ ಸೂತ್ರ:** ಗೃಹ, ಕಂದಾಯ ಸೇರಿ 21-22 ಸಚಿವಾಲಯಗಳು ಬಿಜೆಪಿ ಪಾಲಿಗೆ ಸೇರ್ಪಡೆಯಾಗುವ ಸಾಧ್ಯತೆ ಇದೆ. ಜತೆಗೆ ಸ್ಪೀಕರ್, ವಿಧಾನ ಪರಿಷತ್ ಅಧ್ಯಕ್ಷ ಸ್ಥಾನಗಳನ್ನು ಉಳಿಸಿಕೊಳ್ಳುವ ನಿರೀಕ್ಷೆಯಿದೆ. ಶಿವಸೇನೆಯು ಸಂಪುಟದಲ್ಲಿ 16 ಸಚಿವಾಲಯಗಳನ್ನು ನೀಡುವಂತೆ ಬೇಡಿಕೆಯಿಟ್ಟಿದೆ. ಆದರೆ, ನಗರಾಭಿವೃದ್ಧಿ ಸೇರಿ 12 ಖಾತೆಗಳಷ್ಟೇ ಶಿವಸೇನೆಗೆ ಸಿಗುವ ಸಾಧ್ಯತೆಯಿದೆ. ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ ಶಿವಸೇನೆ ಪೈಪೋಟಿ ನಡೆಸುತ್ತಿದ್ದು, ಈಗಾಗಲೇ ಉಪ ಸಭಾಪತಿ ಸ್ಥಾನವನ್ನು ಅಲಂಕರಿಸಿದೆ. ಹಣಕಾಸು, ಡೆಪ್ಯುಟಿ ಸ್ಪೀಕರ್ ಸೇರಿ 9-10 ಸಚಿವಾಲಯಗಳು ಎನ್ಸಿಪಿಗೆ ಲಭಿಸುವ ಸಾಧ್ಯತೆಯಿದೆ. ಮುಂಬೈನ ಆಜಾದ್ ಮೈದಾನದಲ್ಲಿ ಮೂವರು ನಾಯಕರ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದ್ದು, ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ನೂತನ ಸರ್ಕಾರದ ಪ್ರಮಾಣ ವಚನ ಕಾರ್ಯಕ್ರಮ ಹಿನ್ನೆಲೆಯಲ್ಲಿ ಎರಡೂವರೆ ಸಾವಿರ ಮುಂಬೈ ಪೊಲೀಸ್ ಸಿಬ್ಬಂದಿಯನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ.

ಇದಲ್ಲದೆ, ಕಾರ್ಯಪಡೆ, ಸಶಸ್ತ್ರ ಪೊಲೀಸ್ ಪಡೆ ಮತ್ತು ಇತರ ಭದ್ರತಾ ಏಜೆನ್ಸಿಗಳನ್ನು ಸಹ ಅಲರ್ಟ್ ಮಾಡಲಾಗಿದೆ. ನ.20 ರಂದು ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶದಲ್ಲಿ ಆಡಳಿತಾರೂಢ ಮಹಾಯುತಿಯ ಬೃಹತ್ ವಿಜಯದ ನಂತರ, ಮಹಾರಾಷ್ಟ್ರದ ಹೊಸ ಸರ್ಕಾರವು ಇಂದು ಪ್ರಮಾಣವಚನ ಸ್ವೀಕರಿಸಲಿದೆ.

# ಮೀರತ್ ಮೂಲದ ವ್ಯಕ್ತಿಗೆ ಮರಣ ದಂಡನೆ ಶಿಕ್ಷೆ ವಿಧಿಸಿದ ಸೌದಿ ಅರೇಬಿಯಾ ಕೋರ್ಟ್



**ಮೀರತ್:** ಮಾದಕ ವಸ್ತು ಕಳ್ಳಸಾಗಣೆ ಪ್ರಕರಣದಲ್ಲಿ ಉತ್ತರ ಪ್ರದೇಶದ ಮೀರತ್ ಮೂಲದ ವ್ಯಕ್ತಿಯೊಬ್ಬರಿಗೆ ಸೌದಿ ಅರೇಬಿಯಾ ನ್ಯಾಯಾಲಯ ಮರಣ ದಂಡನೆ ಶಿಕ್ಷೆ ವಿಧಿಸಿದೆ. ಜೈದ್ ಜುನೈದ್ ಶಿಕ್ಷೆಗೆ ಗುರಿಯಾದ ವ್ಯಕ್ತಿ. ಸೌದಿಯಲ್ಲಿರುವ ಭಾರತೀಯ ರಾಯಭಾರಿ ಕಚೇರಿಯಿಂದ ನ್ಯಾಯಾಲಯದ ತೀರ್ಪಿನ ಕುರಿತು ಜಿಲ್ಲಾಧಿಕಾರಿಗಳ ಕಚೇರಿಗೆ ಪತ್ರ ಬಂದಿರುವ ಬಗ್ಗೆ ಮೀರತ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ವಿಪಿನ್ ತಾಡಾ ತಿಳಿಸಿದ್ದಾರೆ.

ಮುಂಡಲಿ ಪೊಲೀಸ್ ಠಾಣಾ ವ್ಯಾಪ್ತಿಯ ರಾಚೌತ್ ಗ್ರಾಮದ ಜೈದ್ ಜುನೈದ್ ಅವರಿಗೆ ಮಾದಕ ವಸ್ತು ಕಳ್ಳಸಾಗಣೆ ಪ್ರಕರಣದಲ್ಲಿ ಮೆಕ್ಕಾ ನ್ಯಾಯಾಲಯ ಮರಣ ದಂಡನೆ ಶಿಕ್ಷೆ ವಿಧಿಸಿದೆ. ಅವರ ಕುಟುಂಬಕ್ಕೆ ಕ್ಷಮಾದಾನ ಅರ್ಜಿ ಸಲ್ಲಿಸುವ ಅವಕಾಶವಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಪತ್ರವನ್ನು ಜೈದ್ ಅವರ ಮ ನೆಯ ಕುಟುಂಬಕ್ಕೆ ತಲುಪಿಸಲಾಗಿದೆ' ಎಂದು ವಿಪಿನ್ ಅವರು ಮಾಹಿತಿ ನೀಡಿದ್ದಾರೆ. 'ಜೈದ್, ಅಲ್-ಜಫರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಒಮ್ಮೆ ಅವರ ಕಾರು ಕಳುವಾಗಿತ್ತು. ಮೂರು ದಿನಗಳ ಬಳಿಕ ಸೌದಿ ಪೊಲೀಸರು ಕಾರನ್ನು ಹುಡುಕಿಕೊಟ್ಟಿದ್ದರು. ಕಾರು ಅಪಘಾತವಾದ ಸ್ಥಿತಿಯಲ್ಲಿ ಸಿಕ್ಕಿತ್ತು. ಹೀಗಾಗಿ ಜೈದ್ ಕೆಲಸ ಮಾಡುತ್ತಿದ್ದ ಕಂಪನಿ ನಷ್ಟ ಭರಿಸುವಂತೆ ಅವರ ಮೇಲೆ ಪ್ರಕರಣ ದಾಖಲಿಸಿತ್ತು. ಆ ಹಣವನ್ನು ಭರಿಸಲು ಸೌದಿ ಪೊಲೀಸ್ ಅಧಿಕಾರಿಯೊಬ್ಬರ ಕಾರು ಚಾಲಕನಾಗಿ ಜೈದ್ ಕೆಲಸಕ್ಕೆ ಸೇರಿಕೊಂಡಿದ್ದರು.

ಮೂರು ತಿಂಗಳು ಕಳೆದ ಮೇಲೆ ಜೈದ್ ಬಳಿ 700 ಗ್ರಾಂ ಮಾದಕ ದ್ರವ್ಯ ದೊರಕಿದೆ ಎಂದು ಮಾದಕ ವಸ್ತು ಕಳ್ಳಸಾಗಣೆ ಪ್ರಕರಣ ದಾಖಲಿಸಲಾಗಿತ್ತು. 2023ರ ಜನವರಿ 15 ರಂದು ಜೈದ್ ಬಂಧನವಾಗಿತ್ತು. ಅವರನ್ನು ಜೆಡ್ಡಾ ಸೆಂಟ್ರಲ್ ಜೈಲ್‌ನಲ್ಲಿ ಇರಿಸಲಾಗಿತ್ತು' ಎಂದು ಕುಟುಂಬ ಮಾಹಿತಿ ನೀಡಿದೆ. ಜೈದ್ ನಿರಪರಾಧಿ. ಅವರು ಅವರ ಕೆಲಸ ಮಾಡುತ್ತಿದ್ದರು ಅಷ್ಟೆ. ಭಾರತ ಸರ್ಕಾರ ಮಧ್ಯಪ್ರವೇಶಿಸಿ ಅವರನ್ನು ಪಾರುಮಾಡಬೇಕು ಎಂದು ಜೈದ್ ಸಹೋದರ ಹೇಳಿದ್ದಾರೆ.

# ಶಿರೋಮಣಿ ಅಕಾಲಿದಳದ ಮುಖ್ಯಸ್ಥ ಸುಖಬೀರ್ ಸಿಂಗ್ ಬಾದಲ್ ಮೇಲೆ ಫೈರಿಂಗ್

**ಅಮೃತಸರ:** ಪಂಜಾಬ್‌ನ ಅಮೃತಸರದ ಸ್ವರ್ಣ ಮಂದಿರ ಮುಂಭಾಗ ಶಿರೋಮಣಿ ಅಕಾಲಿದಳದ ಮುಖ್ಯಸ್ಥ ಸುಖಬೀರ್ ಸಿಂಗ್ ಬಾದಲ್ ಮೇಲೆ ಗುಂಡಿನ ದಾಳಿ ನಡೆದಿದ್ದು, ಭದ್ರತಾ ಸಿಬ್ಬಂದಿಯ ಸಮಯ ಪ್ರಜ್ಞೆಯಿಂದ ಅಪಾಯ ಸ್ವಲ್ಪದರಲ್ಲೇ ತಪ್ಪಿದೆ. ಮಾಜಿ ಭಯೋತ್ಪಾದಕ ನಾರಾಯಣ್ ಸಿಂಗ್ ಚೌಡಾ ಎಂಬಾತ ಸುಖಬೀರ್ ಸಿಂಗ್ ಬಾದಲ್ ಅವರನ್ನು ಗುಂಡಿಕ್ಕಿ ಕೊಲ್ಲಲು ಪ್ರಯತ್ನಿಸಿದ್ದಾನೆ ಎಂದು ತಿಳಿದು ಬಂದಿದೆ. ಸುಖಬೀರ್ ಸಿಂಗ್ ಬಾದಲ್ ವೀಲ್ಚೇರ್‌ನಲ್ಲಿ ಕುಳಿತಿದ್ದಾಗ ಈ ದಾಳಿ ನಡೆದಿದ್ದು, ಆದರೆ, ಸುಖಬೀರ್ ಸಿಂಗ್ ಬಾದಲ್ ಜೊತೆಗಿದ್ದ ಜನರು ಗುಂಡು ಹಾರಿಸಲು ಯತ್ನಿಸಿದ ವ್ಯಕ್ತಿಯನ್ನು ತಕ್ಷಣವೇ ಹಿಡಿದಿದ್ದರಿಂದ ಅಪಾಯದಿಂದ ಪಾರಾಗಿದ್ದಾರೆ.

ಏತನಧ್ಯೆ, ಭದ್ರತೆ ಒದಗಿಸಲು ಪಂಜಾಬ್ ಸರ್ಕಾರ ವಿಫಲವಾಗಿದೆ ಎಂದು ಆಕಾಲಿ ದಳ ಆರೋಪಿಸಿದೆ. ಪಂಜಾಬ್‌ನ ಮಾಜಿ ಉಪಮುಖ್ಯಮಂತ್ರಿ ಸುಖಬೀರ್ ಸಿಂಗ್ ಬಾದಲ್ ಅಕಾಲಿ ಸರ್ಕಾರದ ಅವಧಿಯಲ್ಲಿ ಡೇರಾ ಮುಖ್ಯಸ್ಥ ರಾಮ್ ರಹೀಮ್‌ಗೆ ಕ್ಷಮಾದಾನ ನೀಡುವಲ್ಲಿ ತಮ ಪಾತ್ರವಿತ್ತು ಎಂದು ಒಪ್ಪಿಕೊಂಡ ಹಿನ್ನೆಲೆಯಲ್ಲಿ ಶಿಕ್ಷೆ ವಿಧಿಸಲಾಗಿದೆ. ಸುಖಬೀರ್ ಸಿಂಗ್



ಬಾದಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಐದು ಸಿಂಗ್ ಸಾಹಿಬಾನ್‌ಗಳ ಸಭೆಯು ಅಕಾಲ್ ತಖ್?ತನಲ್ಲಿ ನಡೆಯಿತು. ಎರಡು ತಿಂಗಳ ಹಿಂದೆ ಅಕಾಲ್ ತಖ್ತ್ ಅವರು ಸುಖಬೀರ್ ಸಿಂಗ್ ಬಾದಲ್ ಅವರನ್ನು ತಂಖೈಯಾ ಎಂದು ಘೋಷಿಸಿದ್ದರು.

ಸುಖಬೀರ್ ಸಿಂಗ್ ಬಾದಲ್ ಹಾಗೂ 2015ರ ಅಕಾಲಿ ಸರ್ಕಾರದ ಇತರೆ ಕ್ಯಾಬಿನೆಟ್ ಸದಸ್ಯರಿಗೆ ಗೋಲ್ಡನ್ ಟೆಂಪಲ್‌ನಲ್ಲಿ ಶೌಚಾಲಯ, ಪಾತ್ರೆ ತೊಳೆಯುವ ಶಿಕ್ಷೆ ವಿಧಿಸಲಾಗಿದೆ. ಅಕಾಲ್ ತಖ್ತ್ ಜಥೇದಾರ್ ಗಿಯಾನಿ ರಘುಬೀರ್ ಸಿಂಗ್ ಅವರು ಶಿರೋಮಣಿ ಅಕಾಲಿದಳದ ಕಾರ್ಯಕಾರಿ ಸಮಿತಿಗೆ ಮೂರು ದಿನಗಳಲ್ಲಿ ಸುಖಬೀರ್ ಸಿಂಗ್ ಬಾದಲ್ ಅವರ ರಾಜೀನಾಮೆಯನ್ನು ಅಂಗೀಕರಿಸಿ ಅಕಲ್ ತಖ್ತ ಸಾಹಿಬ್‌ಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ.

**ಒಂದು ಗಂಟೆ ಕಾಲ ಕೀರ್ತನೆಯನ್ನು ಆಲಿಸಿ ಕೊನೆಗೆ ಬಿಸಾಡಿದ ಪಾತ್ರೆಗಳನ್ನು ಸ್ವಚ್ಛಗೊಳಿಸಿದ್ದರು.ಅವರಲ್ಲದೆ, ಮಾಜಿ ಸಚಿವರಾದ ಬಿಕ್ರಮ್ ಸಿಂಗ್ ಮಜಿಥಿಯಾ, ಸುಖದೇವ್ ಸಿಂಗ್ ಧಿಂಡ್ಸಾ ಕೂಡ ಕೊಳಕು ಪಾತ್ರೆಗಳನ್ನು ಸ್ವಚ್ಛಗೊಳಿಸಿದರು. ಪಕ್ಷದ ಮುಖಂಡರಾದ ಡಾ.ದಲ್ಜಿತ್ ಸಿಂಗ್ ಚೀಮಾ, ಸುರ್ಜಿತ್ ಸಿಂಗ್ ರಖ್ರಾ, ಪ್ರೇಮ್ ಸಿಂಗ್ ಚಂದುಮಜ್ರಾ, ಮಹೇಶ್ ಇಂದರ್ ಗ್ರೆವಾಲ್ ಶೌಚಾಲಯವನ್ನು ಸ್ವಚ್ಛಗೊಳಿಸಿದರು.**

ಘಟನೆಗೆ ಸಂಬಂಧಿಸಿದಂತೆ ಎಡಿಸಿಪಿ ಹರ್ಪಾಲ್ ಸಿಂಗ್ ಅವರು ಮಾತನಾಡಿ, ಇಲ್ಲಿ ಭಾರೀ ಭದ್ರತಾ ವ್ಯವಸ್ಥೆಗಳಿವೆ. ನಾನು ಬೆಳಿಗ್ಗೆ ಏಳು ಗಂ ಟೆಗೆ ಇಲ್ಲಿಗೆ ಬಂದೆ. ನಾರಾಯಣ್ ಸಿಂಗ್ ಚೌರಾ ನಿನ್ನೆಯೂ ಇಲ್ಲಿಗೆ ಬಂದಿದ್ದ. ಈ ಹಿಂದೆ ಆತ ನಮನ ಸಲ್ಲಿಸಲು ಈ ಗುರುಘರ್ಗೆ ಹೋಗಿದ್ದ. ಇದಾದ ಬಳಿಕ ಹೊರಗೆ ಬಂದು ಗುಂಡು ಹಾರಿಸಿದ್ದಾನೆ. ಆದರೆ ನಮ ಭದ್ರತಾ ಸಿಬ್ಬಂದಿ ಅಲ್ಲಿದ್ದ ಕಾರಣ ನೇರವಾಗಿ ಗುಂಡು ಹಾರಿಸಲು ಅವನಿಗೆ ಸಾಧ್ಯವಾಗಲಿಲ್ಲ. ಹೀಗಾಗಿ ಹೆಚ್ಚಿನ ಅಪಾಯ ಸಂಭವಿಸಿಲ್ಲ ಎಂದು ಹೇಳಿದ್ದಾರೆ.


# ಕಾರ್ಯನಿರತ ನಿರ್ಮಾಪಕರ ಸಂಘದಿಂದ ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ

## ಸಿನಿಮಾ ಬಿಡುಗಡೆಯಾಗಿ 3 ದಿನ ಆನ್‌ಲೈನ್ ವಿಮರ್ಶೆ ನಿಷೇಧಕ್ಕೆ ಹೈಕೋರ್ಟ್‌ಗೆ ಮನವಿ; ಸರ್ಕಾರಕ್ಕೆ ನೋಟಿಸ್ ಜಾರಿ

**ಹೊಸದಿಲ್ಲಿ:** ಸಿನಿಮಾ ಬಿಡುಗಡೆಯಾದ ನಂತರ ಮೂರು ದಿನಗಳವರೆಗೂ ಆನ್‌ಲೈನ್ ವಿಮರ್ಶೆ ನಿಷೇಧ ಮಾಡಿ ಎಂಬ ತಮಿಳು ಚಲನಚಿತ್ರ ಕಾರ್ಯನಿರತ ನಿರ್ಮಾಪಕರ ಸಂಘ (ಟಿಎಫ್‌ಎಪಿಎ) ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯವು ಕೇಂದ್ರ, ರಾಜ್ಯ ಸರ್ಕಾರ ಹಾಗೂ ಯೂಟ್ಯೂಬ್‌ಗೆ ನೋಟಿಸ್ ಜಾರಿ ಮಾಡಿದೆ.

ಯೂಟ್ಯೂಬ್‌ಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸಿನಿಮಾ ವಿಮರ್ಶೆ ಮಾಡುವವರಿಗೆ ಮಾರ್ಗಸೂಚಿಗಳನ್ನು ರೂಪಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು. ಮೂರು ದಿನಗಳ ಕಾಲ ವಿಮರ್ಶೆಗೆ ನಿರ್ಬಂಧ ಹಾಕಬೇಕು ಎಂಬ ಟಿಎಫ್‌ಎಪಿಎ ಅರ್ಜಿಯನ್ನು ನ್ಯಾಯಮೂರ್ತಿ ಎಸ್ ಸೌಂದರ್ ಅವರಿದ್ದ ಪೀಠವು ವಿಚಾರಣೆ ನಡೆಸಿದೆ. ಮನವಿಗೆ ಸಂಬಂಧಿಸಿದಂತೆ ನೋಟಿಸ್ ಜಾರಿ ಮಾಡಿದೆ. ಆದರೆ, ಸಿನಿಮಾ ವಿಮರ್ಶೆಗಳು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿದ್ದು ಅದನ್ನು ನಿಷೇಧ ಮಾಡುವುದಕ್ಕೆ ಆಗುವುದಿಲ್ಲ ಎಂದು ಮೌಖಿಕವಾಗಿ ತಿಳಿಸಿದರು. ದ್ವೇಷ ಅಥವಾ ವ್ಯಾವಹಾರಿಕ ಪೈಪೋಟಿಯ ಕಾರಣಕ್ಕೆ ಸಿನಿಮಾವನ್ನು ನಕಾರಾತ್ಮಕವಾಗಿ ವಿಮರ್ಶಿಸಲಾಗುತ್ತಿದೆ. ಇದಕ್ಕಾಗಿ ಯೂಟ್ಯೂಬರ್ ಸೇರಿದಂತೆ ಇತರೆ ಆನ್‌ಲೈನ್ ಮಾಧ್ಯಮಗಳನ್ನು ಬಳಸಿಕೊಳ್ಳಲಾಗುತ್ತಿದೆ. ಈ ರೀತಿಯ ವಿಮರ್ಶೆ ಮಾಡುವುದರಿಂದ ಸಾರ್ವಜನಿಕರು ಅದನ್ನು ವೀಕ್ಷಿಸುವ ಅವಕಾಶ ಪಡೆಯುವ ಮೊದಲೇ ಅಭಿಪ್ರಾಯಗಳು ಬರುತ್ತಿವೆ ಎಂದು ಅರ್ಜಿಯಲ್ಲಿ ಟಿಎಫ್‌ಎಪಿಎ ಹೇಳಿತ್ತು.

**ನಿರ್ಮಾಪಕರಿಗೆ ಭಾರಿ ನಷ್ಟ:** ವಿಮರ್ಶಕರಿಗೆ ಸಿನಿಮಾವನ್ನು ವಿಮರ್ಶೆ ಮಾಡುವ ಎಲ್ಲಾ ಹಕ್ಕು ಇದ್ದರೂ ವೈಯಕ್ತಿಕ ದುರುದ್ದೇಶದಿಂದ ಮಾಧ್ಯಮಗಳಲ್ಲಿ ಚಿತ್ರದ ಬಗ್ಗೆ ದ್ವೇಷಭಾವನೆ ಬಿತ್ತುತ್ತಿದ್ದಾರೆ. ಇಂತಹ ಋಣಾತ್ಮಕ ವಿಮರ್ಶೆಗಳಿಂದಾಗಿ ಸಿನಿಮಾ ನಿರ್ಮಾಪಕರು ಭಾರಿ ನಷ್ಟ ಎದುರಿಸುತ್ತಿದ್ದಾರೆ ಈ ಬೆಳವಣಿಗೆಯನ್ನು ತಡೆಯುವ ಉದ್ದೇಶದಿಂದ ಅಗತ್ಯ ಕ್ರಮ ಕೈಗೊಳ್ಳ ಬೇಕು ಎಂದು ಟಿಎಫ್‌ಎಪಿಎ ಅರ್ಜಿಯಲ್ಲಿ ನ್ಯಾಯಾಲಯವನ್ನು ಕೋರಿತ್ತು.



**ಸಿನಿಮಾ ಬಿಡುಗಡೆಯಾಗಿ 3 ದಿನ ಆನ್‌ಲೈನ್ ವಿಮರ್ಶೆ ನಿಷೇಧಕ್ಕೆ ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿತ್ತು. ವಿಚಾರಣೆ ನಡೆಸಿದ ಕೋರ್ಟ್ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಯೂಟ್ಯೂಬ್‌ಗೆ ನೋಟಿಸ್ ಜಾರಿ ಮಾಡಿದೆ. ಜತೆಗೆ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವಾಗಿದ್ದು, ನಿಷೇಧ ಸಾಧ್ಯವಾಗದು ಎಂದು ಹೇಳಿದೆ.**

- **ಸಿನಿಮಾ ಬಿಡುಗಡೆಯಾದ ನಂತರ ಮೂರು ದಿನಗಳವರೆಗೂ ಆನ್‌ಲೈನ್ ವಿಮರ್ಶೆ ನಿಷೇಧಕ್ಕೆ ಹೈಕೋರ್ಟ್‌ಗೆ ಮನವಿ.**
- **ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿದ್ದು ನಿಷೇಧ ಮಾಡುವುದಕ್ಕೆ ಆಗುವುದಿಲ್ಲ ಎಂದು ಮೌಖಿಕವಾಗಿ ಹೇಳಿದ**

### ಶಬರಿಮಲೆ ಕಾಡುಹಾದಿ ಯಾತ್ರೆಗೆ ನಿರ್ಬಂಧ

**ಹವಾಮಾನ ವೈಪರೀತ್ಯದಿಂದಾಗಿ ಶಬರಿಮಲೆಯ ಸಾಂಪ್ರದಾಯಿಕ ಕಾಡು ಹಾದಿ ಮೂಲಕ ಯಾತ್ರೆ ಕೈಗೊಳ್ಳುವುದನ್ನು ಹೈಕೋರ್ಟ್ ತಾತ್ಕಾಲಿಕವಾಗಿ ನಿಷೇಧಿಸಿದೆ. ಮುಂದಿನ ಸೂಚನೆಯವರೆಗೆ ಕಾನನ ಹಾದಿಯಲ್ಲಿಯಾತ್ರೆ ನಡೆಸಬಾರದು ಎಂದು ಕೇರಳ ಹೈಕೋರ್ಟ್ ಆದೇಶ ನೀಡಿದೆ. ಇದನ್ನು ಖಾತ್ರಿಪಡಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಭಕ್ತರ ಸುರಕ್ಷತೆ ದೃಷ್ಟಿಯಿಂದ ವಂಡಿಪೆರಿಯಾರ್, ಸತ್ರಂ, ಪುಲ್ಮೇಡ್, ಎರುಮೇಲಿ ಮೂಲಕ ಯಾತ್ರೆ ನಿರ್ಬಂಧಿಸಲಾಗಿದೆ. ನಿರ್ಬಂಧಗಳ ಬಗ್ಗೆ ಭಕ್ತರಿಗೆ ತಿಳಿಸಬೇಕು. ಭಕ್ತರ ಸುರಕ್ಷತೆ ಖಾತ್ರಿಪಡಿಸಿ ಬದಲಿ ವ್ಯವಸ್ಥೆ ಮಾಡಬೇಕು ಎಂದು ಪತ್ತನಂತಿಟ್ಟ, ಕೊಟ್ಟಾಯಂ ಮತ್ತು ಇಡುಕ್ಕಿಯ ಜಿಲ್ಲಾಧಿಕಾರಿಗಳಿಗೆ ನ್ಯಾಯಾಲಯ ಸೂಚಿಸಿದೆ.**

## ಮಿನಿ ನ್ಯೂಸ್

### ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿಗೆ ಅಮೆರಿಕ ಖಂಡನೆ

**ವಾಷಿಂಗ್ಟನ್:** ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಹಿಂದೂಗಳ ಮೇಲಿನ ದಾಳಿ ಖಂಡಿಸಿ ,ಮಧ್ಯೆ ಧಾರ್ಮಿಕ ಮತ್ತು ಮೂಲಭೂತ ಮಾನವ ಹಕ್ಕುಗಳು ಸೇರಿದಂತೆ ಮೂಲಭೂತ ಸ್ವಾತಂತ್ರ್ಯಗಳನ್ನು ಗೌರವಿಸುವಂತೆ ಅಮೇರಿಕ ಕರೆ ನೀಡಿದೆ. ಅಲ್ಪಸಂಖ್ಯಾತರು, ವಿಶೇಷವಾಗಿ ಹಿಂದೂಗಳ ಮೇಲಿನ ದಾಳಿಗಳ ಬಗ್ಗೆ ಭಾರತ ಕಳವಳ ವ್ಯಕ್ತಪಡಿಸುತ್ತಿದೆ. ನಾವು ಸಂ ಬಂಧ ಹೊಂದಿರುವ ಪ್ರತಿಯೊಂದು ಸರ್ಕಾರದೊಂದಿಗೆ ನಾವು ಸ್ಥಿರವಾಗಿರುತ್ತೇವೆ. ಮೂಲಭೂತ ಸ್ವಾತಂತ್ರ್ಯಗಳನ್ನು ಗೌರವಿಸುವ ಅಗತ್ಯವಿದೆ ಎಂಬುದು ನಮಗೆ ಸ್ಪಷ್ಟವಾಗಿದೆ ಎಂದು ವಿದೇಶಾಂಗ ಇಲಾಖೆಯ ಉಪ ವಕ್ತಾರ ವೇದಾಂತ್ ಪಟೇಲ್ ತಿಳಿಸಿದರು.

ಬಾಂಗ್ಲಾದೇಶದ ಸರ್ಕಾರ ಕಾನೂನಿನ ನಿಯಮವನ್ನು ಗೌರವಿಸಬೇಕು, ಅದರ ಭಾಗವಾಗಿ ಅವರು ಮೂಲಭೂತ ಮಾನವ ಹಕ್ಕುಗಳನ್ನು ಗೌರವಿಸಬೇಕು ಎಂದು ಒತ್ತಾಯಿಸುತ್ತೇವೆ ಮತ್ತು ಅಲ್ಪಸಂಖ್ಯಾತರ ಹಿಂದೂಗಳ ರಕ್ಷಣೆಗೆ ಒತ್ತು ನೀಡುವುದನ್ನು ಮುಂದುವರಿಸುತ್ತೇವೆ ಎಂದು ಪಟೇಲ್ ಹೇಳಿದರು. ಧಾರ್ಮಿಕ ಸ್ವಾತಂತ್ರ್ಯ ಮತ್ತು ಮೂಲಭೂತ ಮಾನವ ಹಕ್ಕುಗಳಿಗೆ ಗೌರವದ ಅಗತ್ಯವಿದೆ. ಯಾವುದೇ ರೀತಿಯ ಪ್ರತಿಭಟನೆಗಳು ಶಾಂತಿಯುತವಾಗಿರಬೇಕು ಎಂದರು.

### ಬೆಚ್ಚಿಬೀಳಿಸಿದ ತ್ರಿವಳಿ ಕೊಲೆ

**ನವದೆಹಲಿ:** ಮುಂಜಾನೆ ಮನೆಗೆ ನುಗಿರುವ ದುಷ್ಕರ್ಮಿಗಳು ದಂಪತಿ, ಅವರ ಮಗಳನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿರುವ ಘಟನೆ ನೆಬ್ ಸರೈಪ್ರದೇಶದಲ್ಲಿ ನಡೆದಿದೆ. ಮೃತರನ್ನು ನಿವೃತ್ತ ಸೇನಾಧಿಕಾರಿ ರಾಜೇಶ್ ಕುಮಾರ್ (51), ಅವರ ಪತ್ನಿ ಕೋಮಲ್ (46) ಮತ್ತು ಅವರ ಪುತ್ರಿ ಕವಿತಾ (23) ಎಂದು ಗುರುತಿಸಲಾಗಿದೆ. ಪೊಲೀಸರ ಪ್ರಕಾರ, ದಂಪತಿಯ ಮಗ ಅರ್ಜುನ್ ಬೆಳಿಗ್ಗೆ 5:30 ರ ಸುಮಾರಿಗೆ ಬೆಳಿಗ್ಗೆ ವಾಕಿಂಗ್ ಮುಗಿಸಿ ಹಿಂತಿರುಗಿದಾಗ ತಂದೆ-ತಾಯಿಶವ ಪತ್ತೆಯಾಗಿ ಆತಂಕಗೊಂಡಿದ್ದಾರೆ ನಂತರ ನೆರೆಹೊರೆಯವನ್ನು ಸಹಾಯಕ್ಕೆ ಕೂಗಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ದಾವಿಸಿದ ಪೊಲೀಸರ ತಂಡ ಮತ್ತು ಫೋರೆನ್ಸಿಕ್ ತಂಡಗಳನ್ನು ಪರಿಶೀಲನೆ ನಡೆಸಿದ್ದಾರೆ. ಪ್ರಾಥಮಿಕ ದೃಷ್ಟಿಯಲ್ಲಿ, ಯಾವುದೇ ದರೋಡೆ ಅಥವಾ ಮನೆಯಿಂದ ಯಾವುದೇ ವಸ್ತುಗಳನ್ನು ಕಳ್ಳತನ ಮಾಡಿಲ್ಲ ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಘಟನೆಯ ಕುರಿತು ಅರ್ಜುನ್ನ ಮಾವ ಸತೀಶ್ಕುಮಾರ್ ಮಾತನಾಡಿ, ರಾಜೇಶ್ ನನ್ನ ಸೋದರ ಮಾವ, ಘಟನೆಯ ಕುರಿತು ನನ್ನ ಸೋದರಳಿಯ ನನಗೆ ಕರೆ ಬಂದಿತ್ತು. ರಾಜೇಶ್ ಸೇನೆಯಿಂದ ನಿವೃತ್ತಿ ಹೊಂದಿದ್ದು, ಅವರ ಮಗಳು ಕಾಲೇಜು ವಿದ್ಯಾರ್ಥಿನಿಯಾಗಿದ್ದಳು. ಹಣಕಾಸಿನ ವಿವಾದವೇ ದಾಳಿಗೆ ಸಂಭವನೀಯ ಉದ್ದೇಶವಾಗಿರಬಹುದು ಎಂದು ಕುಮಾರ್ ಶಂಕಿಸಿದ್ದಾರೆ. ದಿಯೋಲಿಯ ಎಎಪಿ ಶಾಸಕ ಪ್ರಕಾಶ್ ಜರ್ವಾಲ್ ಸಂತ್ರಸ್ತೆಯ ಮನೆಗೆ ಭೇಟಿ ನೀಡಿ ರಾಜೇಶ್ ಅವರ ಪುತ್ರನೊಂದಿಗೆ ಮಹಿತಿ ಪಡೆದು,ಇದೊಂದು ಅತ್ಯಂತ ದುರದೃಷ್ಟಕರ ಘಟನೆ ಎಂದಿದ್ದಾರೆ. ಯಾರೋ ಮನೆಗೆ ನುಗ್ಗಿ ಮನೆ ಯಜಮಾನ ಹಾಗಿ ಕುಟುಂಬದವರ ಕುತ್ತಿಗೆಗೆ ಚಾಕುವಿನಿಂದ ಇರಿದಿದ್ದಾರೆ ಎಂದು ಜರ್ವಾಲ್ ಹೇಳಿದರು.

### ಥಾಣೆ: ಅಕ್ರಮವಾಗಿ ತಂಗಿದ್ದ ಐವರು ಬಾಂಗ್ಲಾದೇಶಿ ಮಹಿಳೆಯರ ಬಂಧನ

**ಥಾಣೆ:** ಇಲ್ಲಿ ಅಕ್ರಮವಾಗಿ ತಂಗಿದ್ದ ಐವರು ಬಾಂಗ್ಲಾದೇಶಿ ಮಹಿಳೆಯರನ್ನು ಪೊಲೀಸರು ಬಂಧಿಸಿದ್ದಾರೆ . ಖಚಿತ ಸುಳಿವಿನ ಮೇರೆಗೆ ಅಪರಾಧ ವಿಭಾಗದ ಮಾನವ ಕಳ್ಳಸಾಗಣೆ ನಿಗ್ರಹ ದಳದ ಸಿಬ್ಬಂದಿ ಮೀರಾ ರಸ್ತೆ ಮತ್ತು ನಯಾನಗರ ಪ್ರದೇಶದ ಎರಡು ವಸತಿ ಆವರಣಗಳ ಮೇಲೆ ದಾಳಿ ನಡೆಸಿರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಲ್ಲಿ ಒಂದೆರಡು ಕೊಠಡಿಗಳಲ್ಲಿ ವಾಸಿಸುತ್ತಿರುವ ಮಹಿಳೆಯರೊಂದಿಗೆ ಸಂವಹನ ನಡೆಸಲು ಹಿಂದೇಟು ಹಾಕಿದರು ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಸಮೀರ್ ಅಹಿರಾರಾವ್ ಹೇಳಿದ್ದಾರೆ.

ಇಬ್ಬರು ಬಾಂಗ್ಲಾದೇಶಿ ಮಹಿಳೆಯರನ್ನು ಮೀರಾ ರೋಡ್‌ನಿಂದ, ಇತರ ಮೂವರನ್ನು ನಯಾನಗರದಿಂದ ಪೊಲೀಸರು ಬಂಧಿಸಿದ್ದಾರೆ ಎಂದು ಅವರು ಹೇಳಿದರು. ಮಹಿಳೆಯರು ಅಕ್ರಮವಾಗಿ ಭಾರತ ಪ್ರವೇಶಿಸಿ ಇಲ್ಲಿ ಉಳಿಯಲು ಯಾವುದೇ ದಾಖಲೆಗಳನ್ನು ಹೊಂದಿಲ್ಲ ಎಂದು ಅಧಿಕಾರಿ ತಿಳಿಸಿದ್ದಾರೆ.

### ಇಸ್ರೇಲ್-ಹಿಜ್ಬುಲ್ಲಾ ಕದನದಲ್ಲಿ ಮೃತಪಟ್ಟ ಲೆಬನಾನ್ ಜನ ಎಷ್ಟು?

**ಬೈರೂತ್:** ಇಸ್ರೇಲ್-ಲೆಬನಾನ್ ಸಂಘರ್ಷದಲ್ಲಿ ಹಿಜ್ಬುಲ್ಲಾ ಬಂಡು ಕೋರರು ಸೇರಿದಂತೆ 4,047 ಲೆಬನಾನ್ ಜನ ಮೃತಪಟ್ಟಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವ ಫೈರಾಸ್ ಅಭಿಯಾರ್ ಹೇಳಿದ್ದಾರೆ. ಪತ್ರಕರ್ತರೊಂದಿಗೆ ಈ ವಿಷಯ ಹಂಚಿಕೊಂಡ ಅವರು ನಮ್ಮ ಇಲಾಖೆಯಿಂದ ನಾವು ದಾಖಲಿಸಿರುವ ಸಾವಿನ ಸಂಖ್ಯೆ ಮಾತ್ರ ಇಷ್ಟು. ಆದರೆ, ಇಸ್ರೇಲ್ ದಾಳಿಯಿಂದ ನಮ್ಮ ದೇಶದಲ್ಲಿ ಇದಕ್ಕೂ ಹೆಚ್ಚಿನ ಜನ ಮೃತರಾಗಿರಬಹುದು ಎಂದು ಅಂದಾಜಿಸಿದ್ದಾರೆ. ಕದನದಲ್ಲಿ ಇದುವರೆಗೆ ಹಿಜ್ಬುಲ್ಲಾ ಬಂಡುಕೋರರು ಸೇರಿದಂತೆ 16,668 ಜನ ಗಾಯಗೊಂಡಿದ್ದಾರೆ. ಇದರಲ್ಲಿ ಸುಮಾರು ಐದು ಸಾವಿರ ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. ಹಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿಸಿದ್ದಾರೆ.

### ಹಸೀನಾ ಎಲ್ಲವನ್ನೂ ಸರ್ವನಾಶ ಮಾಡಿದರು: ಸಲಹೆಗಾರ ಯೂನುಸ್

**ಢಾಕಾ:** ಮಾಜಿ ಪ್ರಧಾನಿ ಶೇಖ್ ಹಸೀನಾ ಎಲ್ಲವನ್ನೂ ಸರ್ವನಾಶ ಮಾಡಿದ್ದಾರೆ ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಸಲಹೆಗಾರರಾಗಿರುವ ಮೊಹಮ್ಮದ್ ಯೂನುಸ್ ಹೇಳಿದ್ದಾರೆ. ಸಾಂವಿಧಾನಿಕ ಹಾಗೂ ನ್ಯಾಯಾಂಗ ಸುಧಾರಣೆ ಆದ ಬಳಿಕವಷ್ಟೇ ದೇಶದಲ್ಲಿ ಚುನಾವಣೆ ನಡೆಸಲಾಗುವುದು ಎಂದು ಯೂನುಸ್ ಅವರು ಜಪಾನ್‌ನ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನವನ್ನು ಉಲ್ಲೇಖಿಸಿ ಬಾಂಗ್ಲಾದೇಶ್ ಸಂಗ್‌ಬದ್ ಸಂಗ್‌ಸ್ಥಾ ವರದಿ ಮಾಡಿದೆ. ಚುನಾವಣೆಗೂ ಮುನ್ನ ಆರ್ಥಿಕತೆ, ಆಡಳಿತ, ಅಧಿಕಾರಿ ವರ್ಗ, ನ್ಯಾಯಾಂಗದಲ್ಲಿ ಆಮೂಲಾಗ್ರ ಬದಲಾವಣೆ ಬೇಕಿದೆ ಎಂದು ಅವರು ಹೇಳಿದ್ದಾರೆ.

ಬಾಂಗ್ಲಾದೇಶದ ಅಂತರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿಯಲ್ಲಿ ಹಸೀನಾ ಅವರ ವಿಚಾರಣೆ ಮುಗಿದ ನಂತರ, ಅವರನ್ನು ಭಾರತ ಹಸ್ತಾಂತರಿಸಬೇಕು ಎಂದು ಯೂನುಸ್ ಪುನರುಚ್ಚರಿಸಿದ್ದಾರೆ. ವಿಚಾರಣೆ ಮುಕ್ತಾಯಗೊಂಡು, ತೀರ್ಪು ಪ್ರಕಟವಾದರೆ ಭಾರತದೊಂದಿಗೆ ನಾವು ಮತ್ತೆ ಮನವಿ ಮಾಡುತ್ತೇವೆ. ಉಭಯ ರಾಷ್ಟ್ರಗಳು ಅಂತರರಾಷ್ಟ್ರೀಯ ಕಾನೂನಿಗೆ ಸಹಿ ಹಾಕಿವೆ ಎಂದು ಹೇಳಿದ್ದಾರೆ. ಇಲ್ಲಿನ ಹಿಂದೂಗಳ ಬಗ್ಗೆ ಭಾರತದ ಕಾಳಜಿಯು ವಾಸ್ತವಾಧಾರಿತವಾಗಿಲ್ಲ. ಸುಳ್ಳು ಪ್ರಚಾರ ಆಧಾರಿತವಾಗಿದೆ' ಎಂದಿದ್ದಾರೆ.

# ಅಲ್ಲು ಅರ್ಜುನ್ ಕರ್ನಾಟಕಕ್ಕೆ ಏಕೆ ಬರಲಿಲ್ಲ





'ಪುಷ್ಪ 2' ಸಿನಿಮಾದ ಪ್ರಚಾರವನ್ನು ಬಿಹಾರದ ಪಾಟ್ನಾ, ಚೆನ್ನೈ, ಮುಂಬೈ, ಕೇರಳದ ಕೊಚ್ಚಿ, ಹೈದರಾಬಾದ್‌ಗಳಲ್ಲಿ ಅದ್ದೂರಿಯಾಗಿ ಮಾಡಲಾಯ್ತು.

ಆದರೆ ಅಲ್ಲು ಅರ್ಜುನ್ ಬೆಂಗಳೂರಿಗೆ ಮಾತ್ರ ಬರಲಿಲ್ಲ. ಅದಕ್ಕೆ ಕಾರಣ ಏನೆಂದು ವಿತರಕ ಲಕ್ಷ್ಮಿಕಾಂತ್ ವಿವರಿಸಿದ್ದಾರೆ. 'ಪುಷ್ಪ 2' ಇಂದು (ಡಿಸೆಂಬರ್ 05) ಬಿಡುಗಡೆ ಆಗುತ್ತಿದೆ. ಬೆಂಗಳೂರು ಸೇರಿದಂತೆ ಹಲವು ಕಡೆ ನಿನ್ನೆ (ಡಿಸೆಂಬರ್ 04) ರ ರಾತ್ರಿಯೇ ಮೊದಲ ಶೋ ಪ್ರದರ್ಶನಗೊಳ್ಳಲಿದೆ. ಸಿನಿಮಾದ ಪ್ರಚಾರವನ್ನು ಚಿತ್ರತಂಡ ಬಲು ಜೋರಾಗಿ ಮಾಡಿದೆ. ಬಿಹಾರದ ಪಟ್ನಾನಲ್ಲಿ ಬಲು ಜೋರಾಗಿ ಪ್ರೀ ರಿಲೀಸ್ ಇವೆಂಟ್ ಮಾಡಿದ್ದರು. ಆ ನಂತರ ಚೆನ್ನೈ, ಕೇರಳದ ಕೊಚ್ಚಿ, ಮುಂಬೈ ಕೊನೆಗೆ ಹೈದರಾಬಾದ್‌ನಲ್ಲಿಯೂ ಭಾರಿ ದೊಡ್ಡ ಪ್ರಚಾರದ ಇವೆಂಟ್‌ಗಳನ್ನು ಚಿತ್ರತಂಡ ಮಾಡಿತ್ತು. ಮೊದಲು ಇವೆಂಟ್ ಘೋಷಣೆಯಾದಾಗ ಬೆಂಗಳೂರಿನಲ್ಲಿಯೂ ಕಾರ್ಯಕ್ರಮ ಮಾಡುವುದಾಗಿ ಹೇಳಲಾಗಿತ್ತು.

ಆದರೆ ಬೆಂಗಳೂರಿಗೆ ಬರಲೇ ಇಲ್ಲ ಅಲ್ಲು ಅರ್ಜುನ್. 'ಪುಷ್ಪ 2' ಚಿತ್ರತಂಡ ಬೆಂಗಳೂರಿಗೆ ಬರದೇ ಇರುವುದು ಇಲ್ಲಿನ ಅಲ್ಲು ಅರ್ಜುನ್ ಅಭಿಮಾನಿಗಳ ಬೇಸರಕ್ಕೆ ಕಾರಣವಾಗಿತ್ತು. ಉದ್ದೇಶಪೂರ್ವಕವಾಗಿ ಅಲ್ಲು ಅರ್ಜುನ್ ಹಾಗೂ ರಶ್ಮಿಕಾ ಬೆಂಗಳೂರಿಗೆ ಬಂದಿಲ್ಲ ಎಂಬ ಆರೋಪಗಳೂ ಸಹ ಕೇಳಿ ಬಂದಿತ್ತು. 'ಪುಷ್ಪ 2' ಸಿನಿಮಾದ ಕರ್ನಾಟಕ ವಿತರಣೆ ಹಕ್ಕು ಖರೀದಿ ಮಾಡಿರುವ ವಿತರಕ ಲಕ್ಷ್ಮಿಕಾಂತ್ ಮಾತನಾಡಿದ್ದು, ಅಲ್ಲು ಅರ್ಜುನ್ ಕರ್ನಾಟಕಕ್ಕೆ ಏಕೆ ಬರಲಿಲ್ಲ ಎಂದು ವಿವರಣೆ ನೀಡಿದ್ದಾರೆ. ಅಲ್ಲು ಅರ್ಜುನ್ ಬೆಂಗಳೂರಿಗೆ ಬರುವ ಯೋಜನೆ ಇತ್ತಂತೆ ಆದರೆ ಇಲ್ಲಿ ವಿಪರೀತ ಮಳೆ ಇದ್ದ ಕಾರಣ ಅವರು ಬರಲಿಲ್ಲವಂತೆ. ಆದರೆ 'ಪುಷ್ಪ 2' ಸಿನಿಮಾದ ಸಕ್ಸಸ್ ಮೀಟ್ ಬೆಂಗಳೂರಿನಲ್ಲಿಯೇ ಆಯೋಜಿಸಿ ಆ ಕಾರ್ಯಕ್ರಮಕ್ಕೆ ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ, ಸುಕುಮಾರ್ ಚಿತ್ರತಂಡದ ಇತರೆ ಸದಸ್ಯರು ಬರುವಂತೆ ಮಾಡುವುದಾಗಿ ಲಕ್ಷ್ಮಿಕಾಂತ್ ಹೇಳಿದ್ದಾರೆ.

# ಶಿವಾಜಿ ಮಹಾರಾಜ್ ಬಯೋಪಿಕ್‌ನಲ್ಲಿ ರಿಷಬ್ ಶೆಟ್ಟಿ



ಡಿವೈನ್ ಸ್ಟಾರ್ ರಿಷಬ್ ಶೆಟ್ಟಿ ಅವರು ಛತ್ರಪತಿ ಶಿವಾಜಿ ಮಹಾರಾಜ್ ಬಯೋಪಿಕ್‌ನಲ್ಲಿ ನಟಿಸೋದಾಗಿ ಅನೌನ್ಸ್ ಮಾಡಿದ ಬೆನ್ನಲ್ಲೇ ತೀವ್ರ ಪರ ಮತ್ತು ವಿರೋಧದ ಚರ್ಚೆ ನಡೆಯುತ್ತಿದೆ. ಕರ್ನಾಟಕದ ಪಾಲಿಗೆ ಶಿವಾಜಿ ದಾಳಿಕೋರ, ಕರ್ನಾಟಕಕ್ಕೆ ಶಿವಾಜಿ ಕೊಡುಗೆ ಏನು ಅಂತ ಪ್ರಶ್ನಿಸಿ ಫ್ಯಾನ್ಸ್ ರಿಷಬ್ ಶೆಟ್ಟಿಗೆ ಟ್ಯಾಗ್ ಮಾಡಿದ್ದಾರೆ. ಭಾರತದ ಮಹಾನ್ ಯೋಧ, ರಾಜ ಶಿವಾಜಿಯ ಜೀವನಚರಿತ್ರೆಯನ್ನು ತೆರೆಗೆ ತರುತ್ತಿರುವುದು ನಮ್ಮ ಗೌರವ ಹಾಗೂ ಹೆಮ್ಮೆ. ಇದು ಬರೀ ಸಿನಿಮಾ ಅಲ್ಲ, ದುಷ್ಟರ ವಿರುದ್ಧ ಹೋರಾಡಿ ಮೊಘಲ್ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿದ ವೀರ ಯೋಧನ ಕಥೆ. ತೆರೆಮೇಲೆ ಅದ್ಭುತ ಆಕ್ಷನ್ ಡ್ರಾಮಾ ನೋಡಲು ಸಿದ್ಧರಾಗಿ ಎಂದು ರಿಷಬ್ ಸಿನಿಮಾ ಪೋಸ್ಟರ್ ಹಂಚಿಕೊಂಡ ಬೆನ್ನಲ್ಲೇ ಕೆಲ ಕನ್ನಡಿಗರಿಂದ ಅಸಮಾಧಾನ ವ್ಯಕ್ತವಾಗಿದೆ. ರಿಷಬ್ ಶೆಟ್ಟಿ ಅವರೇ, ನಮ್ಮ ಕುಂದಾಪುರದ ಬಸ್ರೂರು ಒಂದು ಕಾಲದಲ್ಲಿ ಪ್ರಮುಖ ಒಳನಾಡ ಬಂದರಾಗಿತ್ತು ಎಂಬುದು ನಮ್ಮೆಲ್ಲರಿಗೂ ತಿಳಿದಿದೆ. ನಮ್ಮ ಬಸ್ರೂರರನ್ನು, ಕುಮಟಾ ವನ್ನು ಶಿವಾಜಿ ಮತ್ತು ಆತನ ಸೇನೆ ಲೂಟಿ ಮಾಡಿತ್ತು, ಅಪಾರವಾದ ಹತ್ಯೆ ಕೂಡ ಮಾಡಿತ್ತು ಎಂದು ಇತಿಹಾಸದ ದಾಖಲೆಗಳು ಹೇಳುತ್ತವೆ. ಅದೂ ಕೂಡ ಮಹಾ ಶಿವರಾತ್ರಿಯ ದಿನ. ನಮ್ಮೂರಿನ ಭೂತ, ಕೋಲವನ್ನು ಜಗತ್ಪ್ರಸಿದ್ಧ ಮಾಡಿದವರು ನೀವು. ನಮ್ಮ ಹಿರಿಯರನ್ನು ದಂಡಿಸಿ, ಲೂಟಿ ಮಾಡಿದವರನ್ನು ನೀವು ವಿಜೃಂಭಿಸುವುದು ಸರಿಯೇ ಹೇಳಲು ಹತ್ತಾರು ಕತೆಗಳಿವೆ. ಕನ್ನಡ ನಾಡಿನ ರಾಜರದ್ದೇ ಕತೆಗಳು ನೂರಾರು ಇವೆ. ಒಮ್ಮೆ ಯೋಚಿಸಿ ಎಂದು ಅಭಿಮಾನಿಯೊಬ್ಬ ಎಕ್ಸ್‌ನಲ್ಲಿ ರಿಷಬ್‌ಗೆ ಪ್ರಶ್ನಿಸಿದ್ದಾರೆ. ಶಿವಾಜಿ ಮಹಾರಾಜ್ ಕುರಿತ ಈ ಸಿನಿಮಾವನ್ನು ಕೈಬಿಡಿ ಎಂದು ರಿಷಬ್‌ಗೆ ಅನೇಕರು ಮನವಿ ಮಾಡಿದ್ದಾರೆ.

# ನಾಗಚೈತನ್ಯ, ಶೋಭಿತಾ ಮದುವೆಗೆ ಯಾರೆಲ್ಲಾ ಬರಲಿದ್ದಾರೆ

ಟಾಲಿವುಡ್ ನಟ ನಾಗಚೈತನ್ಯ ಮತ್ತು ಶೋಭಿತಾ ಅವರು ಇಂದು (ಡಿ.4) ಹೈದರಾಬಾದ್‌ನಲ್ಲಿ ಅದ್ದೂರಿಯಾಗಿ ಮದುವೆಯಾಗುತ್ತಿದ್ದಾರೆ. ಸಮಂತಾ ಮಾಜಿ ಪತಿ ನಾಗಚೈತನ್ಯ ಮದುವೆಗೆ ಯಾರೆಲ್ಲಾ ಬರಲಿದ್ದಾರೆ ಎಂಬ ಅತಿಥಿಗಳ ಲಿಸ್ಟ್ ರಿವೀಲ್ ಆಗಿದೆ. ನಾಗಚೈತನ್ಯ ಮದುವೆಗೆ ರಾಮ್ ಚರಣ್ ದಂಪತಿ, ಮಹೇಶ್ ಬಾಬು ದಂಪತಿ, ರಾಜಮೌಳಿ, ನಯನತಾರಾ, ಪ್ರಭಾಸ್, ಅಲ್ಲು ಅರ್ಜುನ್, ಸುಕುಮಾರ್ ಸೇರಿದಂತೆ ಅನೇಕರು ಭಾಗಿಯಾಗಲಿದ್ದಾರೆ. ಒಟ್ಟು 300 ಸ್ಟಾರ್ ಸೆಲೆಬ್ರಿಟಿಗಳಿಗೆ ಆಹ್ವಾನ ನೀಡಲಾಗಿದೆಯಂತೆ. ನಾಗಾರ್ಜುನ ಅಕ್ಕಿನೇನಿ ಒಡೆತನದ ಅನ್ನಪೂರ್ಣ ಸ್ಟುಡಿಯೋದಲ್ಲಿ ಇಂದು (ಡಿ.4) ಮದುವೆ ನಡೆಯಲಿದೆ. ರಾತ್ರಿ 8:15 ವೇಳೆ ಮದುವೆ ಮುಹೂರ್ತ ಕಾರ್ಯಕ್ರಮ ಜರುಗಲಿದೆ. ಈಗಾಗಲೇ ವಿವಾಹ ಪೂರ್ವ ಕಾರ್ಯಗಳು ಕೂಡ ಸಂಭ್ರಮದಿಂದ ನೆರವೇರಿದೆ. ಅಂದಹಾಗೆ, ಸಮಂತಾ ಜೊತೆ 2017ರಲ್ಲಿ ನಾಗಚೈತನ್ಯ ಮದುವೆಯಾಗಿದ್ದರು. ಕೆಲ ಮನಸ್ತಾಪಗಳಿಂದ ಇಬ್ಬರೂ ಡಿವೋರ್ಸ್ ಪಡೆದುಕೊಳ್ಳುವುದಾಗಿ 2021ರಲ್ಲಿ ಅನೌನ್ಸ್ ಮಾಡಿದರು. ಈಗ ಶೋಭಿತಾ ಜೊತೆ ನಟ 2ನೇ ಮದುವೆಗೆ ರೆಡಿಯಾಗಿದ್ದಾರೆ.

# ರಕ್ತ ಕಾಶ್ಮೀರದ ಕಥೆ ಹೇಳಲು ಸಜ್ಜಾದ ರಮ್ಯಾ



ಮೋಹಕ ತಾರೆ ಫ್ಯಾನ್ಸ್‌ಗೆ ಗುಡ್ ನ್ಯೂಸ್

ಮೋಹಕ ತಾರೆ ರಮ್ಯಾ ಫ್ಯಾನ್ಸ್‌ಗೆ ಸಿಹಿಸುದ್ದಿ ಸಿಕ್ಕಿದೆ. ರಿಯಲ್ ಸ್ಟಾರ್ ಉಪೇಂದ್ರ ಜೊತೆ 'ರಕ್ತ ಕಾಶ್ಮೀರ'ದ ಕಥೆ ಹೇಳಲು ರಮ್ಯಾ ಸಜ್ಜಾಗಿದ್ದಾರೆ. ಪ್ರೊಡಕ್ಷನ್ ಲಾಂಛನದಲ್ಲಿ ನಿರ್ಮಾಣವಾಗಿರುವ, ಹಿರಿಯ ನಿರ್ದೇಶಕ ಎಸ್. ವಿ ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ಹಾಗೂ ರಿಯಲ್ ಸ್ಟಾರ್ ಉಪೇಂದ್ರ, ಹಾಗೂ ರಮ್ಯಾ ಮುಖ್ಯಪಾತ್ರದಲ್ಲಿ ನಟಿಸಿರುವ 'ರಕ್ತ ಕಾಶ್ಮೀರ' ಚಿತ್ರ ತೆರೆಗೆ ಬರಲು ಅಣಿಯಾಗಿದೆ. ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ. ಪಾಕ್ ಆಕ್ರಮಿತ ಕಾಶ್ಮೀರವನ್ನು ವಾಪಸ್ ಪಡೆಯುವ ಪ್ರಧಾನಿ ಮೋದಿ ಅವರ ಹೇಳಿಕೆಯನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಇದೇ ಚಿತ್ರದ ಪ್ರಮುಖ ಕಥಾಹಂದರವಾಗಿದೆ. ಗಡಿ ಪ್ರದೇಶ ಅಷ್ಟೇ ಅಲ್ಲ. ಬೆಂಗಳೂರಿನಲ್ಲೂ ಉಗ್ರಗಾಮಿಗಳ ಕಾಟವಿದೆ. ಅದರ ನಿರ್ಮೂಲನೆಗೆ ಸಂಬಂಧಿಸಿದ ಕಥಾವಸ್ತುವನ್ನೂ ಈ ಚಿತ್ರ ಹೊಂದಿದೆ. ಎಸ್. ವಿ ರಾಜೇಂದ್ರಸಿಂಗ್ ಬಾಬು ಅವರೆ 'ರಕ್ತ ಕಾಶ್ಮೀರ' ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದು, ಸಂಭಾಷಣೆ ಎಂ.ಎಸ್ ರಮೇಶ್ ಅವರದು. ಗುರುಕಿರಣ್ ಸಂಗೀತ ನಿರ್ದೇಶನದ ಈ ಚಿತ್ರದಲ್ಲಿ ಉಪೇಂದ್ರ, ರಮ್ಯಾ, ದೊಡ್ಡಣ್ಣ, ಓಂಪ್ರಕಾಶ್ ರಾವ್, ತೆಲುಗು ನಟಿ ಅನಿಲ, ಕುರಿ ಪ್ರತಾಪ್ ಮುಂತಾದವರಿದ್ದಾರೆ.

# ನಾನಿ ಸಿನಿಮಾಗೆ ಮೆಗಾಸ್ಟಾರ್ ಗ್ರೀನ್ ಸಿಗ್ನಲ್



ನ್ಯಾಚುರಲ್ ನಾನಿ ನಿರ್ಮಾಣಕ್ಕೆ ಕೈ ಹಾಕಿದ್ದಾರೆ. ಮೆಗಾಸ್ಟಾರ್ ಚಿರಂಜೀವಿ ನಟನೆಯ ಡೈರೆಕ್ಟರ್ ಶ್ರೀಕಾಂತ್ ಒಡೆಲ ನಿರ್ದೇಶನದ ಸಿನಿಮಾಗೆ ನಾನಿ ಸಾಥ್ ನೀಡುತ್ತಿದ್ದಾರೆ. ಇದೀಗ ಚಿತ್ರತಂಡ ಚಿರಂಜೀವಿ ಜೊತೆಗಿನ ಹೊಸ ಸಿನಿಮಾ ಅನೌನ್ಸ್ ಮಾಡಿದೆ.

ಮೆಗಾಸ್ಟಾರ್ ಚಿರಂಜೀವಿ ಮತ್ತು ನಿರ್ದೇಶಕ ಶ್ರೀಕಾಂತ್ ಒಡೆಲ ಇಬ್ಬರೂ ಕೈಯನ್ನು ರಕ್ತದಲ್ಲಿ ಅದ್ದಿ ಪರಸ್ಪರ ಕೈ ಹಿಡಿದುಕೊಂಡು ಚಿತ್ರವನ್ನು ಹಂಚಿಕೊಂಡಿದ್ದಾರೆ. 'ಇದು ರಕ್ತದಲ್ಲಿ ಮಾಡಿದ ಪ್ರತಿಜ್ಞೆ' ಎಂಬ ಅಡಿಬರಹ ಕೊಟ್ಟಿದ್ದಾರೆ. ಪೋಸ್ಟರ್‌ನಲ್ಲಿ 'ಇವನಿಗೆ ಶಾಂತಿ ಸಿಗುವುದು ಹಿಂಸೆಯಲ್ಲೇ' ಎಂಬ ಸಾಲು ಬರೆಯಲಾಗಿದೆ.

ರಕ್ತದ ಮೆತ್ತಿದ ಕೈನ ಚಿತ್ರ ಪೋಸ್ಟರ್‌ನಲ್ಲಿದೆ. ಇನ್ನೂ ಚಿರಂಜೀವಿ ಎಂದೂ ನಟಿಸಿರದ ಪವರ್ ರೋಲ್‌ನಲ್ಲಿ ಕಾಣಿಸಿಕೊಳ್ಳಿದ್ದಾರೆ. ನಾನಿ ನಿರ್ಮಾಣ ಮಾಡುವುದರ ಜೊತೆಗೆ ಸಣ್ಣ ಪಾತ್ರದಲ್ಲಿ ಕಾಣಿಸಿಕೊಳ್ಳಿದ್ದಾರೆ. ಪಕ್ಕಾ ವಯಲೆನ್ಸ್ ಕತೆಯನ್ನು ಹೇಳೋಕೆ ಮುಂದಾಗಿದ್ದಾರೆ. ಈ ಸುದ್ದಿ ಕೇಳಿ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ.

# 'ನಮ್ಮ ತಂಡ ಹೋಗಲ್ಲ, ಆದರೆ ಪಾಕ್ ತಂಡ ಭಾರತಕ್ಕೆ ಬರಲೇಬೇಕು'

ಪಾಕಿಸ್ತಾನ ಕ್ರಿಕೆಟ್ ಮಂಡಳಿ ಐಸಿಸಿ ಪಂದ್ಯಾವಳಿಗಳನ್ನು ಹೈಬ್ರಿಡ್ ಮಾದರಿಯಲ್ಲಿ ಆಯೋಜಿಸುವ ಷರತ್ತನ್ನು ಐಸಿಸಿ ಮುಂದಿಟ್ಟಿದೆ. ಆದರೆ, ಬಿಸಿಸಿಐ ಈ ಷರತ್ತನ್ನು ತಿರಸ್ಕರಿಸಿದ್ದು, ಭದ್ರತಾ ಕಾರಣಗಳಿಗಾಗಿ ಭಾರತೀಯ ತಂಡ ಪಾಕಿಸ್ತಾನಕ್ಕೆ ಹೋಗುತ್ತಿಲ್ಲ. ಆದರೆ ಪಾಕಿಸ್ತಾನ ತಂಡ ಭಾರತಕ್ಕೆ ಬರದಿರಲು ಯಾವುದೇ ಕಾರಣಗಳಿಲ್ಲ ಎಂದು ಬಿಸಿಸಿಐ ಐಸಿಸಿಗೆ ತಿಳಿಸಿದೆ. ಚಾಂಪಿಯನ್ಸ್ ಟ್ರೋಫಿ ಆತಿಥ್ಯಕ್ಕೆ ಸಂಬಂಧಿಸಿದಂತೆ ಎದ್ದಿರುವ ವಿವಾದ ಶಮನಗೊಳ್ಳುವುದಕ್ಕೂ ಮುನ್ನಬೇ ಬಿಸಿಸಿಐ ಮತ್ತೊಮ್ಮೆ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಆಘಾತ ನೀಡಿದೆ. ಐಸಿಸಿ ಪಂದ್ಯಾವಳಿಗಳನ್ನು ಹೈಬ್ರಿಡ್ ಮಾದರಿಯಲ್ಲಿ ಆಯೋಜಿಸಬೇಕು ಎಂಬ ಷರತ್ತು ವಿಧಿಸಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಬಿಸಿಸಿಐ ಖಡಕ್ ಉತ್ತರ ನೀಡಿದೆ. ನಾವು ಟೀಂ ಇಂಡಿಯಾವನ್ನು ಪಾಕಿಸ್ತಾನಕ್ಕೆ ಕಳುಹಿಸದಿರಲು ಕಾರಣವಿದೆ. ಆದರೆ ಪಾಕಿಸ್ತಾನ ತಂಡವನ್ನು ಭಾರತಕ್ಕೆ ಕಳುಹಿಸದಿರಲು ಯಾವುದೇ ಕಾರಣಗಳಿಲ್ಲ. ಹೀಗಾಗಿ ಹೈಬ್ರಿಡ್ ಮಾದರಿಗೆ ನಾವು ಒಪ್ಪುವ ಮಾತೇ ಇಲ್ಲ ಎಂದು ಬಿಸಿಸಿಐ, ಐಸಿಸಿಗೆ ತಿಳಿಸಿದೆ ಎಂದು ವರದಿಯಾಗಿದೆ.



ಐಸಿಸಿಗೆ ಬಿಸಿಸಿಐ ಸ್ಪಷ್ಟನೆ

**ಪಿಸಿಬಿಯ ಷರತ್ತೇನು**

ವಾಸ್ತವವಾಗಿ ಮುಂದಿನ ವರ್ಷ ಫೆಬ್ರುವರಿ-ಮಾರ್ಚ್‌ನಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಯನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಲು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಒಪ್ಪಿಗೆ ಸೂಚಿಸಿದೆ ಎಂದು ವರದಿಯಾಗಿದೆ. ಆದರೆ ಈ ಒಪ್ಪಿಗೆಯ ಜೊತೆಗೆ ಪಿಸಿಬಿ ಐಸಿಸಿ ಮುಂದೆ ಪ್ರಮುಖ ಷರತ್ತುಗಳನ್ನಿಟ್ಟಿತ್ತು. ಆ ಪ್ರಕಾರ, ಮುಂದಿನ 7 ವರ್ಷಗಳಲ್ಲಿ ನಡೆಯಲ್ಲಿರುವ ಐಸಿಸಿ ಟೂರ್ನಿಗಳನ್ನು ಹೈಬ್ರಿಡ್ ಮಾದರಿಯಲ್ಲೇ ನಡೆಸಬೇಕು ಎಂಬುದು ಪಿಸಿಬಿಯ ಪ್ರಮುಖ ಷರತ್ತಾಗಿತ್ತು. ಪಿಸಿಬಿಯ ಈ ಷರತ್ತಿನ ಬಗ್ಗೆ ಐಸಿಸಿ ಇದುವರೆಗೆ ಯಾವುದೇ ಉತ್ತರ ನೀಡಿಲ್ಲ. ಆದರೆ ಐಸಿಸಿಗೂ ಮುನ್ನ ಈ ಬಗ್ಗೆ ಮೌನ ಮುರಿದಿರುವ ಬಿಸಿಸಿಐ, ಪಿಸಿಬಿಯ ಈ ಷರತ್ತನ್ನು ಒಪ್ಪಿಕೊಳ್ಳಲು ಸಾಧ್ಯವೆ ಇಲ್ಲ ಎಂದಿದೆ ಎಂದು ವರದಿಯಾಗಿದೆ.

**ಬಿಸಿಸಿಗೆ ತಿರುಗೇಟು ನೀಡುವ ಹುನ್ನಾರ**

ಬಿಸಿಸಿಐ ಈ ರೀತಿಯ ನಿಲುವು ತಾಳಲು ಕಾರಣವೂ ಇದೆ. ಅದೇನೆಂದರೆ ಮುಂದಿನ 7 ವರ್ಷಗಳಲ್ಲಿ ಅಂದರೆ 2031ರ ವರೆಗೆ ಪ್ರತಿ ವರ್ಷ ಪ್ರಮುಖ ಟೂರ್ನಿ ಆಯೋಜಿಸಲು ಐಸಿಸಿ ನಿರ್ಧರಿಸಿದೆ. ಇದರ ಅಡಿಯಲ್ಲಿ 2026 ರಲ್ಲಿ ಭಾರತ ಮತ್ತು ಶ್ರೀಲಂಕಾದ ಆತಿಥ್ಯದಲ್ಲಿ ಟಿ20 ವಿಶ್ವಕಪ್ ನಡೆಯಲಿದೆ. 2029ರಲ್ಲಿ ಭಾರತದಲ್ಲಿ ಚಾಂಪಿಯನ್ಸ್ ಟ್ರೋಫಿ ನಡೆಯಲಿದೆ. ಇದರ ನಂತರ ಭಾರತ ಮತ್ತು ಬಾಂಗ್ಲಾದೇಶ 2031 ರಲ್ಲಿ ನಡೆಯುವ ಏಕದಿನ ವಿಶ್ವಕಪ್‌ಗೆ ಆತಿಥ್ಯ ನೀಡಲಿವೆ. ಇದರ ಜೊತೆಗೆ ಮುಂದಿನ ವರ್ಷ ಮಹಿಳೆಯರ ಏಕದಿನ ವಿಶ್ವಕಪ್ ಕೂಡ ಭಾರತದಲ್ಲಿ ನಡೆಯಲ್ಲಿದೆ. ಹೀಗಾಗಿ ಮುಂದಿನ 7 ವರ್ಷಗಳಲ್ಲಿ ನಡೆಯಲ್ಲಿರುವ ಐಸಿಸಿ ಟೂರ್ನಿಗಳಿಗೆ ಭಾರತದ ಆತಿಥ್ಯವೇ ಬಹುಪಾಲಿದೆ. ಆದ್ದರಿಂದಲೇ ಈ ಹೈಬ್ರಿಡ್ ಮಾದರಿಯನ್ನು ಮುಂದಿನ 7 ವರ್ಷಗಳ ಕಾಲ ಎಲ್ಲಾ ಐಸಿಸಿ ಈವೆಂಟ್‌ಗಳಲ್ಲಿ ಅಳವಡಿಸಬೇಕು ಎಂಬ ಷರತನ್ನು ಪಾಕಿಸ್ತಾನ ಮುಂದಿಟ್ಟಿತ್ತು.

**ಬಿಸಿಸಿಐ ಖಡಕ್ ರಿಪ್ಲೈ**

ಇದೀಗ ಪಿಸಿಬಿ ಹೈಬ್ರಿಡ್ ಷರತ್ತಿಗೆ ಶಾಕ್ ನೀಡಿರುವ ಬಿಸಿಸಿಐ, ಟೀಂ ಇಂಡಿಯಾವನ್ನು ಪಾಕಿಸ್ತಾನಕ್ಕೆ ಕಳುಹಿಸದಿರಲು ಪ್ರಮುಖ ಕಾರಣ ಭದ್ರತೆಯ ಕೊರತೆ. 2008ರ ಮುಂಬೈ ದಾಳಿಯ ನಂತರ ಟೀಂ ಇಂಡಿಯಾ ಪಾಕಿಸ್ತಾನಕ್ಕೆ ಹೋಗಿಲ್ಲ. ಆದರೆ ಮುಂದಿನ ವರ್ಷ ನಡೆಯಲಿರುವ ಮಹಿಳಾ ಏಕದಿನ ವಿಶ್ವಕಪ್ ಮತ್ತು 2026 ರಲ್ಲಿ ನಡೆಯಲಿರುವ ಪುರುಷರ ಟಿ20 ವಿಶ್ವಕಪ್‌ಗಾಗಿ ಪಾಕಿಸ್ತಾನ ಭಾರತಕ್ಕೆ ಬರಬೇಕಾಗುತ್ತದೆ. ಏಕೆಂದರೆ ಪಾಕಿಸ್ತಾನಿ ಆಟಗಾರರು ಭಾರತದ ನೆಲದಲ್ಲಿ ಸುರಕ್ಷಿತವಾಗಿರುತ್ತಾರೆ. 2023 ರ ವಿಶ್ವಕಪ್‌ನಲ್ಲಿ, ಪಾಕಿಸ್ತಾನ ತಂಡವು ಭಾರತದಲ್ಲಿ ಎಲ್ಲಾ ಪಂದ್ಯಗಳನ್ನು ಆಡಿತು. ಇಡೀ ಪಂದ್ಯಾವಳಿಯಲ್ಲಿ ಅವರಿಗೆ ಯಾವುದೇ ಸಮಸ್ಯೆ ಆಗಲಿಲ್ಲ. ಹೀಗಾಗಿ ಪಾಕಿಸ್ತಾನ ತಂಡ ಭಾರತಕ್ಕೆ ಬರಲೇಬೇಕು ಎಂದು ಬಿಸಿಸಿಐ ಹೇಳಿದೆ ಎಂದು ವರದಿಯಾಗಿದೆ.

# ಹತ್ತೇ ಹತ್ತು ನಿಮಿಷದಲ್ಲಿ 2.63 ಕೋಟಿಗೆ ಡಾನ್ ಬ್ರಾಡ್ಮನ್ ಕ್ಯಾಪ್ ಹರಾಜು..!

ಕ್ರಿಕೆಟ್ ಅಂಗಳದಲ್ಲಿ ದಿ ಡಾನ್ ಎಂದು ಕರೆಸಿಕೊಂಡಿದ್ದ ಬ್ರಾಡ್ಮನ್ 2001ರಲ್ಲಿ ತಮ್ಮ 92ನೇ ವಯಸ್ಸಿನಲ್ಲಿ ನಿಧನರಾದರು. ಆದರೆ 20 ವರ್ಷಗಳ ತಮ್ಮ ಟೆಸ್ಟ್ ಕೆರಿಯರ್‌ನಲ್ಲಿ ನಿರ್ಮಿಸಿದ ದಾಖಲೆಗಳು ಇನ್ನೂ ಸಹ ಅವರನ್ನು ಅಜರಾಮರರನ್ನಾಗಿರಿಸಿದೆ.

ಕ್ರಿಕೆಟ್ ದಂತಕಥೆ ಡಾನ್ ಬ್ರಾಡ್ಮನ್ ಅವರ ಬ್ಯಾಗಿ ಕ್ಯಾಪ್ ಹತ್ತೇ ಹತ್ತು ನಿಮಿಷಗಳಲ್ಲಿ ಬರೋಬ್ಬರಿ 2.63 ಕೋಟಿ ರೂ.ಗೆ ಹರಾಜಾಗಿದೆ. ಸಿಡ್ನಿಯಲ್ಲಿ ನಡೆದ ಹರಾಜು ಕಾರ್ಯಕ್ರಮದಲ್ಲಿ 1947-48ರ ಭಾರತ ವಿರುದ್ಧದ ಸರಣಿಯಲ್ಲಿ ಆಸ್ಟ್ರೇಲಿಯಾದ ಮಾಜಿ ಆಟಗಾರ ಡಾನ್ ಬ್ರಾಡ್ಮನ್ ಧರಿಸಿದ್ದ ಪ್ರಸಿದ್ಧ 'ಬ್ಯಾಗಿ ಗ್ರೀನ್' ಹರಾಜಿಗಿಡಲಾಗಿತ್ತು.

ಖ್ಯಾತ ಕ್ರಿಕೆಟಿಗನ ಈ ಅಪರೂಪದ ಕ್ಯಾಪ್ ಹರಾಜಿನಲ್ಲಿ 10 ನಿಮಿಷಗಳಿಗಿಂತ ಕಡಿಮೆ ಅವಧಿಯಲ್ಲಿ 479,700 (ರೂ. 2.63 ಕೋಟಿ) ಗೆ ಮಾರಾಟವಾಗಿದೆ. ಇದೇ ಕ್ಯಾಪ್ ಧರಿಸಿ ಬ್ರಾಡ್ಮನ್ ಕೇವಲ 6 ಇನ್ನಿಂಗ್ಸ್‌ಗಳಲ್ಲಿ 178.75 ಸರಾಸರಿಯಲ್ಲಿ 715 ರನ್‌ಗಳಿಸಿದ್ದರು. ಇದರಲ್ಲಿ ಮೂರು ಶತಕ ಹಾಗೂ ಒಂದು ದ್ವಿಶತಕವೂ ಸೇರಿದೆ. ಫಾಕ್ಸ್ ಸ್ಪೋರ್ಟ್ಸ್ ವರದಿಯ ಪ್ರಕಾರ, ಈ ವಿಶಿಷ್ಟ ಕ್ಯಾಪ್ ಅನ್ನು ಸ್ವತಃ ಬ್ರಾಡ್ಮನ್ ಅವರು ಭಾರತೀಯ ಟೂರ್ ಮ್ಯಾನೇಜರ್ ಪಂಕಜ್ ''ಪೀಟರ್'' ಕುಮಾರ್ ಗುಪ್ತಾ ಅವರಿಗೆ ಉಡುಗೊರೆಯಾಗಿ ನೀಡಿದ್ದರು. ಈ ಕ್ಯಾಪ್ ಅನ್ನು ಬೊನ್ಹಾಮ್ಸ್ ಹರಾಜಿನಲ್ಲಿಡಲಾಗಿತ್ತು. ಇದೀಗ 2.63 ಕೋಟಿ ರೂ.ಗೆ ಮಾರಾಟವಾಗುವ ಮೂಲಕ ಕ್ರಿಕೆಟ್ ಇತಿಹಾಸದಲ್ಲೇ ದುಬಾರಿ ಮೊತ್ತಕ್ಕೆ ಹರಾಜಾದ ಕ್ರಿಕೆಟಿಗನ ವಸ್ತು ಎನಿಸಿಕೊಂಡಿದೆ.



ಅಂದಹಾಗೆ ಡಾನ್ ಬ್ರಾಡ್ಮನ್ ಕ್ರಿಕೆಟ್ ಇತಿಹಾಸ ಕಂಡಂತಹ ಸರ್ವಶ್ರೇಷ್ಠ ಬ್ಯಾಟ್ಸ್‌ಮನ್. ಆಸ್ಟ್ರೇಲಿಯಾ ಪರ 52 ಟೆಸ್ಟ್‌ಗಳನ್ನಾಡಿದ್ದ ಬ್ರಾಡ್ಮನ್, 2 ತ್ರಿಶತಕ, 12 ದ್ವಿಶತಕ, 29 ಶತಕಗಳು ಮತ್ತು 13 ಅರ್ಧ ಶತಕಗಳೊಂದಿಗೆ 6996 ರನ್‌ಗಳನ್ನು ಗಳಿಸಿದ್ದಾರೆ. ಅಂದರೆ ಅವರ ಬ್ಯಾಟಿಂಗ್ ಸರಾಸರಿ 99.94 ಇತ್ತು. ಇದು ಕ್ರಿಕೆಟ್ ಇತಿಹಾಸದಲ್ಲೇ ಬ್ಯಾಟರ್‌ರೊಬ್ಬರ ಗರಿಷ್ಠ ರನ್ ಸರಾಸರಿ ಎಂಬುದು ವಿಶೇಷ. ಕ್ರಿಕೆಟ್ ಅಂಗಳದಲ್ಲಿ ''ದಿ ಡಾನ್'' ಎಂದು ಕರೆಸಿಕೊಂಡಿದ್ದ ಬ್ರಾಡ್ಮನ್ 2001ರಲ್ಲಿ ತಮ್ಮ 92ನೇ ವಯಸ್ಸಿನಲ್ಲಿ ನಿಧನರಾದರು. ಆದರೆ 20 ವರ್ಷಗಳ ತಮ್ಮ ಟೆಸ್ಟ್ ಕೆರಿಯರ್‌ನಲ್ಲಿ ನಿರ್ಮಿಸಿದ ದಾಖಲೆಗಳು ಇನ್ನೂ ಸಹ ಅವರನ್ನು ಅಜರಾಮರರನ್ನಾಗಿ ರಿಸಿದೆ.

# ವೈಭವ್- ಆಯುಷ್ ಸ್ಫೋಟಕ ಬ್ಯಾಟಿಂಗ್



ಅಂಡರ್-19 ಏಷ್ಯಾಕಪ್‌ನಲ್ಲಿ ಭಾರತ ತಂಡ ಯುಎಇ ವಿರುದ್ಧ ಅದ್ಭುತ ಗೆಲುವು ಸಾಧಿಸಿದೆ. 138 ರನ್‌ಗಳ ಗುರಿ ಬೆನ್ನಟ್ಟಿದ ಭಾರತದ ಪರ ಆರಂಭಿಕರಾದ ವೈಭವ್ ಸೂರ್ಯವಂಶಿ (76★) ಮತ್ತು ಆಯುಷ್ ಮ್ಹಾತ್ರೆ (67★) ಅದ್ಭುತ ಬ್ಯಾಟಿಂಗ್ ಪ್ರದರ್ಶಿಸಿದರು. ಹೀಗಾಗಿ ಭಾರತ ಕೇವಲ 16 ಓವರ್‌ಗಳಲ್ಲಿ ಗುರಿ ತಲುಪಿತು. ಈ ಗೆಲುವಿನೊಂದಿಗೆ ಭಾರತ ಸೆಮಿಫೈನಲ್ ಪ್ರವೇಶಿಸಿದೆ.

ಅಂಡರ್-19 ಏಷ್ಯಾಕಪ್‌ನಲ್ಲಿ ತನ್ನ ಚೊಚ್ಚಲ ಪಂದ್ಯದಲ್ಲೇ ಪಾಕಿಸ್ತಾನ ವಿರುದ್ಧ ಸೋತು ಆಘಾತಕ್ಕೊಳಗಾಗಿದ್ದ ಟೀಂ ಇಂಡಿಯಾ ಸತತ ಎರಡು ಪಂದ್ಯಗಳನ್ನು ಗೆದ್ದು ಸೆಮಿ ಫೈನಲ್ ಗೇರುವಲ್ಲಿ ಯಶಸ್ವಿಯಾಗಿದೆ. ತನ್ನ ಎರಡನೇ ಪಂದ್ಯದಲ್ಲಿ ಜಪಾನ್ ತಂಡವನ್ನು ಸೋಲಿಸಿದ್ದ ಭಾರತ ಯುವ ಪಡೆ ಈಗ ಯುಎಇ ತಂಡವನ್ನು ಏಕಪಕ್ಷೀಯ ರೀತಿಯಲ್ಲಿ ಸೋಲಿಸಿತು. ಕೇವಲ 138 ರನ್‌ಗಳ ಗುರಿ ಬೆನ್ನತ್ತಿದ ಟೀಂ ಇಂಡಿಯಾ 50 ಓವರ್‌ಗಳ ಪಂದ್ಯವನ್ನು ಕೇವಲ 16 ಓವರ್‌ಗಳಲ್ಲಿ ಗೆದ್ದುಕೊಂಡಿತು. ಭಾರತದ ಪರ ಆರಂಭಿಕ ವೈಭವ್ ಸೂರ್ಯವಂಶಿ 46 ಎಸೆತಗಳಲ್ಲಿ ಅಜೇಯ 76 ರನ್ ಗಳಿಸಿದರೆ, ಆಯುಷ್ ಮ್ಹಾತ್ರೆ 51 ಎಸೆತಗಳಲ್ಲಿ 67 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು.

**ಟೀಂ ಇಂಡಿಯಾಗೆ ಎರಡನೇ ಗೆಲುವು**

ಅಂಡರ್-19 ಏಷ್ಯಾಕಪ್‌ನಲ್ಲಿ ಟೀಂ ಇಂಡಿಯಾಗೆ ಇದು ಎರಡನೇ ಗೆಲುವು. ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ವಿರುದ್ಧ ಸೋತಿದ್ದ ಭಾರತ, ಇದೀಗ ಜಪಾನ್ ಮತ್ತು ಈಗ ಯುಎಇ ತಂಡವನ್ನು ಸೋಲಿಸಿದೆ. ಈ ಗೆಲುವಿನೊಂದಿಗೆ ಟೀಂ ಇಂಡಿಯಾ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ತಲುಪಿದೆ.

# ಮುಂದುವರೆದ ಬುಮ್ರಾ ಪಾರುಪತ್ಯ!



ಆಸ್ಟ್ರೇಲಿಯಾ ವಿರುದ್ಧ ಪರ್ತ್‌ನಲ್ಲಿ ಶತಕ ಸಿಡಿಸಿ ಟೆಸ್ಟ್ ಬ್ಯಾಟ್ಸ್‌ಮನ್ ಶ್ರೇಯಾಂಕದಲ್ಲಿ 2ನೇ ಸ್ಥಾನಕ್ಕೆ ಏರಿದ್ದ ಯಶಸ್ವಿ ಒಂದು ವಾರದಲ್ಲಿಯೇ 4ನೇ ಸ್ಥಾನಕ್ಕೆ ಕುಸಿದಿದ್ದಾರೆ. ಹ್ಯಾರಿ ಬ್ರೂಕ್ ಅವರ ಉತ್ತಮ ಪ್ರದರ್ಶನದಿಂದಾಗಿ ಜೈಸ್ವಾಲ್ ತಮ್ಮ ಸ್ಥಾನವನ್ನು ಕಳೆದುಕೊಂಡಿದ್ದಾರೆ. ಆದರೆ ಬೌಲರ್‌ಗಳ ರ್ಯಾಂಕಿಂಗ್‌ನಲ್ಲಿ ತಮ್ಮ ಪಾರುಪತ್ಯ ಮುಂದುವರೆಸಿರುವ ಜಸ್ಪ್ರೀತ್ ಬುಮ್ರಾ ಮೊದಲ ಸ್ಥಾನದಲ್ಲೇ ಮುಂದುವರೆದಿದ್ದಾರೆ. ಆಸ್ಟ್ರೇಲಿಯಾ ವಿರುದ್ಧ ಪರ್ತ್ ಮೈದಾನದಲ್ಲಿ ಸ್ಮರಣೀಯ ಶತಕ ಸಿಡಿಸುವುದರ ಜೊತೆಗೆ ಐಸಿಸಿ ಟೆಸ್ಟ್ ರ್ಯಾಂಕಿಂಗ್‌ನಲ್ಲಿ ಭರ್ಜರಿ ಮುಂಬಡ್ತಿ ಪಡೆದಿದ್ದ ಭಾರತದ ಯುವ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್, ಕಳೆದ ವಾರವಷ್ಟೇ ಬ್ಯಾಟ್ಸ್‌ಮನ್‌ಗಳ ರ್ಯಾಂಕಿಂಗ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದರು. ಆದರೀಗ ಒಂದೇ ವಾರದಲ್ಲಿ ಜೈಸ್ವಾಲ್ ಆ ಸ್ಥಾನವನ್ನು ಕಳೆದುಕೊಂಡಿದ್ದಾರೆ. ಪರ್ತ್ ಟೆಸ್ಟ್‌ನ ಎರಡನೇ ಇನ್ನಿಂಗ್ಸ್‌ನಲ್ಲಿ 161 ರನ್‌ಗಳ ಇನ್ನಿಂಗ್ಸ್ ಕಟ್ಟಿದ್ದ ಯಶಸ್ವಿ ಜೈಸ್ವಾಲ್, ಐಸಿಸಿ ಟೆಸ್ಟ್ ರ್ಯಾಂಕಿಂಗ್‌ನಲ್ಲಿ 2 ಸ್ಥಾನ ಮೇಲೇರಿ 2ನೇ ಸ್ಥಾನವನ್ನು ಆಕ್ರಮಿಸಿಕೊಂಡಿದ್ದರು. ಆದರೀಗ ಮತ್ತೆ ತಮ್ಮ ಹಳೆಯ ಸ್ಥಾನಕ್ಕೆ ಅಂದರೆ 4ನೇ ಸ್ಥಾನಕ್ಕೆ ಕುಸಿತ ಕಂಡಿದ್ದಾರೆ. ವಾಸ್ತವವಾಗಿ ಡಿಸೆಂಬರ್ 1 ರಂದು ಮುಕ್ತಾಯಗೊಂಡ ನ್ಯೂಜಿಲೆಂಡ್ ಹಾಗೂ ಇಂಗ್ಲೆಂಡ್ ನಡುವಿನ ಮೊದಲ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ 171 ರನ್‌ಗಳ ಇನ್ನಿಂಗ್ಸ್ ಕಟ್ಟಿದ್ದರು. ಹೀಗಾಗಿ ಇದರ ಲಾಭವನ್ನು ಪಡೆದಿರುವ ಬ್ರೂಕ್ ಮತ್ತೊಮ್ಮೆ 2ನೇ ಸ್ಥಾನಕ್ಕೇರುವಲ್ಲಿ ಯಶಸ್ವಿಯಾಗಿದ್ದಾರೆ. ವಾರದ ಹಿಂದೆ ಬ್ರೂಕ್ ಅವರ ಸ್ಥಾನವನ್ನು ಜೈಸ್ವಾಲ್ ಕಿತ್ತುಕೊಂಡಿದ್ದರೆ, ಇದೀಗ ಜೈಸ್ವಾಲ್ ಸ್ಥಾನವನ್ನು ಬ್ರೂಕ್ ವಶಪಡಿಸಿಕೊಂಡಿದ್ದಾರೆ. ಕೇನ್ ವಿಲಿಯಮ್ಸನ್ ಕೂಡ ಜೈಸ್ವಾಲ್‌ರನ್ನು ಹಿಂದಿಕ್ಕಿದ್ದು ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966